connection with a motion once a ruling is given. If 'sampradaya' has got to be heard by us, the House has got a right to hear what 'sampradaya' I also have got to say.

ತಾವು ಸಂಪ್ರದಾಯದ ವಿಷಯವನ್ನು ಹೇಳಿದಿರಿ, ಅದರಮೇಲೆ ನಾನು ಮಾತನಾಡದೆ ಸುಮ್ಮನೆ ಕುಳಿತುಕೊಂಡೆ. ಈಗ ಅವರಿಗೆ ಸಂಪ್ರದಾಯದ ವಿಷಯ ಹೇಳುವುದಕ್ಕೆ ಅವಕಾಶಕೊಟ್ಟರೆ, ನಾನೂ ಹೇಳಬೇಕಾಗುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅಧ್ಯಕ್ಷರ ರೂಲಿಂಗ್ challenge ಮಾಡುವುದಕ್ಕಾಗಿ ನಾನು ಈ ಸಭೆಗೆ ಬಂದಿಲ್ಲ; ಸಭೆಯ ಸದಸ್ಯನಾಗಿ ಅಧ್ಯಕ್ಷರ ರೂಲಿಂಗನ್ನು ಪರಿಪಾಲಿಸಬೇಕೆಂಬ ಜ್ಞಾನ ನನಗಿದೆ. ನಾನು ಈ ಸಂಪ್ರದಾಯವನ್ನು ಪಾಲಿಸಿ, ಇದಕ್ಕೆ ವಿರೋಧವಾಗಿ ನಡೆಯದೇ ಇರುವ ಮನುಷ್ಯನೆಂಬ ನಂಬಿಕೆಯಿಂದ ನನ್ನನ್ನು ಸದಸ್ಯನಾಗಿ ಚುನಾಯಿಸಿ ಇಲ್ಲಿಗೆ ಕಳುಹಿಸಿದ್ದಾರೆ. ಇದನ್ನು ಅವರು ತಿಳಿದುಕೊಳ್ಳಬೇಕು. ಎರಡೇ ಮಾತುಗಳಲ್ಲಿ ಹೇಳುವುದಾದರೆ, ಈ ಸಭೆಯಲ್ಲಿ ನಾವು ಹಿಂದಿನಿಂದಲೂ ಯಾವ ಪದ್ಧತಿಯನ್ನನುಸರಿಸುತ್ತಿದ್ದೇವೆಂದರೆ, ನಮ್ಮ ಹಣಕಾಸಿನ ಸಚಿವರು ಬಡ್ಜೆಟ್ಟನ್ನು ನಮ್ಮ ಮುಂದೆ ಮಂಡಿಸುವವರೆಗೂ ಆ ಬಡ್ಜೆಟ್ಟಿಗೆ ಸಂಬಂಧಪಟ್ಟಂತೆ ಮುಂದಿನ ವರ್ಷದ ಆಯವ್ಯಯದ ವಿಚಾರದಲ್ಲಿ ಯಾವ ಮಂತ್ರಿಗಳೇ ಆಗಲಿ ಅಂಕಿಅಂಶಗಳನ್ನು ಯಾವ ಸಂದರ್ಭದಲ್ಲಿಯೂ ಕೊಡುವ ಪದ್ಧತಿ ಇರಲಿಲ್ಲ . . . .

ಅಧ್ಯಕ್ಷರು.—ಹಾಗಾದರೆ ಈ ಪದ್ಧತಿ ನನಗೆ ಗೊತ್ತಿರಲಿಲ್ಲವೆ? ತಾವು ಈ ಮನೆಯ ಕಾಲಹರಣವನ್ನು ಮಾಡುತ್ತಿದ್ದೀರಿ; ಇನ್ನೇನೂ ಇಲ್ಲ. ನಾನು ಮತ್ತೊಮ್ಮೆ ಹೇಳುತ್ತೇನೆ. ತಾವು Breach of Privilege Motion ಎಂದು ಕೊಟ್ಟಿದ್ದೀರಿ. Breach of privilege ಆಗಿಲ್ಲವೆಂದು ನಾನು ಹೇಳುತ್ತಿದ್ದೇನೆ. ಇದರಲ್ಲಿ ಯಾವ ಸಂಪ್ರದಾಯವೂ ಇಲ್ಲ. ಸಂಪ್ರದಾಯವನ್ನು ನಾನು ನೋಡಿಕೊಳ್ಳುತ್ತಿದ್ದೇನೆ. ಇದು Official Secrets Act ಪ್ರಕಾರ ತಪ್ಪಾಗಬಹುದೋ ಏನೋ ಎಂದು ನಾನು ಹೇಳಿದ್ದೇನೆ. ಈ ದೃಷ್ಟಿಯಿಂದ ಇದನ್ನು ಪರೀಕ್ಷೆಮಾಡಬಹುದಾಗಿದೆ. It has to be investigated. I cannot say on the spot. So far as my opinion is concerned, I keep it as an open book. The only point is that the Hon'ble Member should not take the time of the House in this way. I request the Hon'ble Member Sri Puttaramiya that once the ruling has been given that it is not a breach of privilege, the Hon'ble Member will note this thing and respect the ruling.

Sri B. K. PUTTARAMIYA.—I respect the ruling. Meanwhile I want to say . . . .

Mr. SPEAKER.—No. I cannot allow him to proceed further. The Hon'ble Member may resume his seat. It is not fair to take the time of the House.

## BUDGET FOR 1957-58 DEMANDS FOR GRANTS.

Sri M. C. NARASIMHAN (Kolar Gold Fields).—I made a representation about the procedure of discussion on the General Administration Grant. Yesterday it was suggested that discussion would not proceed on the basis of cut motions and that there would be general discussion. There is one difficulty in this. In the other procedure we would be getting slightly more time.

Mr. SPEAKER.—You are not correct. If the cut motions are allowed to be moved, the Hon'ble Members will have two minutes each.

Sri M.C. NARASIMHAN.—In respect of each cut motion, five minutes should be allowed.

Mr. SPEAKER.—For each cut motion ?

Sri M. C. NARASIMHAN.—I think so. The difficulty is, if one has to speak about the entire thing within 5 or 7 minutes, it becomes difficult for some of the members.

Mr. SPEAKER.—If the Hon'ble Member wants to move cut motions, I have no objection but I won't give him more than two minutes. He may choose either of the two. If there are 100 cut motions, then each will get two minutes. Let him profit by my own experience which covers over a period of eleven years.

---

## DEMAND No. 13—GENERAL ADMINISTRATION

### 25. General Administration (except the sub-major heads B and C)

Mr. SPEAKER.—Motion moved :

"That a sum not exceeding Rs. 2,20,52,900 be granted to the Government to defray the charges which will come in course of payment during the year ending 31st day of March 1958, in respect of 'General Administration (Except the sub-major heads B and C)'."

## DEMAND No. 14—GENERAL ADMINISTRATION (STATE LEGISLATURE AND ELECTION CHARGES).

### 25. General Administration (B. Parliament and the State Legislature and C. Elections).

Mr. SPEAKER.—Motion moved :

"That a sum not exceeding Rs. 37,88,300 be granted to the Government to defray the charges which will come in course of payment during the year ending 31st day of March 1958, in respect of 'General Administration—(State Legislature and Election Charges)'."

*ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೆ, ಮೈಸೂರು ಸಂಸ್ಥಾನದ ಆಡಳಿತ ವ್ಯವಸ್ಥೆಯ ಸಂಬಂಧದಲ್ಲಿ 2,20,52,900 ರೂಪಾಯಿಗಳನ್ನು ಮೀಸಲಾಗಿಡತಕ್ಕ ವಿಚಾರದಲ್ಲಿ ಈಗ ನಾವು ಕೆಲವು ಅಭಿಪ್ರಾಯಗಳನ್ನು ಕೊಡಬೇಕಾಗಿದೆ. ಇದರಲ್ಲಿ ನಮ್ಮ ಮಂತ್ರಿಗಳ ಸಂಬಳದ ಬಗ್ಗೆ 5,52,600 ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದಾರೆ.

3-30 P.M.

ಈ ವಿಚಾರಗಳಲ್ಲಿ ನಾವು ಒಂದೊಂದನ್ನು ನೋಡುತ್ತಾ ಹೋದರೆ ಆಫೀಸರುಗಳ ಸಂಬಳಸಾರಿಗೆಗೆ 1,40,400 ರೂಪಾಯಿಗಳು ಖರ್ಚಾಗಬೇಕಾಗುತ್ತದೆ, ಅಫಿಷಿಯಲ್ ರೆಸಿಡೆನ್ಸ್‌ಗೆ 2,600 ರೂಪಾಯಿಗಳನ್ನು ಕೊಡಬೇಕು, upkeep repairs ಸಿಬ್ಬಂದಿ, ಮೋಟಾರು ಕಾರುಗಳು, ಗ್ಯಾರೇಜುಗಳು ವಗೈರೆಗೆ 14,900 ರೂಪಾಯಿಗಳನ್ನು ಕೊಡಬೇಕು, ಅಲೋಯನ್ಸಸ್ ಮತ್ತು ಆನರೇರಿಯಗಳಿಗೆ, ಟಿ. ಎ.ಗೆ 85 ಸಾವಿರ ರೂಪಾಯಿಗಳು, ಫಿಕ್ಸೆಡ್ ಟಿ.ಎ.ಗೆ 33,600 ರೂಪಾಯಿಗಳು, ಹೀಗೆ 5,52,600 ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಡಿಮ್ಯಾಂಡ್ ಮನವಿಯನ್ನಿಟ್ಟಿದ್ದಾರೆ.

ಈಗ ನಮ್ಮ ಮೈಸೂರು ಸಂಸ್ಥಾನದಲ್ಲಿ ಹೆಚ್ಚು ಜನ ಮಂತ್ರಿಗಳನ್ನು ನೇಮಕಮಾಡಿದ್ದಾರೆಂದು ನನಗೆ ನ್ನಿಸುತ್ತದೆ. ಮೈಸೂರು ಸಂಸ್ಥಾನಕ್ಕೆ ಎಷ್ಟು ಜನ ಮಂತ್ರಿಗಳು ಬೇಕಾಗಿತ್ತು, ಮೊದಲೆಷ್ಟು ಜನರಿದ್ದರು, ಈಗೆಷ್ಟು ಜನರಿಗೆ ಕೆಲಸವಿದೆ ಎಂಬುದನ್ನು ಸರಿಯಾಗಿ ತೀರ್ಮಾನಮಾಡಿ ಅದಕ್ಕನುಗುಣವಾಗತಕ್ಕಷ್ಟು ಮಂತ್ರಿಗಳನ್ನು ಮಾತ್ರ ತೆಗೆದುಕೊಳ್ಳಬೇಕಾಗಿತ್ತು. ಇದನ್ನು ನಾನು ಬಹಳ ನಮ್ರತೆಯಿಂದ ಸೂಚಿಸುತ್ತೇನೆ. ನನಗೆ ತಿಳಿದ ಮಟ್ಟಿಗೆ ಪರಿಶೀಲಿಸಿ ನೋಡಿದರೆ ಈಗ ಸಾಕಷ್ಟು ಕೆಲಸ ನಡೆಯುತ್ತಿಲ್ಲ. ಪ್ರತಿನಿತ್ಯ ಒಬ್ಬ ಮಂತ್ರಿಗಳು ಎಷ್ಟರಮಟ್ಟಿಗೆ ಫೈಲು ನೋಡಿ ಆರ್ಡರು ಪಾಸು ಮಾಡುತ್ತಾರೆಂಬುದನ್ನು ಕೂಡ ನಾವು ಆಲೋಚಿಸಬೇಕಾಗಿದೆ, ಕೆಲವಾರು ಸಂದರ್ಭಗಳಲ್ಲಿ ವಾರಗಟ್ಟಲೆ ಮಂತ್ರಿಗಳು ಹೆಡ್‌ಕ್ವಾರ್ಟರ್ಸ್‌ನಲ್ಲಿದ್ದರೂ ಸಹ ಒಂದು ಆರ್ಡರನ್ನು ಕೂಡ ಪಾಸುಮಾಡದಿರುವ ಅಥವಾ ಒಂದು ಪೇಪರನ್ನೂ ನೋಡದಿರುವ ಸಂದರ್ಭಗಳು ಬೇಕಾದಷ್ಟು ಇವೆಯೆಂಬುದು ನಮಗೆ ತಿಳಿದುಬಂದಿದೆ.

ಶ್ರೀ ಆರ್. ಚೆನ್ನಿಗರಾಮಯ್ಯ (ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ಖಾಯಿಲೆ ಬಿದ್ದಾಗ.

ಶ್ರೀ ಕೆ. ಕೆಂಚಪ್ಪ.—ಆಫೀಸಿಗೆ ಹಾಜರಾದಾಗಲೂ ಕೂಡ ಪೇಪರ್ ನೋಡದಿರುವ ಸಂದರ್ಭಗಳಿವೆ. ಮಂತ್ರಿಗಳಾದ ಮೇಲೆ ಸರಿಯಾಗಿ ಅವರ ಕೆಲಸಮಾಡುತ್ತಾರೆಂಬ ಭಾವನೆಯಿತ್ತು. ಆದರೆ ಆ ರೀತಿಮಾಡುತ್ತಿರುವಂತೆ ಕಾಣಲಿಲ್ಲ. ತಮಗೆ ದೊರೆತಿರುವ ಮಂತ್ರಿಪದವಿಗೆಲ್ಲಿ ಚ್ಯುತಿ ಬಂದೀತೋ ಎಂದು ಅದನ್ನು ಕಾಪಾಡಿಕೊಳ್ಳುವುದಕ್ಕಾಗಿ ಬಹುಮತದ ಜನರನ್ನು ಸಮಾಧಾನಪಡಿಸುವುದಕ್ಕೆ ಬೇಕಾದ ಕೆಲಸಗಳನ್ನು ಮಾಡುವುದರಲ್ಲೇ, ಅದರ ಯೋಚನೆಯಲ್ಲೇ ಬಹಳ ಕಾಲ ಕಳೆಯುತ್ತಿರುವಂತೆ ಕಂಡುಬರುತ್ತಿದೆ. ಹಿಂದಿನಂತೆ ಎಲ್ಲಿ ಅವಿಶ್ವಾಸ ಸೂಚನೆ ಬರುವುದೋ ಎಂದು ಯೋಚಿಸಿ ಅದಕ್ಕವಕಾಶವಿಲ್ಲದಂತೆ ತಮ್ಮ ತಮ್ಮ ಸ್ಥಾನಗಳನ್ನು ಖಾಯಂ ಮಾಡಿಕೊಳ್ಳುವುದರಲ್ಲೇ ಬಹಳ ಕಾಲವನ್ನು ವಿನಿಯೋಗಿಸುತ್ತಿದ್ದಾರೆ. ಯಾವ ಹವ್ಯಾಸವನ್ನೂ ಇಟ್ಟುಕೊಳ್ಳದೆ ಮಂತ್ರಿಗಳು ದೇಶದ ಪ್ರಗತಿಗಾಗಿಯೇ ಯಾವಾಗಲೂ ತಮ್ಮ ಕಾಲವನ್ನು ವಿನಿಯೋಗಿಸುತ್ತಿರುವರೇ ಎಂದು ನೋಡಿದರೆ ಆ ಕಡೆ ಅಷ್ಟು ಮನಸ್ಸಿದ್ದಂತೆ ಕಾಣಲಿಲ್ಲ. ಅದರ ಬದಲು 24 ಗಂಟೆಗಳೂ ಯಾವಾಗಲೂ ತಮ್ಮ ಸ್ಥಾನ ಭದ್ರತೆ ಮಾಡಿಕೊಳ್ಳುವ ಹವ್ಯಾಸದಲ್ಲೇ ತೊಡಗಿರುವುದರಿಂದ ಈ ವಿಚಾರವನ್ನು ಆಲೋಚನೆ ಮಾಡಬೇಕಾಗಿ ಬಂದಿದೆ. ಈಗ ಇಲ್ಲಿ ಟಿ.ಎ., ಫಿಕ್ಸೆಡ್ ಟಿ.ಎ., ಎಚ್. ಪಿ. ಮತ್ತು ಡಿ.ಎ.ಗೆ ಹಣ ಒದಗಿಸಲಾಗಿದೆ. ಇದನ್ನು ನೋಡಿ ಬಹಳ ವ್ಯಸನದಿಂದ ಹೇಳುತ್ತಿದ್ದೇನೆ: ನಮ್ಮ ಮಂತ್ರಿಗಳ ಪ್ರವಾಸ ಕಾರ್ಯದ ಬಗ್ಗೆ ನನಗೂ ಸಹ ಒಂದು ಪಟ್ಟಿ ಬಂತು. ಆದರೆ ಅದರಲ್ಲಿ ಏನು ಕೆಲಸಮಾಡುತ್ತಾರೆ, ಯಾವ ಸ್ಥಳಕ್ಕೆ ಹೋಗುತ್ತಾರೆ ಎಂಬುದು ನಮೂದಾಗಿರಲಿಲ್ಲ, Inspection of Hospitals, etc. ಎಂದು ಮಾತ್ರ ಇತ್ತು. ಹೋಗಿ ಏನು ಮಾಡುತ್ತಾರೋ ದೇವರಿಗೇ ಗೊತ್ತಾಗಬೇಕು. ನಾನು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟಾಗಿದ್ದಾಗ ಮಂತ್ರಿಗಳ ಜೊತೆಯಲ್ಲಿ ಹೋಗಿದ್ದೆ. ಆದರೆ ಅವರು ಏನು ಮಾಡಿದ್ದೂ ಕಾಣಲಿಲ್ಲ. ನನಗೆ ಬಂದಿರುವ ಪಟ್ಟಿ ಈಗ ನನ್ನಲ್ಲಿದೆ; ಬೇಕಾದರೆ ನೋಡಬಹುದು. ನನಗೆ ಈಗ ಸ್ವಲ್ಪ ಕಾಲ ಮಾತ್ರವಿರುವುದರಿಂದ ಅದನ್ನು ಓದಲು ಸಾಧ್ಯವಿಲ್ಲ. ನಿನ್ನೆಯ ದಿವಸ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಸಾರ್ವಜನಿಕ ಹಿತದೃಷ್ಟಿಯಿಂದ ಬೇಕಾದ ಕೆಲಸ ಮಾಡಲು ಪ್ರವಾಸ ಮಾಡುವುದಾಗಿ ಅಪ್ಪಣೆ ಕೊಡಿಸಿದರು. ಹೇಳುವುದು ಸುಲಭ; ಸಾರ್ವಜನಿಕ ಹಿತದೃಷ್ಟಿಯಿಂದ ಹೋಗುತ್ತೇವೆ ಎಂದು ಎಲ್ಲರೂ ಹೇಳಬಹುದು. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ ಹಿಂದೆ ಕೆಲಸಮಾಡಲು ಸರ್ಕಾರದವರು ಮೂರು ವರ್ಷಗಳಿಗೊಂದು ಸಲ ಅಥವಾ ನಾಲ್ಕು ವರ್ಷಗಳಿಗೊಂದು ಸಲ ಪ್ರವಾಸ ಕಾರ್ಯಕ್ರಮವನ್ನು ನಿಗದಿ ಮಾಡಬೇಕೆಂದು ನಿಯಮವಿತ್ತು. ಅರ್ಜಿಗಳನ್ನು ಕೊಟ್ಟಿದ್ದರೆ ಆ ವಿಚಾರದಲ್ಲೇನು ಮಾಡಬೇಕೆಂದು ಯೋಚಿಸಿ ಸಾಧ್ಯವಾದರೆ ಇರುವ ಕಡೆಯೇ ಅದನ್ನು ಇತ್ಯರ್ಥ ಮಾಡುತ್ತಿದ್ದರು. ಸಾಧ್ಯವಿಲ್ಲದಿದ್ದರೆ ಸ್ಥಳಕ್ಕೆ ಹೋಗಬೇಕಾದ ಪ್ರಮೇಯ ಬಂದರೆ ಪ್ರವಾಸ ಹೋಗಲು ಮತ್ತು ಬೇಕಾದ ಕೆಲಸ ಮಾಡಿಕೊಡಲು ಹಣವಿದೆಯೆ, ಇಲ್ಲವೆ ಎಂಬುದನ್ನು ಕ್ಯಾಬಿನಟ್‌ನಲ್ಲಿ ಚರ್ಚಿಸಿ ಆಮೇಲೆ ಇಂಥ ಸ್ಥಳಗಳಿಗೆ ಹೋಗಬೇಕೆಂದು ಒಂದು ನಿಗದಿಯಾದ ಕಾರ್ಯಕ್ರಮ ಹಾಕುತ್ತಿದ್ದರು. ಈ ದಿವಸ

ಅದು ಇಲ್ಲ. ಅದು ಮಾಯವಾಗಿದೆ. ಯಾವ ಕೆಲಸಕ್ಕಾಗಿ ಹೋಗುತ್ತಾರೆಂಬುದೇ ಗೊತ್ತಾಗುವುದಿಲ್ಲ; ಒಂದೊಂದು ವೇಳೆ ಏನೂ ಕೆಲಸವಿಲ್ಲದೆ ಏಕಾಏಕಿ ಹೋಗುವುದೂ ಉಂಟು. ಮಂತ್ರಿಗಳು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕಾದರೆ ಅನಿರೀಕ್ಷಿತ ಭೇಟಿ ಕೊಡುವುದು ಅತ್ಯಾವಶ್ಯಕವಾಗಿರಬಹುದು. ಆದರೆ ಹಾಗೆ ಹೋಗುವುದಿಲ್ಲ. ಆದ್ದರಿಂದ ನಾನು ಒಂದೇ ಒಂದು ನಿಗದಿಯಾದ ಪ್ರಶ್ನೆಯನ್ನು ಕೇಳುತ್ತಿದ್ದೇನೆ: ಅದೇನೆಂದರೆ, ಮಂತ್ರಿಮಂಡಲದ ಜಂಟೀ ಜವಾಬ್ದಾರಿಯಿರುವಾಗ, ಪ್ರತಿಯೊಬ್ಬ ಮಂತ್ರಿಗಳಿಗೂ ಜವಾಬ್ದಾರಿಯಿರುತ್ತದೆ; ಹಾಗಿರುವಾಗ ಏಕ ಕಾಲದಲ್ಲಿ ಮೂರು ನಾಲ್ಕು ಜನ ಮಂತ್ರಿಗಳು ಒಂದೇ ಸ್ಥಳಕ್ಕೆ ಹೋಗಿ ಇನ್ಸ್ಪೆಕ್ಷನ್ ಮಾಡಿ ಟಿ.ಎ. ತೆಗೆದುಕೊಳ್ಳುವುದು ದೇಶದಲ್ಲಿ ಏನೋ ಒಂದು ರೀತಿಯ ಭಾವನೆಯುಂಟಾಗುವುದಕ್ಕೆ ಎಡೆಕೊಟ್ಟಿದೆ. ಒಂದೇ ಸ್ಥಳಕ್ಕೆ ಒಂದೇ ಕಾಲದಲ್ಲಿ ಇಬ್ಬರು ಮೂವರು ಮಂತ್ರಿಗಳೇಕೆ ಹೋಗಬೇಕು? ಒಬ್ಬ ಮಂತ್ರಿಗಳು ಹೋದರೆ ಸಾಲದೆ? ಇದು ಸರಿಯಾದ ವಿಧಾನವೆ? ಹಣವೆಷ್ಟು ಖರ್ಚು? ಬೆಳಗ್ಗೆ ನೋಟೀಸ್ ಕಳುಹಿಸಿ ಸಾಯಂಕಾಲ ಹೋಗುವ ಪ್ರವಾಸವಾದರೂ ಏನು? ಹಾಗೆ ಮಾಡುವುದು ಸಾಧುವೆ? ಇದು ಒಂದು ನಿಗದಿಯಾದ ಕ್ರಮವಲ್ಲ. ಈ ಸಂಬಂಧವಾಗಿ ಒಂದು ಪ್ರಶ್ನೆ ಹಾಕಿದರೂ ಸಹ ಅದಕ್ಕೂ ಸರಿಯಾದ ಉತ್ತರ ದೊರೆಯಲಿಲ್ಲ. ದೇಶದ ಹಿತದೃಷ್ಟಿಯಿಂದ ಸಾರ್ವಜನಿಕ ಅಭಿವೃದ್ಧಿ ಕಾರ್ಯಗಳಿಗಾಗಿ ಹೋಗುತ್ತೇವೆಂದು ಹೇಳುತ್ತಾರೆ. ಆದರೆ ಹೀಗೆ ಮಾಡುವುದರಿಂದ ಸಾಕಷ್ಟು ಸಹಾಯ. ವಾಗುವುದಿಲ್ಲ. ಇನ್ನು ಮುಂದಾದರೂ ತಾವುಗಳೆಲ್ಲರೂ ಪ್ರವಾಸ ಕಾರ್ಯಕ್ರಮವನ್ನು ಸರಿಯಾಗಿ ನಿಗದಿಮಾಡಿ ಅದರ ಪ್ರಕಾರ ಪ್ರವಾಸ ಕೈಕೊಂಡು ಒಂದು ಭದ್ರವಾದ ಸರ್ಕಾರವಿರುವಂತೆ ಮಾಡಿ ರಾಜ್ಯಭಾರ ನಡೆಸಬೇಕು. "ಲೀಚ್ ಲೈಕ್" ಎಂದು ಇಂಗ್ಲೀಷಿನಲ್ಲಿ ಹೇಳುವ ಹಾಗೆ ಹಿಡಿದುಕೊಂಡಿರುವುದನ್ನು ಬಿಡಬಾರದೆಂದು ಅದನ್ನೇ ಯೋಚನೆ ಮಾಡುವ ಹವ್ಯಾಸವಿರಬಾರದು. ಮಹಾತ್ಮಾ ಗಾಂಧಿ ಅವರ ಶಿಷ್ಯರೆಂದು ಹೇಳಿಕೊಳ್ಳುತ್ತಿದ್ದೇವೆ. ಅದಕ್ಕೆ ತಕ್ಕಂತೆ ಅವರ ಮಾರ್ಗದರ್ಶನ, ತ್ಯಾಗ, ಬಲಿದಾನ, ಕಷ್ಟ, ಸೇವೆ, ಸತ್ಯ, ಅಹಿಂಸೆ ಈ ದೃಷ್ಟಿಯಿಂದ ಇವೆಲ್ಲವುಗಳ ಆತ್ಮ ಪರಿಶೋಧನೆ ಮಾಡಿಕೊಳ್ಳಬೇಕಾಗಿದೆ. ನಿಜವಾಗಿಯೂ ಈಗ ಮಂತ್ರಿಗಳಾಗಿರುವವರು ದೇಶಸೇವೆಮಾಡುತ್ತಿದ್ದೇವೆಯೆ ಎಂದು ಪರಿಶೋಧನೆಮಾಡಿಕೊಂಡು ನೋಡಬೇಕು. ಯಾವಾಗಲೂ ತಮ್ಮ ಸ್ಥಾನಮಾನಗಳನ್ನು ಭದ್ರಮಾಡಿಕೊಳ್ಳಬೇಕೆಂಬ ಹವ್ಯಾಸವಿದ್ದರೆ ದೇಶಸೇವೆಯಾಗುವುದಿಲ್ಲ ಆದ್ದರಿಂದ ಇನ್ನು ಮುಂದಾದರೂ ಅವಿಶ್ವಾಸ ಸೂಚನೆಯ ಭಯದಿಂದ ಕೆಲಸಮಾಡುವುದು ಕೂಡದು; ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಬೇಕಾದದ್ದು ಅಗತ್ಯ. ಹಾಗೆಮಾಡಿ ಇದುವರೆಗೆ ಎಡೆಕೊಟ್ಟಿರುವ ಭಾವನೆಗಳನ್ನು ಹೋಗಲಾಡಿಸಬೇಕು. ನಮ್ಮ ದೇಶದ ಪ್ರಗತಿಯಾಗಲೆಂಬ ದೃಷ್ಟಿಯಿಂದ, ಹಾಗಾಗಿ ನಾವೆಲ್ಲರೂ ಸಂತೋಷಪಡೋಣ ಎಂಬ ದೃಷ್ಟಿಯಿಂದ ಇದನ್ನೆಲ್ಲಾ ನಾನು ಹೇಳುತ್ತಿದ್ದೇನೆ. ಈಗಲೂ ಮಂತ್ರಿಗಳು ವಿಚಾರಮಾಡುವುದು ಬಹಳ ಇದೆ. ಏಕೆಂದರೆ ಈಗಿರುವ ನ್ಯೂನತೆಗಳು ಅನೇಕವಾಗಿ ತಲೆ ಭಾರವಾಗಿವೆ. ಕಾರು ರಿಪೇರಿಗೆ, ಮನೆ ರಿಪೇರಿ ವಗೈರೆಗೆ ವಿಪರೀತ ಖರ್ಚಾಗುತ್ತಿದೆ. ಇದನ್ನು ಇಷ್ಟಕ್ಕೆ ಬಿಡುತ್ತೇನೆ; ಹೆಚ್ಚಾಗಿ ಹೇಳುವುದು ಬೇಡ. ಈ ವಿಚಾರದಲ್ಲಿ ನಾನು ಬೇಕಾದಷ್ಟು ಯೋಚನೆಮಾಡಿ ಕಡೆಯಲ್ಲಿ ಅಧಿಕಾರದಲ್ಲಿರುವುದಕ್ಕಿಂತ ಅಧಿಕಾರದ ಹೊರಗಿದ್ದು ಅದರ ರುಚಿ ನೋಡುವುದು ಚೆನ್ನ ಎಂದು ತೀರ್ಮಾನಕ್ಕೆ ಬಂದಿದ್ದೇನೆ. ಇಷ್ಟು ಹೇಳಿ ಮುಂದಕ್ಕೆ ಹೋಗುತ್ತೇನೆ. ಇನ್ನೊಂದು ವಿಚಾರ ಹೇಳುತ್ತೇನೆ.

ಈ ರಾಜ್ಯಭಾರದಲ್ಲಿ ಅತ್ಯಧಿಕವಾದ ಸಂಬಳ ಎಷ್ಟಿರಬೇಕು, ಅತಿಕಡಮೆ ಸಂಬಳ ಎಷ್ಟಿರಬೇಕು ಎನ್ನುವ ವಿಚಾರವನ್ನು ಹಿಂದಿನ ಅಸೆಂಬ್ಲಿಯಲ್ಲಿ ತೆಗೆದುಕೊಂಡಿದ್ದೆವು. ಯಾರಿಗೂ ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಸಂಬಳ ಇರಬಾರದು ಎಂಬುದನ್ನು ಒಂದು ಪೇಸ್ಟ್ರಕ್ಚರ್ ಕಮಿಟಿ ಮಾಡಿ ಅದರಲ್ಲಿ ವಿಚಾರ ಮಾಡಿ ತೀರ್ಮಾನಿಸಿದ್ದಾರೆ. ಇದನ್ನು ಇನ್ನೂ ಕಾರ್ಯಗತ ಮಾಡದಿರುವುದು ಬಹಳ ವ್ಯಸನಕರವಾದ ವಿಷಯವಾಗಿದೆ. ಅಸೆಂಬ್ಲಿಯಲ್ಲಿ ತೀರ್ಮಾನವಾದುದಕ್ಕೆ ವಿರುದ್ಧವಾಗಿ ಆಡಳಿತದಲ್ಲಿ ಇದರ ಬಗ್ಗೆ ಶಿಫಾರಸ್ಸು ಮಾಡಿದ್ದಾರೆ. ಅಸೆಂಬ್ಲಿಯಲ್ಲಿ ಯಾರಿಗೂ ಒಂದು ಸಾವಿರಕ್ಕಿಂತ ಜಾಸ್ತಿ ಸಂಬಳ ಇರಬಾರದು ಎಂದು ಹೇಳಿದ್ದರೂ ಒಂದು ಸಾವಿರ ರೂಪಾಯಿ ಸಂಬಳಕ್ಕೆ ಮೇಲ್ಪಟ್ಟು ಬರತಕ್ಕ ಅಧಿಕಾರಿಗಳು ಎಂದರೆ I.A.S. ಮತ್ತು I.P.S. ಅಧಿಕಾರಿಗಳನ್ನು ಬಿಟ್ಟು ಬಿಟ್ಟರೆ, ಬಾಕಿ 13 ಜನರು ಮಾತ್ರ ಇದ್ದಾರೆ. ಈಗ ಕಡಮೆ ಸಂಬಳ ತೆಗೆದುಕೊಳ್ಳುವವರಿಗೆ ಹೆಚ್ಚು ಸಂಬಳ ಬರುವಂತೆ ಏನಾದರೂ ಒಂದು ಪ್ರಯತ್ನ ಮಾಡಬೇಕು. ಕೊನೆಗೆ 40 ರೂಪಾಯಿಗಳಿಗಿಂತ ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಅದರಲ್ಲಿ ಹೇಳಿದ್ದಾರೆ. ಕನಿಷ್ಠ ಸಂಬಳ 40 ರೂಪಾಯಿಗಳಿಗಿಂತ ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟು ಸಂಬಳ ಪಡೆಯುವ I.A.S. ಮತ್ತು I.P.S. ಮತ್ತು 13 ಜನರನ್ನು ಮಾತ್ರ ಮುಟ್ಟಬೇಡಿ ಎಂದು ಹೇಳುತ್ತಾರೆ. ಇದು ನಿಜವಾಗಿ ಮಹಾತ್ಮ ಗಾಂಧಿಯವರು ನೀತಿಗನುಗುಣವಾಗಿ ರಾಜ್ಯಭಾರದ ವ್ಯವಸ್ಥೆಯನ್ನು ಮಾಡಿದಂತಾಗುತ್ತದೆಯೇ? ಒಂದು ಸಾವಿರ ರೂಪಾಯಿಗಳ ಸಂಬಳವಿಲ್ಲದಿದ್ದರೆ ಎರಡು ಸಾವಿರ ರೂಪಾಯಿಗಳ ಸಂಬಳ ಮಾಡಿ. ಆದರೆ ಕಡಮೆ ಸಂಬಳಕ್ಕೂ, ಅತ್ಯಧಿಕ ಸಂಬಳಕ್ಕೂ ಹೆಚ್ಚು ಅಂತರವಿರಬಾರದು ಎಂದು ಹೇಳುತ್ತಿದ್ದೇನೆ.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಇಲಾಖೆಯ ಮಂತ್ರಿಗಳು).—ಮೊದಲು ಕಮಿಟಿಯವರು 40 ರೂಪಾಯಿಗಳು ಮಿನಿಮಂ ಇರಬೇಕು ಎಂದು ಏನು ಹೇಳಿದ್ದರೋ, ಅದನ್ನು 50 ರೂಪಾಯಿಗಳಿಗೆ ಬದಲಾಯಿಸಿ ಈಗ 1 : 30 ಪ್ರಮಾಣವಿರುವಂತೆ ಮಾಡಿದ್ದೇವೆ. For the first time in history, we have kept the ratio of 1 : 30 and this ratio is never entered in the Pay structure on any previous occasion. Therefore, we have broken new ground.

ಶ್ರೀ ಕೆ. ಕೆಂಚಪ್ಪ.—ಈಗ 50 ರೂಪಾಯಿಗಳನ್ನು ಮಿನಿಮಂ ಎಂದು ಮಾಡುವುದರಲ್ಲಿ ಒಂದು ನಿಗದಿಯಾದ ಅಭಿಪ್ರಾಯಕ್ಕೆ ಬರಬೇಕಾಗಿದೆ. ಈ ರೀತಿ ಮಾಡಿರುವುದರಿಂದ ಯಾವ ರೀತಿಯಾದ ಪರಿಸ್ಥಿತಿ ದೇಶದಲ್ಲಿ ಉಂಟಾಗಿದೆ ಎಂಬುದನ್ನು ಆಲೋಚನೆ ಮಾಡಬೇಕಾಗಿದೆ. ಇದರಿಂದ ಒಂದು ದೊಡ್ಡ ಸಮಾಜವನ್ನು ಕಟ್ಟಿದ ಹಾಗಾಯಿತೇ? 50 ರೂಪಾಯಿಗಳು ಮಿನಿಮಂ ಸಂಬಳ ಇರಬೇಕೆಂದು ನಿಗದಿಮಾಡುವುದರ ಮೂಲಕ ನೌಕರರ ಜೀವನ ಕುದುರುತ್ತದೆಯೇ? ಇದು ಒಂದು ಪಾರ್ಲಮೆಂಟರಿ ತತ್ತ್ವವೇ? ಇವುಗಳನ್ನು ಆಲೋಚನೆ ಮಾಡಬೇಕು. ಕಮಿಟಿಯ ಶಿಫಾರಸ್ಸಿನಲ್ಲಿ ಒಂದು ತರಹವಿದ್ದರೆ, ತಾವು 50 ರೂಪಾಯಿಗಳಂತೆ

(ಶ್ರೀ ಕೆ. ಕೆಂಚಪ್ಪ.)

ಮಿನಿಮಂ ನಿಗದಿ ಮಾಡಿದರೆ ಅದು ಒಂದು ಧರ್ಮಕ್ಕೆ ಅನುಗುಣವಾಗಿದೆಯೇ?

Sri T. MARIAPPA.—The difficulty is this that the report of the old Mysore . . . .

ಶ್ರೀ ಕೆ. ಕೆಂಚಪ್ಪ.—ನಡುವೆ ತಾವು ಮಾತನಾಡಬಾರದು. ಇನ್ನೇನಾದರೂ ನಾನು ಹೇಳಬೇಕೆಂದಿರುವಾಗ, ಅಂಕಿಅಂಶಗಳನ್ನು ಕೊಡುವಾಗ ಅವು incorrect ಎಂದು ತಾವು ಹೇಳಬಹುದು. ಆದ್ದರಿಂದ ನಾನು ಈ ವಿಚಾರದಲ್ಲಿ ಬಹಳ ವ್ಯಸನಪಡಬೇಕಾಗಿದೆ. 1 : 30 ಪ್ರಮಾಣದಷ್ಟು ಅಂತರ ಸರಿಯಾದುದಲ್ಲ. 1 : 10 ಪ್ರಮಾಣವಾದರೂ ವ್ಯತ್ಯಾಸ ಇರಬೇಕಾಗಿದೆ. ಇಷ್ಟು ಪ್ರಮಾಣವಿದ್ದರೆಯೇ ಎಷ್ಟೋ ಹೆಚ್ಚುಕಡಮೆ ವ್ಯತ್ಯಾಸ ಬರುತ್ತದೆ. ನಮ್ಮ ಕೈಯಲ್ಲಿಯೇ ಅಧಿಕಾರ ಇದೆಯೆಂದು ಆಡಳಿತ ಪಕ್ಷದವರು ತಮ್ಮ ಇಷ್ಟ ಬಂದ ಹಾಗೆ ಸಂಬಳಗಳನ್ನು ನಿಗದಿ ಮಾಡುವುದು ಸರಿಯಲ್ಲ. ಅದರಲ್ಲಿ ಒಂದು ನಿಯಮವಿರಬೇಕು ; ಆ ದೃಷ್ಟಿಯಿಂದ ಇದನ್ನು ನೋಡಬೇಕು. ಬಡ ನೌಕರರ ವಿಚಾರದಲ್ಲಿ ತುಂಬ ಕನಿಕರವಿದೆಯೆಂದು ಭಾಷಣಗಳಲ್ಲಿ ಹೇಳುತ್ತಾರೆಯೇ ಹೊರತು ಅದಕ್ಕೆ ಒಂದು ವ್ಯವಸ್ಥೆ ಮಾಡುವ ವಿಚಾರದಲ್ಲಿ ಕೈಹಾಕುತ್ತಾ ಇಲ್ಲ. ಇವರ ಕಷ್ಟಸುಖಗಳನ್ನು ನಾವು ಇನ್ನು ಮುಂದೆ ಸರಿಯಾಗಿ ವಿಚಾರಿಸದೆ ಹೋದರೆ ನಮ್ಮ ಆತ್ಮಕ್ಕೆ ವಿರುದ್ಧವಾಗಿ ನಡೆದಂತೆ ಆಗುತ್ತದೆ. ಅದರಿಂದ ನಮ್ಮ ಕೆಲಸ ಕಾರ್ಯಗಳಿಗೆ ಧಕ್ಕೆಯುಂಟಾಗುತ್ತದೆ. ಇವೊತ್ತಿನ ದಿವಸ ಸರ್ಕಾರೀ ನೌಕರರಲ್ಲಿ ಪ್ರತಿಯೊಬ್ಬರಿಗೂ ಇಷ್ಟು ಕಷ್ಟಗಳು ಬರುವುದಕ್ಕೆ ಅವರಿಗೆ ಸಂದಾಯವಾಗುತ್ತಿರುವ ಕಡಮೆ ಸಂಬಳವೇ ಮುಖ್ಯಕಾರಣ. ಅವರ ಸಂಬಳಗಳನ್ನು ಜಾಸ್ತಿಮಾಡದೆ ಹೋದರೆ ಎಫಿಷಿಯನ್ಸಿ ಬರುವುದಿಲ್ಲ, ಪವಿತ್ರತೆ ಬರುವುದಿಲ್ಲ. ಆದರೆ ಸರ್ಕಾರಕ್ಕೂ ಇದನ್ನು ಬಗೆಹರಿಸುವ ವಿಚಾರದಲ್ಲಿ ಕಷ್ಟವಿರಬಹುದು. ಅದು ಅಷ್ಟು ಸುಲಭವಾದ ಕೆಲಸವೆಂದು ನಾನು ಹೇಳುವುದಿಲ್ಲ. ಯಾವುದೇ ಆಗಲಿ, ಒಂದು ತತ್ತ್ವದ ರೀತಿಯಲ್ಲಿ ವ್ಯವಸ್ಥೆಮಾಡಬೇಕಾದರೆ, ಆ ರೀತಿ ಕರ್ತವ್ಯನಿರ್ವಹಣೆ ಮಾಡಬೇಕಾದರೆ, ದಕ್ಷತೆಬೇಕು. ನಮ್ಮ ಆಡಳಿತದಲ್ಲಿ ಡೀಸೆಂಟ್ರಲೈಜೇಷನ್ ಇಲ್ಲ. ಪ್ರತಿಯೊಂದು ವಿಚಾರದಲ್ಲೂ ಮಂತ್ರಿಗಳೇ ಕೈಹಾಕುತ್ತಿದ್ದಾರೆ. ನಾನು ತಿಳಿದಿರುವ ಮಟ್ಟಿಗೆ ಹೆಡ್ ಆಫ್ ಡಿಪಾರ್ಟುಮೆಂಟುಗಳಿಗೆ ಸಂಪೂರ್ಣ ಅಧಿಕಾರ ಕೊಡಬೇಕು. ಮಂತ್ರಿಗಳು ತತ್ತ್ವಗಳಿಗೆ ಮಾತ್ರ ಕೈಹಾಕಬೇಕು. ಸೆಕ್ರೆಟರಿಗಳೂ ಕೂಡ ತತ್ತ್ವ ವಿಚಾರದಲ್ಲಿ ಯಾವೊಂದು ಕೆಲಸಮಾಡುವುದಕ್ಕೂ ಸಾಧ್ಯವಿರಬಾರದು. ಯಾವದೊಂದು ತತ್ತ್ವವನ್ನು ಮಂತ್ರಿಗಳು ಇಟ್ಟುಕೊಳ್ಳುತ್ತಾರೋ ಆ ತತ್ತ್ವಕ್ಕನುಸಾರವಾಗಿ ಪ್ರತಿಯೊಂದು ಹೆಡ್ ಆಫ್ ಡಿಪಾರ್ಟುಮೆಂಟಿನವರು ನಡೆದುಕೊಂಡು ಹೋಗುವ ಹಾಗೆ ಮಾತ್ರ ಮಾಡಬೇಕು. ಇಲ್ಲದೇಹೋದರೆ ದೇಶದಲ್ಲಿ ರಾಜ್ಯಭಾರ ನಡೆಸುವರನೇಕರಲ್ಲಿ ಅಶಾಂತಿ ಹುಟ್ಟಲಿಕ್ಕೆ ಕಾರಣವಾಗುತ್ತದೆ. ಅದರಿಂದ ನಮ್ಮ ದೇಶದಲ್ಲಿ ತುಂಬ ಅನನುಕೂಲತೆಗಳಿಗೆ ಕಾರಣವಾಗಿ ನಾನಾರೀತಿಯಲ್ಲಿರತಕ್ಕ ಆಡಳಿತವರ್ಗದವರಿಗೆ ಬಾಕಿಯವರಂತೆ ಇಲ್ಲಿಯೂ ಏನು ಬೇಕಾದರೂ ಮಾಡಬಹುದೆಂಬ ಮನಸ್ಸುಂಟಾಗಿ ಸರ್ಕಾರೀ ನೌಕರರಲ್ಲಿ ಬಡತನ ಇನ್ನೂ ಹೆಚ್ಚು ಹೆಚ್ಚಾಗುತ್ತದೆ. ಇದನ್ನು ಸರ್ಕಾರದವರು ದೀರ್ಘವಾಗಿ ಆಲೋಚನೆ ಮಾಡಬೇಕು. ಎಷ್ಟು ದಕ್ಷತೆಯಿಂದ ಸರ್ಕಾರ ಕೆಲಸ ಮಾಡುತ್ತಿದೆ ಎನ್ನುವ ವಿಚಾರದಲ್ಲಿ ನಿನ್ನೆಯ ದಿವಸ, ಜ್ಯುಡಿಷಿಯಲ್ ಅಡ್ಮಿನಿಸ್ಟ್ರೇಷನ್, ಪೋಲೀಸ್, ವಗೈರೆ ವಿಚಾರವಾಗಿ ಮಾತನಾಡಿದಾಗ ನಮ್ಮ ಮಾನ್ಯ ಮಂತ್ರಿಗಳು ಹೇಳಿದರು. ಅದಕ್ಕೆ ನಾನು ಒಂದು ಪ್ರಶ್ನೆ ಕೇಳುತ್ತಿದ್ದೇನೆ. ದೇಶದ ಸಂಪತ್ತನ್ನು ಹೆಚ್ಚಿಗೆ ಮಾಡುವುದಕ್ಕೋಸ್ಕರ ಸರ್ಕಾರದವರು ಕೋಲಾರದ ಚಿನ್ನದ ಗಣಿಯನ್ನು ರಾಷ್ಟ್ರೀಕರಣ ಮಾಡಿದ್ದಾರೆಂದು ಪತ್ರಿಕೆಗಳಲ್ಲಿ ದಪ್ಪದಪ್ಪ ಅಕ್ಷರಗಳಲ್ಲಿ ಪ್ರಕಟವಾದುದು ಎಲ್ಲರಿಗೂ ಗೊತ್ತಿದೆ. ಅದನ್ನು ದೇಶದ ಉತ್ಪಾದನಾ ಕನ್ಸರ್ನ್ಸ್‌ನಲ್ಲಿ ಬಹುಮುಖ್ಯವಾದುವೆಂದು ಕರೆದು, ಆ ಉತ್ಪಾದನಾಕಾರ್ಖಾನೆಯಿಂದ ದೇಶದ ಸಂಪತ್ತನ್ನು ಅಭಿವೃದ್ಧಿಪಡಿಸುವುದು, ಉತ್ಪಾದನಾ ಕಾರ್ಖಾನೆಗಳಿಂದ ಬರತಕ್ಕ ಉತ್ಪತ್ತಿಯನ್ನು ವಿನಿಯೋಗ ಮಾಡುವುದರ ಮೂಲಕ ಜನಗಳ ಮೇಲೆ ಬೀಳತಕ್ಕ ತೆರಿಗೆಯನ್ನು ಕಡಮೆ ಮಾಡುವುದು ಸರ್ಕಾರದ ಮೂಲ ತತ್ತ್ವ. ಅದು ಉತ್ಪಾದನಾ ಕಾರ್ಖಾನೆಗಳ ಸಂಬಂಧದಲ್ಲಿ ಬರತಕ್ಕದ್ದು ಎಂದು ನಾನು ತಮಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಬಹಳ ಹೊತ್ತಾಯಿತು. ಎಲ್ಲರಿಗೂ 10 ನಿಮಿಷಗಳ ಕಾಲ ಮಾತನಾಡಲು ಅವಕಾಶವನ್ನು ಕೊಟ್ಟು ತಮಗೆ 20 ನಿಮಿಷಗಳ ಕಾಲ ಅವಕಾಶ ಕೊಟ್ಟಿದ್ದೇನೆ.

ಶ್ರೀ ಕೆ. ಕೆಂಚಪ್ಪ.—ಇನ್ನು ಒಂದು ವಿಚಾರವನ್ನು ತಿಳಿಸಬೇಕಾಗಿದೆ. ಗಂಧದೆಣ್ಣೆ ಕಾರ್ಖಾನೆಯಲ್ಲಿ ಈ ವರ್ಷ 17 ಸಾವಿರ ರೂಪಾಯಿಗಳು ಲುಕ್ಸಾನು ಆಗಿದೆ. ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ 17 ಲಕ್ಷ 77 ಸಾವಿರ ರೂಪಾಯಿಗಳಷ್ಟು ಲುಕ್ಸಾನಾಗಿದೆ.

ಶ್ರೀ ಎಚ್. ಎಸ್. ರುದ್ರಪ್ಪ (ವ್ಯವಸಾಯ ಇಲಾಖೆಯ ಮಂತ್ರಿಗಳು).—ಯಾವ ವರ್ಷದಲ್ಲಿ?

ಶ್ರೀ ಕೆ. ಕೆಂಚಪ್ಪ.—1956-57ನೆಯ ವರ್ಷದ ಐದು ತಿಂಗಳುಗಳಲ್ಲಿ.

Sri G. SIVAPPA (Chitaldrug).—I rise to a print of order. The Hon'ble Leader of the opposition is referring to the Demands under Industries. But there is no such Demand under Administration in to-day's Demands.

ಶ್ರೀ ಕೆ. ಕೆಂಚಪ್ಪ.—ಜನರಲ್ ಅಡ್ಮಿನಿಸ್ಟ್ರೇಷನ್ನಿನಲ್ಲಿ ಕೆಲವು ಇಲಾಖೆಗಳಿಂದ ಲುಕ್ಸಾನು ಆಗಿದೆ. ಸೋಪ್ ಫ್ಯಾಕ್ಟರಿಯಲ್ಲಿ 2 ಲಕ್ಷ 47 ಸಾವಿರ, ಮೈಸೂರು ಸಿಲ್ಕ್ ಫ್ಯಾಕ್ಟರಿಯಲ್ಲಿ 1 ಲಕ್ಷ 35 ಸಾವಿರ, ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ . . . . .

ಅಧ್ಯಕ್ಷರು.—ಇದೆಲ್ಲಾ ಇಂಡಸ್ಟ್ರೀಸ್ ಡಿಮ್ಯಾಂಡ್ಸ್‌ಗೆ ಸಂಬಂಧಪಟ್ಟದು. ಶ್ರೀಮಾನ್ ಶಿವಪ್ಪ ಅವರು ಹೇಳಿದ ಮಾತು ನಿಜ.

ಶ್ರೀ ಕೆ. ಕೆಂಚಪ್ಪ.—ನಮ್ಮ ಸರ್ಕಾರದವರು ಈ ಇಲಾಖೆಗಳ ಆಡಳಿತವನ್ನು ದಕ್ಷತೆಯಿಂದ ನಡೆಸುವುದಕ್ಕೆ ಎಷ್ಟರಮಟ್ಟಿಗೆ ವ್ಯವಸ್ಥೆ ಮಾಡಿದ್ದಾರೆ, ಆ ಇಲಾಖೆಗಳು ಎಷ್ಟು ದಕ್ಷತೆಯಿಂದ ಕೆಲಸ ಮಾಡಿವೆ ಎಂಬುದನ್ನು ಹೇಳುತ್ತಿದ್ದೇನೆ. ಇಂಡಸ್ಟ್ರೀಸ್ ಡಿಮ್ಯಾಂಡಿಗೆ ಸಂಬಂಧಪಟ್ಟದ್ದು ಎಂದು ಹೇಳುವುದೇ ಪ್ರಾಧಾನ್ಯವಲ್ಲ.

ಅಧ್ಯಕ್ಷರು.—ತಾವು ಜನರಲ್ ಅಡ್ಮಿನಿಸ್ಟ್ರೇಷನ್ನಿನ ವಿಷಯವಾಗಿ ಈಗ ಮಾತನಾಡುವುದು ಉಪಯೋಗವಿಲ್ಲ. ಈಗ ಇಲ್ಲಿ ಯಾವ ವಿಷಯಕ್ಕೆ ಸಂಬಂಧಪಟ್ಟ ಡಿಮ್ಯಾಂಡ್ ಇದೆಯೋ, ಆ ಡಿಮ್ಯಾಂಡ್ ಮೇಲೆ ಮಾತನಾಡಬೇಕು.

ಶ್ರೀ ಕೆ. ಕೆಂಚಪ್ಪ.—ಆ ಡಿಮ್ಯಾಂಡಿಗೆ ಸಂಬಂಧಪಟ್ಟಿ ಹಾಗೆಯೇ ಮಾತನಾಡುತ್ತಿದ್ದೇನೆ. ಜನರಲ್ ಅಡ್ಮಿನಿಸ್ಟ್ರೇಷನ್ನಲ್ಲಿ ಇದು ಬರುವುದಿಲ್ಲ.

ಅಧ್ಯಕ್ಷರು.—ಜನರಲ್ ಅಡ್ಮಿನಿಸ್ಟ್ರೇಷನ್ನಿನಲ್ಲಿ ಇದೂ ಬರುತ್ತದೆ; ಪಬ್ಲಿಕ್ ಸರ್ವಿಸ್ ಕಮಿಷನ್ ವಿಚಾರ ಬರುತ್ತದೆ; ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ವಿಚಾರ ಬರುತ್ತದೆ, ಡಿಪಾರ್ಟ್‌ಮೆಂಟ್ ಆಫ್ ಇನ್‌ಫರ್‌ಮೇಷನ್ ವಿಚಾರ ಕೂಡ ಬರುತ್ತದೆ.

ಶ್ರೀ ಕೆ. ಕೆಂಚಪ್ಪ.—ಇಲ್ಲಿ ಒಬ್ಬ ಇಂಡಸ್ಟ್ರೀಸ್ ಮಂತ್ರಿಗಳು ಇದ್ದಾರೆ. ಅವುಗಳನ್ನು ವ್ಯವಸ್ಥೆಮಾಡುವವರು ಇದ್ದಾರೆಂದು ಇಷ್ಟು ವಿಚಾರ ಮಾತನಾಡಲಾಯಿತು.

ಅಧ್ಯಕ್ಷರು.—ಸುಮ್ಮನೆ ವಾದ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಈ ಡಿಮ್ಯಾಂಡ್‌ನಲ್ಲಿ ಇಂಡಸ್ಟ್ರೀಸಿಗೆ ಸಂಬಂಧಪಟ್ಟ ಅಂಶಗಳ ಮೇಲೆ ಮಾತನಾಡುವುದು ಸರಿಯಲ್ಲ.

ಶ್ರೀ ಕೆ. ಕೆಂಚಪ್ಪ.—ಇಂಡಸ್ಟ್ರೀಸ್ ಮಿನಿಸ್ಟರು ಇಲ್ಲರುವುದರಿಂದ ಈ ಇಂಡಸ್ಟ್ರಿಗಳ ವಿಚಾರವಾಗಿ ಹೇಳಬೇಕಾಗಿದೆ.

ಅಧ್ಯಕ್ಷರು.—ಇದು ಈ ಡಿಮ್ಯಾಂಡಿನಲ್ಲಿ ಬರುವುದಿಲ್ಲ. ಆದಕಾರಣ ಈಗ ಈ 25ನೆಯ ಡಿಮ್ಯಾಂಡಿಗೆ ಸೇರಿದ ವಿಷಯಗಳ ಮೇಲೆ ತಾವು ಮಾತನಾಡಬೇಕು.

ಶ್ರೀ ಕೆ. ಕೆಂಚಪ್ಪ.—ಆಗಲಿ, ಇಂಡಸ್ಟ್ರೀಸಿಗೆ ಸಂಬಂಧಪಡದ ಬೇರೊಂದು ವಿಷಯವನ್ನು ಹೇಳುತ್ತೇನೆ.

ಈಗ ನಮ್ಮ ದೇಶದಲ್ಲಿ ಸಾಲವನ್ನು ತೆಗೆದುಕೊಂಡು ಅನೇಕ ಕೆಲಸಗಳನ್ನು ನಡೆಸುತ್ತಿದ್ದಾರೆ. ಸುಮಾರು ಹೆಚ್ಚು ಕಡಮೆ ಈಗ ಸಾಲ ನೂರು ಕೋಟಿ ರೂಪಾಯಿಗಳವರೆಗೆ ಬರುತ್ತದೆ. ಈ ಸಾಲಗಳ ಲಿಸ್ಟು ನನ್ನ ಬಳಿ ಈಗ ಇದೆ. ಕಾಲಾವಕಾಶವಿಲ್ಲದ್ದರಿಂದ ಅದರ ವಿವರಗಳನ್ನೆಲ್ಲಾ ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು.—ಸಾಲದ ವಿಚಾರವೂ ಈ ಡಿಮ್ಯಾಂಡಿಗೆ ಸಂಬಂಧಪಡುವುದಿಲ್ಲ. ಇದು General Administration Budget ಮಾತ್ರ. ಬಡ್ಜೆಟ್ಟ್ ನೋಡಿದರೆ ಇದರ ವಿವರಗಳು ತಮಗೇ ತಿಳಿಯುತ್ತವೆ.

ಶ್ರೀ ಕೆ. ಕೆಂಚಪ್ಪ.—ಆಗಲಿ ಇನ್ನು ನಮ್ಮ ಲೋಕಲ್ ಸೆಲ್ಫ್ ಗೌರ್ನಮೆಂಟಿನ ವಿಚಾರವಾಗಿ ಹೇಳುತ್ತೇನೆ. ನಾಲ್ಕು ಡಿವಿಷನ್ನಿನ ಕಮಿಷನರುಗಳು ಈಗ ಮುನಿಸಿಪಾಲಿಟಿಗಳಿಗೆ ಹಣವನ್ನು ಹಂಚಬೇಕಾಗಿದೆ. ಅವರು ಈ ಮುನಿಸಿಪಾಲಿಟಿಗಳಿಗೆ ಸರಿಯಾಗಿ ಹಣವನ್ನು ಹಂಚುತ್ತಿಲ್ಲ.

ಅಧ್ಯಕ್ಷರು.—"General Administration" ವಿಷಯದಲ್ಲಿ ಮಾತನಾಡಬೇಕು ಸ್ವಾಮಿ, ಬೇರೆ ವಿಷಯಗಳಲ್ಲಿ ಈಗ ಮಾತನಾಡಬಾರದು.

ಶ್ರೀ ಕೆ. ಕೆಂಚಪ್ಪ.—ಇನ್ನು ನಮ್ಮ ನಾಲ್ಕು ಡಿವಿಜನಲ್ ಕಮಿಷನ್ನಿನ ಅಡ್ಮಿನಿಸ್ಟ್ರೇಷನ್ ವಿಷಯದಲ್ಲಿ ಹೇಳಬೇಕಾಗಿದೆ. ಅವರಿಗೆ ಕೊಡುವ ಹಣದ ಹಂಚಿಕೆ ಲೋಕಲ್‌ಸೆಲ್ಫ್-ಗವರ್ನಮೆಂಟ್ ಇಲಾಖೆಯಿಂದ ಬರಬೇಕಾಗಿದೆ. ಸರ್ಕಾರದವರು ಲ್ಯಾಂಡ್ ರೆವಿನ್ಯೂ ವಸೂಲಿ ಮಾಡುತ್ತಾರೆ. ಹಾಗೆ ಲ್ಯಾಂಡ್ ರೆವೆನ್ಯೂನಿಂದ ವಸೂಲಿಮಾಡಿದ ದುಡ್ಡನ್ನು ಡಿಸ್ಟ್ರಿಕ್ಟು ಬೋರ್ಡಿಗೆ ಕೊಡುತ್ತಾ ಇಲ್ಲ. ಗ್ರಾಮ ಪಂಚಾಯಿತ್ತಿ ಆಕ್ಟಿನ ಪ್ರಕಾರ ಅವರು ಸಹಾಯಮಾಡುತ್ತಿಲ್ಲ, ಆದ್ದರಿಂದ ಗ್ರಾಮ ಪಂಚಾಯಿತ್ತಿಗಳ ವ್ಯವಸ್ಥೆಯನ್ನು ಮತ್ತು ಜಿಲ್ಲಾಬೋರ್ಡುಗಳ ವ್ಯವಸ್ಥೆಯನ್ನು ಈ ನಾಲ್ಕು ಡಿವಿಜನ್ನಿಗೆ ಸಂಬಂಧಪಟ್ಟ ಕಮಿಷನರುಗಳು ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ಇದರಿಂದ ಇವುಗಳ ಆಡಳಿತವು ಕುಂಠಿತವಾಗುತ್ತಿದೆ. ಈ ವಿಚಾರದಲ್ಲಿ ಹಿಂದೆ ಇಂಟರ್‌ಪಿಲೇಷನ್ನುಗಳಿಗೆ ಹಣ ಸಹಾಯವನ್ನು ಕೊಟ್ಟಿದ್ದಾರೆಂದು ಮುಖ್ಯ ಮಂತ್ರಿಗಳು ಮತ್ತು ಸಂಬಂಧಪಟ್ಟವರು ಹೇಳಿದ್ದಾರೆ. ಆದರೆ ನಮ್ಮ ಅರ್ಥ ಸಚಿವರು ಬಡ್ಜೆಟ್ಟನ್ನು ನಮ್ಮಮುಂದಿಡುವಾಗ ಈ ವಿಚಾರದಲ್ಲಿ ಏನೂ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಇವೆಲ್ಲ ದೃಷ್ಟಿಯಿಂದ ನೋಡಿದರೆ ನಾನು ಖಚಿತವಾಗಿ ಹೇಳುತ್ತೇನೆ. ದುಡ್ಡನ್ನು ಎಷ್ಟು ಕೊಡಬೇಕಾಗಿತ್ತೋ ಅಷ್ಟು ಗ್ರಾಮ ಪಂಚಾಯಿತ್ತಿಗಳಿಗೆ ಕೊಟ್ಟಿಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯ (ಸ್ಥಳೀಯ ಸಂಸ್ಥೆಯ ಮಂತ್ರಿಗಳು).—ಡಿವಿಜನಲ್ ಕಮಿಷನರುಗಳಿಗೆ ಸಂಬಂಧಪಟ್ಟ ಡಿಮ್ಯಾಂಡುಗಳ ಚರ್ಚೆ ಈಗ ನಡೆಯುತ್ತಿಲ್ಲ. ಆ ಗ್ರಾಂಟುಗಳ ವಿಷಯ ಬಂದಾಗ ತಮಗೆ ಸೂಕ್ತವೆನಿಸಿದಂತೆ ಮಾತಾಡಬಹುದು.

ಶ್ರೀ ಕೆ. ಕೆಂಚಪ್ಪ.—ಆ ವಿಚಾರ ಹೆಚ್ಚಿಗೆ ಮಾತನಾಡಲು ಹೋಗುವುದಿಲ್ಲ. ಸದ್ಯಕ್ಕೆ ಒಂದು ಮಾತನ್ನು ಹೇಳಬೇಕಾಗಿದೆ. ಲೋಕಲ್ ಗವರ್ನಮೆಂಟು ಸಾಕಷ್ಟು ಸಹಾಯವನ್ನು ಕೊಡುತ್ತಿಲ್ಲ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಒಂದು ಮುಖ್ಯ ವಿಚಾರವನ್ನು ನಾವು ಗಮನಿಸಬೇಕಾಗಿದೆ. ಒಂದು ಆಡಿಟ್ ಶಾಖೆ ಈ ಇಲಾಖೆಯಲ್ಲಿದೆ.

ಶ್ರೀ ಟಿ. ಮರಿಯಪ್ಪ.—Audit Departmentಗೆ ಸಂಬಂಧಪಟ್ಟ ಡಿಮ್ಯಾಂಡಿಲ್ಲ. ಆದರೆ ಲೋಕಲ್ ಆಡಿಟ್ ನಮಗೆ ಸೇರಿದೆ. ಅದರ ವಿಷಯವಾಗಿ ಬೇಕಾದರೆ ಹೇಳಬಹುದು.

ಶ್ರೀ ಕೆ. ಕೆಂಚಪ್ಪ.—ಲೋಕಲ್ ಆಡಿಟ್ಟು ವಿಚಾರವನ್ನೇ ನಾನು ಮಾತನಾಡುತ್ತಿರುವುದು. ಈ ಶಾಖೆಯಲ್ಲಿ ಸರಿಯಾಗಿ ಕೆಲಸ ನಡೆಯುತ್ತಿಲ್ಲ. ಮತ್ತು ದಕ್ಷತೆಯಿಂದ ಕೆಲಸಮಾಡುವವರೇ ಕಡಮೆ. ಅಲ್ಲದೆ ಈ ಶಾಖೆಗಾಗಿ ವಿಪರೀತ ದುಡ್ಡು ಖರ್ಚುಮಾಡಿದ್ದಾರೆ. ಇದರಿಂದ ಈಗ ಏನಾಗಿದೆ ಎಂದರೆ ದುಡ್ಡು ತಿನ್ನುವುದಕ್ಕೆ ಅವಕಾಶವಾಗಿದೆ. ಹೀಗೆ ದುಡ್ಡು ತಿಂದಿರುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಈ ಶಾಖೆಯಿಂದ ಅನುಕೂಲವಾಗಿದೆ. ಹೀಗೆ ಸರಕಾರದ ಹಣ ದುರುಪಯೋಗವಾಗುವುದನ್ನು ತಪ್ಪಿಸಬೇಕು.

ಶ್ರೀ ಟಿ. ಮರಿಯಪ್ಪ.—ತಾವು Co-operative Audit ವಿಚಾರವಾಗಿ ಹೇಳುತ್ತಿದ್ದೀರಲ್ಲ?

ಶ್ರೀ ಕೆ. ಕೆಂಚಪ್ಪ.—ಕೋ ಆಪರೇಟಿವ್ ಆಡಿಟ್ಟೇ ಅಲ್ಲ. ಲೋಕಲ್ ಆಡಿಟ್ಟು ಮತ್ತು ಇತರ ಎಲ್ಲ ಆಡಿಟ್ಟು ಶಾಖೆಗಳ ಆಡಳಿತವೂ ಸೇರಿದೆ. ಈ ಲೋಕಲ್ ಆಡಿಟ್ಟಾಗಲಿ ಅಥವಾ ಬೇರೆ ಆಡಿಟ್ಟಾಗಲಿ ಸರಿಯಾಗಿ, ನ್ಯಾಯವಾಗಿ ಕೆಲಸ ಮಾಡಬೇಕು. ಈ ಲೋಕಲ್ ಆಡಿಟ್ಟು ಇರುವುದರಿಂದಲೇ ಬೇಕಾದಷ್ಟು ಅನ್ಯಾಯಗಳಾಗುತ್ತಿವೆ. ಇದಕ್ಕೆ ಕಾರಣ ಈ ಶಾಖೆ ಸರಿಯಾಗಿ ನಡೆಯುತ್ತಿಲ್ಲ ಎಂದು ವ್ಯಸನಕರವಾಗಿ ಹೇಳಬೇಕಾಗಿದೆ. ಸರಿಯಾದ ಲೋಪದೋಷಗಳನ್ನು ಕಂಡುಹಿಡಿದು ತಕ್ಕ ಕ್ರಮಗಳನ್ನು ಕೈಗೊಳ್ಳದಿದ್ದರೆ ಆಡಳಿತದ ಬಿಗಿ ತಪ್ಪಿಹೋಗುತ್ತದೆ. ಈ ಶಾಖೆಯು ಎಲ್ಲ ಅಧಿಕಾರಿಗಳಮೇಲೆಯೂ ಕಂಟ್ರೋಲ್ ಇಟ್ಟುಕೊಂಡು ಕೆಲಸಮಾಡುತ್ತಿಲ್ಲ. ಇವೆಲ್ಲವನ್ನೂ ನೋಡಿದರೆ ಸರಕಾರದ ಆಡಳಿತ ನ್ಯಾಯನಿಷ್ಠೆಗಳಿಂದ ನಡೆಯುತ್ತಿಲ್ಲ. ಎಂದು ಹೇಳಬೇಕಾಗುತ್ತದೆ. ಇವೆಲ್ಲವನ್ನು ಸರಿಯಾಗಿ ವಿಚಾರಮಾಡಬೇಕು ಮತ್ತು ತೀವ್ರವಾದ ಕ್ರಮಗಳನ್ನು ಕೈಗೊಳ್ಳಬೇಕು. ಹೀಗಿರುವುದರಿಂದ ನಾವು ಈ ಬಡ್ಜೆಟ್ಟಿನಲ್ಲಿರುವ ಗ್ರಾಂಟುಗಳೇನಿವೆ ಅದನ್ನು

(ಶ್ರೀ ಕೆ. ಕೆಂಚಪ್ಪ)

ಒಪ್ಪಿಕೊಳ್ಳುವುದು ಕಷ್ಟಸಾಧ್ಯವಾಗಿದೆಯೆಂದು ನನ್ನ ಅಭಿಪ್ರಾಯ.

---

*The House adjourned for Lunch at Four of the Clock and reassembled at Thirty Minutes past Four of the Clock.*

---

[MR. SPEAKER in the Chair.]

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ನಮ್ಮ ಮುಂದಿರತಕ್ಕ 13 ಮತ್ತು 14ನೆಯ ಡಿಮ್ಯಾಂಡುಗಳನ್ನು ಸಮರ್ಥಿಸುತ್ತಾ ನಾನು ಕೆಲವು ಸಲಹೆಗಳನ್ನು ಸರ್ಕಾರದವರಿಗೆ ಕೊಡಲಿಚ್ಛಿಸುತ್ತೇನೆ. ಹಳೆಯ ಮೈಸೂರು ರಾಜ್ಯದಲ್ಲಿ ಡಿವಿಜನಲ್ ಕಮಿಷನರ್ ಎಂಬ ಅಧಿಕಾರಿಗಳಾಗಲಿ, ಆಫೀಸಾಗಲಿ ಇರಲಿಲ್ಲ. ಹೊಸರಾಜ್ಯ ನಿರ್ಮಾಣವಾಗತಕ್ಕಂಥ ಸಂದರ್ಭದಲ್ಲಿ ಈ ನೂತನ ಹುದ್ದೆಯನ್ನು create ಮಾಡಿದರು. ಬಹುಶಃ ಇದು ಹೊಸದಾಗಿ ನಿರ್ಮಾಣವಾದುದು ; ಹಿಂದಿನ ಬೊಂಬಾಯಿ ಪ್ರಾಂತದಲ್ಲಿ ಈ ರೀತಿಯಾದ ಆಫೀಸಿದೆ, ಅದಕ್ಕನುಗುಣವಾಗಿ ಇಲ್ಲಿಯೂ ಕೂಡ ಇರುವುದು ಸೂಕ್ತವೆಂಬ ಉದ್ದೇಶದಿಂದ ಇದನ್ನು ನಿರ್ಮಾಣಮಾಡಿದ್ದಾರೆ ಎಂದು ಗೊತ್ತಾಗಿದೆ. ನನಗೆ ತಿಳಿದಹಾಗೆ ಬೇರೆ ರಾಜ್ಯಗಳಲ್ಲಿ ಎಂದರೆ, ಪಕ್ಕದ ಮದ್ರಾಸ್ ಪ್ರಾಂತ್ಯದಲ್ಲಿ ಈ ರೀತಿಯಾದ ಆಫೀಸಿಲ್ಲ. ಈ ರೀತಿಯಾದ ಆಫೀಸನ್ನು ಮಾಡಿದ್ದೇ ಆದರೆ ಕೆಲಸ ಕಾರ್ಯಗಳು ಚುರುಕಾಗಿ ನಡೆಯಲಿ ಎಂಬುದೇ ಸರ್ಕಾರದ ಉದ್ದೇಶ ; ಇದರ ಹೊರತು ಬೇರೇನೂ ಅಲ್ಲ. ಆದರೆ, ವಾಸ್ತವಾಂಶ ಇದಕ್ಕೆ ವ್ಯತಿರಿಕ್ತವಾಗಿದೆ. ಹಿಂದೆ ರೆವಿನ್ಯೂವಿಗೆ ಸಂಬಂದ ಪಟ್ಟಹಾಗೆ ಮತ್ತು ಲೋಕಲ್ ಸೆಲ್ಫ್ ಗೌರ್ನಮೆಂಟಿನ ಆಡಳಿತಕ್ಕೆ ಸಂಬಂಧಪಟ್ಟಹಾಗೆ ಬರುತ್ತಿದ್ದ ಕಾಗದ ಪತ್ರಗಳೆಲ್ಲಾ ಡೆಪ್ಯುಟಿ ಕಮಿಷನರುಗಳಿಂದ ರೆವಿನ್ಯೂ ಕಮಿಷನರ ಆಫಿಸಿಗೂ ಮತ್ತು ಲೋಕಲ್ ಸೆಲ್ಫ್ ಗೌರ್ನಮೆಂಟ್ ಕಮಿಷನರ ಆಫೀಸಿಗೂ ಹೋಗಿ ಆ ಮೂಲಕ ಸರ್ಕಾರಕ್ಕೆ ಹೋಗುತ್ತಿದ್ದುವು. ಈಗ ಹಿಂದಿನ ರೆವಿನ್ಯೂ ಕಮಿಷನರ ಆಫೀಸೂ, ಲೋಕಲ್ ಸೆಲ್ಫ್ ಗೌರ್ನಮೆಂಟ್ ಸೆಕ್ರೆಟೆರಿಯವರ ಆಫೀಸೂ ವಜಾ ಆಗಿ ಡಿವಿಜನಲ್ ಕಮಿಷನರ್ ಆಫೀಸ್ ಬಂದಿದೆ. ಈ ಹೊಸ ಆಫೀಸಿನಿಂದ ನಡೆಯಬೇಕಾದ ಕೆಲಸ ಕಾರ್ಯಗಳು ಅಷ್ಟು ಚುರುಕಾಗಿ ನಡೆಯದೆ ಇನ್ನು ಸಾವಕಾಶವಾಗುವುದಕ್ಕೆ ಮಾರ್ಗ ಕಲ್ಪಿಸಿ ಕೊಟ್ಟ ಹಾಗಾಗಿದೆ. ಈ ಹೊಸ ಹುದ್ದೆ ತೀರಾ ಅನಾವಶ್ಯಕವೆಂದು ನಾನು ಸರ್ಕಾರಕ್ಕೆ ಸಲಹೆ ಮಾಡ ಬಯಸುತ್ತೇನೆ. ಈಗಿರತಕ್ಕ ಡೆಪ್ಯುಟಿ ಕಮಿಷನರಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟ ಪಕ್ಷದಲ್ಲಿ ಬಹುಶಃ ಕೆಲಸ ಕಾರ್ಯಗಳು ಇನ್ನೂ ಸುಸೂತ್ರವಾಗಿ ನಡೆಯುತ್ತವೆಂದು ಹೇಳುತ್ತೇನೆ. ಮತ್ತು ಕಾಗದ ಪತ್ರಗಳು ಹೆಚ್ಚುಕಾಲ ಒಂದೇ ಕಡೆ ನಿಲ್ಲದಿರುವುದಕ್ಕೆ ಸಹಾಯ ಮಾಡಿದಂತಾಗುತ್ತದೆ. ಈಗ ಅನೇಕ ಕಡೆಯಿಂದ ದೂರ ಗಳು ಬರುತ್ತಿವೆ. ಕಾಗದ ಪತ್ರಗಳ ವಿಲೇವಾರಿಯಾಗುತ್ತಿಲ್ಲ ; ಒಂದೊಂದು ಕಡೆಯಲ್ಲೂ ತಿಂಗಳಗಟ್ಟಲೆ, ವರ್ಷಗಟ್ಟಲೆ ನಿಲ್ಲುತ್ತಿವೆಯೆಂಬ ದೂರಿಗೆ ಅವಕಾಶವಿಲ್ಲದ ಹಾಗೆ ಮಾಡಬೇಕಾದರೆ ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕು. ಹಿಂದೆ ಇದ್ದಹಾಗೆ ಲೋಕಲ್ ಸೆಲ್ಫ್ ಗೌರ್ನಮೆಂಟ್ ಕಮಿಷನರನ್ನು ಬೇಕಾದರೆ ಇಟ್ಟುಕೊಳ್ಳಬಹುದು. ಈಗ ಡಿವಿಜನಲ್ ಕಮಿಷನರ್ ಆಫೀಸಿಗೆ ಇರುವ ಅಧಿಕಾರಗಳಲ್ಲಿ ಬಹುತೇಕವಾಗಿ ರೆವಿನ್ಯೂಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ಹಾಗಿರುತ್ತವೆ. ಜಿಲ್ಲಾಧಿಕಾರಿಗಳ ಕೋರ್ಟಿನ ತೀರ್ಮಾನದ ಮೇಲೆ ರೆವಿನ್ಯೂ ಬೋರ್ಡ್ ತೀರ್ಮಾನ ಮಾಡುತ್ತದೆ. ಅದರ ಮೇಲೆ ಅಪೀಲ್ ಹೋಗಬೇಕಾದರೆ ನೇರವಾಗಿ ಸರ್ಕಾರಕ್ಕೆ ಹೋಗಬಹುದು. ಹೀಗಿರುವಾಗ ಡಿವಿಜನಲ್ ಕಮಿಷನರ್ ಎಂಬ ಆಫೀಸು ಮಧ್ಯೇ ಇದ್ದರೆ ಇನ್ನೂ delay ಆಗಿ, ಸರ್ಕಾರದೊಡನೆ ನೇರವಾಗಿ ವ್ಯವಹರಿಸುವುದಕ್ಕೆ ಅಡಚಣೆ ಬಂದಂತಾಗಿರುತ್ತದೆ. ಮತ್ತು ಈ ಆಫೀಸಿನಿಂದ ಹೆಚ್ಚಿನ ಪ್ರಯೋಜನವೂ ಇಲ್ಲವೆಂದು ನಾನು ಅಭಿಪ್ರಾಯ ಪಡುತ್ತೇನೆ. ಸರ್ಕಾರ ಹೇಳಬಹುದು : ನಾಲ್ಕಾರು ಡಿಸ್ಟ್ರಿಕ್ಟ್‌ಗಳನ್ನು ಸೇರಿಸಿ ಅವಕ್ಕಾಗಿ ಇಂಥ ಒಂದು ಆಫೀಸ್ ಮಾಡಿದೆ ; ಅದು ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲಿರುವ ಸಮಸ್ಯೆಗಳನ್ನೂ ಅರ್ಥಮಾಡಿಕೊಂಡು ಸರ್ಕಾರಕ್ಕೆ ಸೂಕ್ತ ಸಲಹೆ ಮಾಡುತ್ತದೆ ಎಂದು. ಅದಕ್ಕೆ ನನ್ನ ಉತ್ತರವಾದರೂ ಇಷ್ಟೆ: ಡೆಪ್ಯುಟಿಕಮಿಷನರಿಗೇ ಬೇರೆ ಪ್ರಾಂತ್ಯಗಳಲ್ಲಿರುವಂತೆ ಹೆಚ್ಚುಅಧಿಕಾರ ಕೊಟ್ಟಪಕ್ಷದಲ್ಲಿ ಡಿವಿಜನಲ್ ಕಮಿಷನರರಿಂದ ಯಾವ ಕೆಲಸಕಾರ್ಯಗಳನ್ನು ನಿರೀಕ್ಷಣೆ ಮಾಡಬಹುದೋ ಆ ಕೆಲಸ ಕಾರ್ಯಗಳನ್ನು ಅವರಿಂದಲೂ ನಿರೀಕ್ಷಿಸಬಹುದು. ಕಾಗದ ಪತ್ರಗಳು ಬಹಳ ನಿಧಾನವಾಗುತ್ತಿವೆಯೆಂದು ಮಾನ್ಯ ಮಂತ್ರಿಗಳು ಹೊರಗಡೆ ಪ್ರವಾಸ ಮಾಡುವಕಾಲದಲ್ಲಿ ದೂರು ಕೇಳಿರಬಹುದು. ಜನರು ತಾವು ಕೊಟ್ಟಂತಹ ಅರ್ಜಿಗಳನ್ನು ಬೇಗ ವಿಲೇ ಮಾಡುತ್ತಿಲ್ಲವೆಂದು ಎಲ್ಲ ಕಡೆಯಿಂದಲೂ ಹೇಳುತ್ತಿದ್ದಾರೆ. ಇದಕ್ಕೆ ಕಾರಣ, ಅಧಿಕಾರ ವರ್ಗದಲ್ಲಿ ಇನ್ನೂ ಇರತಕ್ಕ ಹಳೆಯ ಮನೋಭಾವನೆ. ಎರಡನೆಯದಾಗಿ ನಾವು ಇದುವರೆಗೂ ಸಂಪೂರ್ಣವಾಗಿ ಅಧಿಕಾರವನ್ನು decentralise ಮಾಡದಿರುವುದು. ಜಮೀನು ವಿಲೇ ಮಾಡಬೇಕಾದ ಸಂದರ್ಭದಲ್ಲಿ ಹಿಂದೆ ಡೆಪ್ಯುಟಿಕಮಿಷನರಿಗೆ ಮತ್ತು ಸಬ್ ಡಿವಿಜನ್ ಆಫೀಸರುಗಳಿಗೆ ಬಹು ಮಟ್ಟಿಗೆ ಅಧಿಕಾರವಿತ್ತು. ನಾವು ಈ ಮಾನ್ಯ ಸಭೆಯಲ್ಲಿ ಅನೇಕ ರೀತಿಯಲ್ಲಿ ಒತ್ತಾಯ ಮಾಡಿದ್ದರ ಪರಿಣಾಮವಾಗಿ ಅಮಲ್ದಾರರಿಗೆ ಸಹ ನಾಲ್ಕು ಎಕರೆ ಖುಷ್ಕಿ ಜಮೀನನ್ನು ಕೊಡಬಹುದೆಂದು ಕಾನೂನು ಮಾಡಿದರು. ಇದರ ಪ್ರಕಾರ 4 ಎಕರೆಗೆ ಮೇಲ್ಪಟ್ಟಿದ್ದರೆ—5 ಎಕರೆ ಕೊಡಬೇಕಾದರೂ ಸಬ್ ಡಿವಿಜನ್ ಆಫೀಸರಿಗೆ ಹೋಗಬೇಕೆಂದಿದೆ. ಅದಕ್ಕೂ ಮೇಲಿನ ಅಧಿಕಾರವನ್ನು ಡೆಪ್ಯುಟಿ ಕಮಿಷನರರಿಗೂ, ರೆವಿನ್ಯೂ ಕಮಿಷನರಿಗೂ, ಆಯಾ ಸ್ಥಾನಕ್ಕೆ ತಕ್ಕಂತೆ ಕೊಟ್ಟಿದ್ದಾರೆ ? ಕೊನೆಯದಾಗಿ 10 ಎಕರೆಗಳಿಗೆ ಮೇಲ್ಪಟ್ಟಿದ್ದರೆ ಸರ್ಕಾರಕ್ಕೆ ಹೋಗಬೇಕೆಂದು ತಿಳಿಸಿದೆ. ನನ್ನ ಈಗಿನ ಸಲಹೆ, ಏನೆಂದರೆ ಅಮಲ್ದಾರರಿಗೆ ಈಗ ಕೊಟ್ಟಿರತಕ್ಕ ಅಧಿಕಾರವನ್ನು 5 ಎಕರೆ ಯಷ್ಟಾದರೂ ಖುಷ್ಕಿ ಜಮೀನನ್ನು ಕೊಡುವುದಕ್ಕೆ ಹೆಚ್ಚಿಸುವುದು ಸೂಕ್ತ.

ಶ್ರೀ ಎಚ್. ಎಸ್. ರುದ್ರಪ್ಪ.—ಈಗಿರತಕ್ಕ ಅಧಿಕಾರದ ಜೊತೆಗೆ ಇನ್ನೂ 5 ಎಕರೆಯಷ್ಟು ಅಧಿಕಾರ ಕೊಡಬೇಕೆ ? ಅಥವಾ 4 ಎಕರೆ ಎಂದಿರುವುದನ್ನು 5 ಎಕರೆ ಎಂದು ಮಾಡಬೇಕೆಂದೇ ?

ಶ್ರೀ ಡಿ. ದೇವರಾಜ ಅರಸ್.—ನಾಲ್ಕು ಎಕರೆಗೆ ಬದಲು ಐದು ಎಕರೆ. ನಾನೇಕೆ ಈ ಸಲಹೆ ಕೊಡುತ್ತಿದ್ದೇನೆಂಬುದನ್ನು ಹೇಳುತ್ತೇನೆ. ತಾವು ಇಂಥವುಗಳನ್ನು ಮಾಡುವುದರಲ್ಲಿ ಒಂದು ತತ್ತ್ವವನ್ನನುಸರಿಸಿ ಮಾಡಬೇಕು. ತಾವೀಗ 4 ಎಕರೆಯೆಂದು ಹೇಳುವುದರಲ್ಲಿ

ಯಾವ ತತ್ತ್ವವನ್ನನುಸರಿಸಿದ್ದೀರೋ ಗೊತ್ತಿಲ್ಲ. ಒಬ್ಬ landless ರೈತನಿಗೆ ಜಮೀನು ಕೊಡಬೇಕಾದರೆ ಒಂದು economic unit ಆದರೂ ಕೊಡಬೇಕು. ಒಂದು ಎಕನಾಮಿಕ್ ಯೂನಿಟ್ ಎಂದರೆ 5 ಎಕರೆ ಖುಷ್ಕಿ ಅಥವಾ ಎರಡು ಎಕರೆ ರಿ ಎಂದು ತಾವೇ ನಿರ್ಣಯಿಸಿದ್ದೀರಿ. ಅಂದಮೇಲೆ ತಾಲ್ಲೂಕ್ ಲೆವೆಲ್‌ನಲ್ಲಿ ಅಮಲ್ದಾರರಿಗೆ ಒಂದು economic unit ಆದರೂ ಕೊಡುವುದಕ್ಕೆ ಅಧಿಕಾರವಿರುವಂತೆ ಈ ಕಾನೂನನ್ನು ತಿದ್ದುಪಡಿ ಮಾಡುವುದು ಸಮಂಜಸವಾಗಿದೆ. ಹಾಗಿಲ್ಲದೆ ಇಷ್ಟಕ್ಕೆಲ್ಲಾ ಸಬ್‌ಡಿವಿಜನ್ ಆಫೀಸಿಗೆ ಕಳುಹಿಸಿಕೊಡಬೇಕು ಮತ್ತೆ ಅಲ್ಲಿಂದ ವಾಪಸ್ಸು ಬರಬೇಕೆಂದರೆ ಒಂದು ಆಫೀಸಿನಿಂದ ಮತ್ತೊಂದು ಆಫೀಸಿಗೆ ಹೋಗುವುದರಲ್ಲಿಯೇ ವರ್ಷಾನುಗಟ್ಟಲೆಯಾಗುತ್ತದೆ.

ಸ್ವಾಮಿ, ಇನ್ನು ಮತ್ತೊಂದು ವಿಚಾರವಿದೆ. ಅದೇನೆಂದರೆ ಸಬ್ ಡಿವಿಜನ್ ಅಧಿಕಾರಿಗಳಿಗೂ ಸಹ ಲ್ಯಾಂಡ್ ಅಕ್ವಿಜಿಷನ್ ಆಫೀಸರಿಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅಧಿಕಾರವನ್ನು ಕೊಟ್ಟಿರುವಂತೆ ಆ ಅಧಿಕಾರವನ್ನು ಕೊಡಲಾಗಿದೆ. ಆದರೆ ಮನೆಗಳನ್ನು ಕಟ್ಟುವ ಉದ್ದೇಶಕ್ಕಾಗಲಿ, ಅಥವಾ ಮತ್ತೆ ಯಾವ ಸಾರ್ವಜನಿಕ ಕಾರ್ಯಕ್ಕಾಗಲಿ ಜಮೀನನ್ನು ಸ್ವಾಧೀನಪಡಿಸಿ ಕೊಳ್ಳತಕ್ಕ ಸಂದರ್ಭದಲ್ಲಿ ಒಂದು ಹೆಚ್ಚಿನ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಡತಕ್ಕದ್ದು ಸೂಕ್ತವಾಗಿರುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ. ಇದಕ್ಕನುಗುಣವಾಗಿ ಈಗಿರತಕ್ಕ ಲ್ಯಾಂಡ್ ಅಕ್ವಿಜಿಷನ್ ಆಕ್ಟಿಗೆ ಕೆಲವು ಸೂಕ್ತತಿದ್ದುಪಡಿಗಳನ್ನು ತರತಕ್ಕದ್ದು ಒಳ್ಳೆಯದೆಂದು ಹೇಳುತ್ತೇನೆ. ಈ ವಿಧವಾದ ಒಂದು ಅನುಕೂಲವಿಲ್ಲದಿರುವುದರಿಂದ ಈ ದಿವಸ ಸಾರ್ವಜನಿಕ ಉಪಯುಕ್ತ ಕಾರ್ಯಗಳ ಬಗ್ಗೆ ಜಮೀನನ್ನು ಅಕ್ವಯಿರ್ ಮಾಡಿಕೊಳ್ಳಲು ಇಲ್ಲವೇ ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಬೇಕಾಗತಕ್ಕಂಥ ಜಮೀನನ್ನು ಅಕ್ವಯಿರ್ ಮಾಡಿಕೊಳ್ಳಲು 8-10 ವರ್ಷಗಳಾದರೂ ಕೆಲಸವಾಗದಿರುವಂಥ ನಿದರ್ಶನಗಳಿರುವುದನ್ನು ನಾನು ನೋಡಿದ್ದೇನೆ. ಆದುದರಿಂದ ಈ ವಿಚಾರದಲ್ಲಿ ಜಿಲ್ಲಾ ಲೆವಲ್ಲಿನಲ್ಲೇ ಈ ಅಕ್ವಿಜಿಷನ್ ರಿಕಾರ್ಡುಗಳ ಬಗ್ಗೆ ಒಂದು ಫೈನಾಲ್ಟಿ ದೊರೆಯುವಂತೆ ಏರ್ಪಾಡು ಮಾಡಬೇಕಾಗಿದೆ ಎಂದು ಹೇಳುತ್ತಿದ್ದೇನೆ. ಈ ಕಾರಣದಿಂದ ತಾವು ಜಿಲ್ಲಾಧಿಕಾರಿಗಳಿಗೆ ಒಂದು ಹೆಚ್ಚಿನ ಅಧಿಕಾರವನ್ನು ಕೊಡತಕ್ಕದು ಈಗ ಅತ್ಯಗತ್ಯ.

ಇನ್ನು ನಾನೀಗ ಈ ಚುನಾವಣೆಗಳ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಈಗ ದೇಶದಲ್ಲಿ ನಡೆಯುತಕ್ಕ ಜನರಲ್ ಎಲೆಕ್ಷನ್‌ಗಳ ವೆಚ್ಚದ ಸಂಬಂಧದಲ್ಲಿ ಇಂತಿಷ್ಟೇ ಹಣವನ್ನು ಒಂದೊಂದು ಪೋಲಿಂಗ್ ಸ್ಟೇಷನ್ನಿಗೆ ಖರ್ಚು ಮಾಡಬೇಕೆಂಬುದಾಗಿ ನಿರ್ಧಾರ ಮಾಡಿದ್ದಾರೆ. ಆದರೆ ಚುನಾವಣೆಗಳು ನಡೆಯುವುದಕ್ಕೆ ಮುಂಚೆ ಪ್ರತಿಯೊಂದು ಹಳ್ಳಿಗೂ ಹೋಗಿ ಎಲ್ಲೆಲ್ಲಿ ಪೋಲಿಂಗ್ ಸ್ಟೇಷನ್ನುಗಳನ್ನು ಏರ್ಪಡಿಸಿರುತ್ತಾರೋ ಅಂಥ ಪ್ರದೇಶದಲ್ಲಿರತಕ್ಕ ಪಟೇಲ್ ಶ್ಯಾನುಭೋಗರುಗಳಿಗೆ ತಾಲ್ಲೂಕ್ ಅಮಲ್ದಾರರುಗಳೂ ಷೇಕ್‌ದಾರರುಗಳೂ ಇತರ ಚುನಾವಣೆಯ ಅಧಿಕಾರಿಗಳೂ ಸೇರಿ ನೀವು ಈ ಚುನಾವಣೆಗಳ ಬಗ್ಗೆ ಏನೇನು ಹಣ ಖರ್ಚು ಮಾಡುತ್ತೀರೋ ಅದಕ್ಕೆಲ್ಲ ಒಂದು ಬಿಲ್ಲನ್ನು ಹಾಕಿ ನಮಗೆ ಕಳುಹಿಸಿಕೊಡಿ; ನಾವು ಆ ಹಣವನ್ನೆಲ್ಲಾ ನಿಮಗೆ ವಾಪಸು ಕೊಡಿಸಿಕೊಡುತ್ತೇವೆಂದು ಹೇಳಿದ್ದರು. ಆದರೆ ಆ ಪ್ರಕಾರ ಪಟೇಲ್ ಶಾನುಭೋಗರುಗಳ ಕೈಗೆ ಇದುವರೆಗೂ ಯಾವ ಹಣವೂ ಬಂದಿರುವುದಿಲ್ಲ. ಇನ್ನು ಕೆಲವುಕಡೆ ಅಮಲ್ದಾರರುಗಳೂ ಷೇಕ್‌ದಾರರುಗಳೂ ಸೇರಿಕೊಂಡು ಎಲ್ಲಿ 50 ರೂಪಾಯಿಗಳು ಒಂದು ಪೋಲಿಂಗ್ ಸ್ಟೇಷನ್‌ಗೆ ಖರ್ಚಾಗಿರುತ್ತವೆಯೋ ಅಂಥಕಡೆ 100 ರೂಪಾಯಿಗಳಿಗೆ ಬಿಲ್ಲನ್ನು ಬರೆಸಿಕೊಂಡು ಅವರಿಗೆ 50 ರೂಪಾಯಿಗಳನ್ನು ಕೊಟ್ಟಿರತಕ್ಕಂಥ ನಿದರ್ಶನಗಳೂ ಕೂಡ ಇರುತ್ತವೆ. ಈ ಬಾಬಿನಲ್ಲಿ ಹೀಗೆ ಹಣ ದುರುಪಯೋಗವಾಗುತ್ತಿದೆ. ಹೀಗೆ ಮಧ್ಯವರ್ತಿಜನರಿಗೆ ಈ ಹಣ ಸೇರದಿರುವಂತೆ ಒಂದು ವ್ಯವಸ್ಥೆಯನ್ನು ಏರ್ಪಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

*ಶ್ರೀ ಬಿ. ಚಾಮಯ್ಯ (ಪಾಂಡವಪುರ).—ಸ್ವಾಮಿ, ಈಗ ಸಭೆಯ ಮುಂದೆ ಮಂಡಿಸಿರತಕ್ಕ 13 ಮತ್ತು 14ನೆಯ ಡಿಮ್ಯಾಂಡ್ ಮನವಿಗಳಬಗ್ಗೆ ಮಾತನಾಡುತ್ತ ನಾನು ಕೆಲವು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಮೊಟ್ಟಮೊದಲನೆಯದಾಗಿ ಈ 13ನೆಯ ಡಿಮ್ಯಾಂಡಿನಲ್ಲಿ ಮಂತ್ರಿಗಳ ಸಂಬಳ, ಅವರ ಪ್ರವಾಸ ಭತ್ಯ ಇತ್ಯಾದಿ ಬಾಬುಗಳಿಗೆಂದು ಇದರಲ್ಲಿ ಒದಗಿಸಿರುವ ಮೊತ್ತ ಬಹಳ ಹೆಚ್ಚಾಯಿತು. ನಮ್ಮ ದೇಶದ ಆದಾಯವೇನಿದೆಯೆಂಬುದನ್ನು ನೋಡಿಕೊಂಡು ಅದಕ್ಕೆ ತಕ್ಕ ಹಾಗೆ ಈ ಬಾಬಿಗೆ ಹಣವನ್ನು ಒದಗಿಸಬೇಕಾಗಿತ್ತೆಂದು ಹೇಳುತ್ತೇನೆ. ಹಾಗೆ ಮಾಡದಿರುವುದರಿಂದ ಈಗ ಈ ಬಾಬಿಗೆ ಒದಗಿಸಿರುವ ಮೊತ್ತಕ್ಕೂ ನಮ್ಮ ದೇಶಕ್ಕೆ ಬರತಕ್ಕ ಆದಾಯಕ್ಕೂ ಬಹಳ ವ್ಯತ್ಯಾಸವಾಗಿದೆ. ಆದಕಾರಣ ಈಗಲೂ ಸಹ ಮಂತ್ರಿಗಳು ತಮ್ಮ ಖರ್ಚು ವೆಚ್ಚಗಳ ಬಗ್ಗೆ ಒದಗಿಸಿರುವ ಈ ಮೊಬಲಗನ್ನು ಇನ್ನೂ ಕಡಮೆ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಈ ಹಿಂದೆ ಈ ಮಂತ್ರಿಗಳು ಅಧಿಕಾರಕ್ಕೆ ಬರುವ ಮುಂಚೆ ನಾವು ಕೇವಲ ತಿಂಗಳೊಂದಕ್ಕೆ 500 ರೂಪಾಯಿಗಳ ಸಂಬಳದ ಮೇಲೆ ಕೆಲಸ ಮಾಡುತ್ತೇವೆ; ಅಧಕ್ಕಿಂತ ಹೆಚ್ಚಿನ ಸಂಬಳವನ್ನು ಯಾರಿಗೂ ಕೊಡುವುದಿಲ್ಲ; ಎಂಥ ಅಧಿಕಾರಿಯೇ ಆಗಲಿ ಅವನ ಸಂಬಳ 500ಕ್ಕಿಂತ ಹೆಚ್ಚಾಗಿರಲು ನಾವು ಅಧಿಕಾರಕ್ಕೆ ಬಂದರೆ ಅವಕಾಶ ಕೊಡುವುದಿಲ್ಲವೆಂದು ಹೇಳುತ್ತಿದ್ದರು. ಅವರು ಅಧಿಕಾರಕ್ಕೆ ಬಂದರೆ 500 ರೂಪಾಯಿಗಳಿಗಿಂತ ಹೆಚ್ಚು ಸಂಬಳ ತೆಗೆದುಕೊಳ್ಳುವುದಿಲ್ಲವೆಂದು ದೇಶಾದ್ಯಂತವೂ ಪ್ರಚಾರ ಮಾಡಿದ್ದರು. ಆದರೆ ಅವರೇನೋ ಅಧಿಕಾರಕ್ಕೆ ಬಂದರು. ಆದರೆ ಅವರು ಜನರಿಗೆ ಕೊಟ್ಟಿದ್ದ ವಾಗ್ದಾನವನ್ನು ಮಾತ್ರ ಉಳಿಸಿಕೊಳ್ಳಲಿಲ್ಲ. ಆದರೆ ಈಗಲೂ ಕೂಡ ಅವರು ತಮ್ಮ ಸಂಬಳವನ್ನು ಹಿಂದೆ ಹೇಳಿಕೊಳ್ಳುತ್ತಿದ್ದಹಾಗೆ ಕಡಮೆ ಮಾಡಿಕೊಳ್ಳಬೇಕೆಂದು ತಮ್ಮ ಮೂಲಕ ನಾನು ಅವರನ್ನು ಕೇಳಿಕೊಳ್ಳುತ್ತೇನೆ. ನಮ್ಮ ರಾಜ್ಯದ ಗೌರ್ನರ್ ಅವರು ತಮ್ಮ ಸಂಬಳವನ್ನು ಇದುವರೆಗೂ ತೆಗೆದುಕೊಂಡಿಲ್ಲ. ದೇಶ ಬಹಳ ತೊಂದರೆಯಲ್ಲಿದೆ ಆ ಕಾರಣದಿಂದ ನನಗೆ ಈ ಸಂಬಳವೇನೂ ಬೇಕಾಗಿಲ್ಲವೆಂದು ಅವರು ಆ ಸಂಬಳವನ್ನೇ ಬಿಟ್ಟುಬಿಟ್ಟಿದ್ದಾರೆ. ಇದೇ ಉದಾಹರಣೆಯನ್ನು ನಮ್ಮ ಮಂತ್ರಿಗಳೂ ಸಹ ಅನುಸರಿಸಬೇಕಾದದ್ದು ಅಗತ್ಯ. ನಮ್ಮ ಗೌರ್ನರ್ ಸಂಬಳ ಬೇಕಾಗಿಲ್ಲವೆಂದು ತಿಳಿಸಿರತಕ್ಕ ಸಮಾಚಾರ ಈ ದಿವಸದ ಪತ್ರಿಕೆಗಳಲ್ಲೆಲ್ಲ ಬಂದಿದೆ. ಆದ್ದರಿಂದ ಈಗ ಅವರ ಎರಡನೆಯ ಹಂತದಲ್ಲಿರತಕ್ಕ ಉನ್ನತ ಅಧಿಕಾರಿಗಳಾದ ಮಂತ್ರಿಗಳು ತಮ್ಮ ಸಂಬಳವನ್ನು ಖೋತಾ ಮಾಡಿಕೊಳ್ಳಬೇಕಾದದ್ದು ಅಗತ್ಯವೆಂದು ನಾನು ಅವರಲ್ಲಿ ಮನವಿಮಾಡಿಕೊಳ್ಳುತ್ತೇನೆ. ಈಗ

(ಶ್ರೀ ಬಿ. ಚಾಮಯ್ಯ)

ಮಂಡಿಸಿರತಕ್ಕ ಮನವಿಯಲ್ಲಿ ಮಂತ್ರಿಗಳ ಪ್ರವಾಸಕ್ಕೆ ಕಾರು-ಸಿಬ್ಬಂದಿ ಖರ್ಚು ಇತ್ಯಾದಿಗಳಿಗಾಗಿ 5 ಲಕ್ಷ 52 ಸಾವಿರ ರೂಪಾಯಿಗಳ ಮೊತ್ತವನ್ನು ಒದಗಿಸಿರುತ್ತಾರೆ. ಇದು ಬಹಳ ಭಾರಿ ಮೊತ್ತವಾಯಿತು. ನಮ್ಮ ಬಡ ರಾಜ್ಯದಲ್ಲಿ ಮಂತ್ರಿಗಳು ಈ ಬಾಬಿಗಾಗಿ ಇಷ್ಟು ಮೊಬಲಗನ್ನು ಖರ್ಚು ಮಾಡುವುದು ಸರಿಯಲ್ಲ.

ಅಧ್ಯಕ್ಷರು.—ಸದಸ್ಯರ ಸಂಬಳದ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಬಿ. ಚಾಮಯ್ಯ.—ಸದಸ್ಯರ ವಿಚಾರ ಹೇಳುವುದಾದರೆ ನಮ್ಮ ಪಕ್ಷದವರು, ನಾವು ಸಿದ್ಧವಾಗಿದ್ದೇವೆ. ಆದರೆ ಈ ವಿಚಾರದಲ್ಲಿ ಅಧಿಕಾರ ಪಕ್ಷದವರು ಮುಂದೆ ಬರಬೇಕಾಗಿದೆ.

Sri A. R. BADRI NARAYAN (Thirthahalli).—The Hon'ble Member must lead first.

ಶ್ರೀ ಬಿ. ಚಾಮಯ್ಯ.—ಆ ಕೆಲಸವನ್ನು ಮೊದಲು ತಾವು ಮಾಡಿದರೆ ಒಳ್ಳೆಯದು.

ಈಗ ಅಧಿಕಾರಿಗಳ ಸಂಬಳದಲ್ಲೂ ಕೂಡ ಬಹಳ ಅಂತರವಿದೆ. ಕೆಲವರಿಗೆ ಒಂದು ಸಾವಿರ ರೂಪಾಯಿಗಳ ಸಂಬಳವಿದ್ದರೆ ಮತ್ತೆ ಕೆಲವರಿಗೆ ತಿಂಗಳಿಗೆ ಎರಡು ಎರಡೂವರೆ ಸಾವಿರದವರೆಗೂ ಸಂಬಳವಿರುತ್ತದೆ. P.S.C. ಆಫೀಸಿನಲ್ಲಿ ತಾವು ಆ ಸಿಬ್ಬಂದಿವರ್ಗಕ್ಕೇನು ಸಂಬಳ ಕೊಡುತ್ತಿದ್ದೀರೋ ಅಷ್ಟೇ ಮೊಬಲಗನ್ನು ಕೇವಲ ಮೂರು ಜನ ಮೆಂಬರುಗಳಿಗೆ ಕೊಡುತ್ತಿದ್ದೀರಿ. ಇದೇನು ನ್ಯಾಯ ? ಮೂರು ಜನರಿಗೂ ಅಷ್ಟೇ ದುಡ್ಡು—ಅಷ್ಟೊಂದು ಭಾರಿ ಸಿಬ್ಬಂದಿಗೂ ಅಷ್ಟೇ ದುಡ್ಡು ! ಈ ದಿವಸ ಸಂಬಳ ಸಾರಿಗೆಯ ರೂಪದಲ್ಲಿ ಖರ್ಚಾಗುತ್ತಿರುವ ಮೊಬಲಗಿನಲ್ಲಿ ಅರ್ಧಕ್ಕೂ ಹೆಚ್ಚಾದ ಮೊಬಲಗು ಕೇವಲ ದೊಡ್ಡ ದೊಡ್ಡ ಹುದ್ದೇದಾರರುಗಳಾದ ಕೆಲವರಿಗೆ ಸಂದಾಯವಾಗುತ್ತಿದೆ. ಹೀಗಾಗಿ ಈಗಿನ ಸರ್ಕಾರಕ್ಕೆ ಆ ಬಡಪಾಯಿಗಳು ಲಕ್ಷ್ಯದಲ್ಲೇ ಇಲ್ಲ. ಈ ಅನ್ಯಾಯವನ್ನು ಖಂಡಿತ ಆದಷ್ಟು ಬೇಗ ತಡೆಗಟ್ಟಬೇಕು. ಕಾಂಗ್ರೆಸ್ ಸಂಸ್ಥೆಯವರು ಈ ದಿವಸ ಎಲ್ಲಿ ನೋಡಿದರೂ ದೇಶದಲ್ಲಿ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿಯನ್ನು ಜಾರಿಗೆ ತರುತ್ತೇವೆಂದು ಪ್ರಚಾರಮಾಡುತ್ತಿದ್ದಾರೆ. ಈ ದೇಶದಲ್ಲೇ ಅಲ್ಲದೆ ಇಂಗ್ಲೆಂಡಿನಲ್ಲಿ ಸಹ ಇದರ ಪ್ರಚಾರ ನಡೆಯುತ್ತಿದೆ. ಆದರೆ ತಾವು ಪ್ರಚಾರ ಮಾಡುತ್ತಿರುವುದಕ್ಕನುಗುಣವಾಗಿ ಅದನ್ನು ಅನುಷ್ಠಾನಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹೊರಗಡೆಯಿಂದ ಬರತಕ್ಕ ರಾಜಕೀಯ ಅತಿಥಿಗಳ ಸತ್ಕಾರದ ಬಗ್ಗೆ ಸರ್ಕಾರ ಬಹಳ ಹಣವನ್ನು ಖರ್ಚು ಮಾಡುತ್ತಿದೆ. ಇಲ್ಲಿ ಈ ಬಾಬಿಗೆ ಆರು ಲಕ್ಷ ಚಿಲ್ಲರೆ ಎಂದು ತೋರಿಸಿದ್ದಾರೆ. ಆದರೆ ಈ ಬಾಬಿಗೆ ಇಷ್ಟು ದುಡ್ಡನ್ನು ಖರ್ಚುಮಾಡುವುದು ನ್ಯಾಯವಲ್ಲ. ನಾವು ಹೊರಗಡೆ ಹೋದರೆ ನಮಗೋಸ್ಕರ ಯಾರೂ ಹೀಗೆ ಖರ್ಚುಮಾಡುವುದಿಲ್ಲ. ಹಾಗಿರುವಲ್ಲಿ ನಾವು ಹೊರಗಡೆಯಿಂದ ಬರತಕ್ಕ ಅತಿಥಿಗಳಿಗಾಗಿ ಬಡರೈತರಿಂದ ವಸೂಲ್ಮಾಡತಕ್ಕ ಕಂದಾಯ ಕವಳಿಗೆಯ ಮೊಬಲಗಿನಲ್ಲಿ ಇಷ್ಟೊಂದು ಭಾರಿ ಮೊತ್ತವನ್ನು ಖರ್ಚುಮಾಡುವುದು ಸರ್ವಥಾ ಸರಿಯಾದ್ದದಲ್ಲ. ಇದನ್ನು ಕೂಡಲೇ ಕಡಮೆಮಾಡಬೇಕೆಂದು ಒತ್ತಾಯಮಾಡಿ ಹೇಳುತ್ತೇನೆ. ಈ ಹೋಟೆಲ್ ಮೆಟ್ರಪೋಲನ್ನು ಈಗ ಬಾಡಿಗೆಗೆ ಕೊಟ್ಟಿದ್ದಾರೆ. ಆದಾಗ್ಗೂ ಅದರ ರಿಪೇರಿ ಮತ್ತು ಉಸ್ತುವಾರಿಗಾಗಿ ಬಹಳ ಹಣವನ್ನು ತೆಗೆದಿಟ್ಟಿದ್ದಾರೆ. ಆದರೆ ಕಟ್ಟಡವನ್ನು ಯಾವಾಗ ಬಾಡಿಗೆಗೆ ಕೊಡಲಾಯಿತೋ ಆಗ ಅದರ ರಿಪೇರಿ—ಇತ್ಯಾದಿ ಖರ್ಚುಗಳನ್ನೆಲ್ಲ ಬಾಡಿಗೆಗೆ ಇರತಕ್ಕವರು ನೋಡಿಕೊಳ್ಳಬೇಕಾದದ್ದು ನ್ಯಾಯ. ಕೃಷ್ಣರಾಜಸಾಗರದಲ್ಲಿರತಕ್ಕ ಹೋಟಲಿನ ವಿಚಾರದಲ್ಲೂ ಹೀಗೆ ಹಣದ ವ್ಯಯ ಜಾಸ್ತಿಯಾಗಿದೆ. ಆದರೆ ಆ ಹೋಟಲಿಗೆ ಹೋಗತಕ್ಕವರೆಲ್ಲ ಕೇವಲ ದೊಡ್ಡ ದೊಡ್ಡ ಮನುಷ್ಯರು ಮಾತ್ರ. ತಿಂಗಳಲ್ಲಿ ಕೇವಲ ಎಂಟು ಹತ್ತು ದಿವಸಗಳು ಮಾತ್ರ ಜನರು ಅಲ್ಲಿಗೆ ಬರಬಹುದು. ದಿನ ಒಂದಕ್ಕೆ 18—20 ರೂಪಾಯಿಗಳ ಬಾಡಿಗೆ ತೆರಲು ಶಕ್ತಿಯುಳ್ಳವರೇ ಅಲ್ಲಿಗೆ ಬರಬೇಕಾಗಿದೆ. ಇಂಥ ಒಂದು ಹೋಟಲಿಗಾಗಿ ಸರ್ಕಾರ ಖರ್ಚು ಮಾಡುತ್ತಿರುವ ದುಡ್ಡು ಎಷ್ಟೊಂದು?

ಆದ್ದರಿಂದ ಅದನ್ನು ಹರಾಜುಮಾಡಿ ಕೊಟ್ಟು, ಅದಕ್ಕಾಗುತ್ತಿರುವ ಖರ್ಚನ್ನು ಉಳಿಸಿ; ನಮಗೆ ಬೇಕಾದಾಗ ಇಷ್ಟು ರೂಮುಗಳನ್ನು ಬಿಟ್ಟುಕೊಡಬೇಕು ಎಂದು ಕಂಡೀಷನ್ ಬೇಕಾದರೆ ಹಾಕಿ. ಆ ರೀತಿಮಾಡಿ ಹಣವನ್ನು ಉಳಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಆಮೇಲೆ ಮೈಸೂರು, ಬೆಂಗಳೂರು, ಬೆಳಗಾಂ ಮತ್ತು ಗುಲ್ಬರ್ಗ ಎಂದು ಹೇಳಿ ನಾಲ್ಕು ಡಿವಿಜನ್ಗಳನ್ನು ತಾವು ಏರ್ಪಾಡು ಮಾಡಿದ್ದೀರಿ. ಅವಕ್ಕೆ ನಾಲ್ಕು ಜನ ಡಿವಿಜನಲ್ ಕಮಿಷನರುಗಳನ್ನು ನೇಮಕಮಾಡಿರುವುದರಿಂದ ಸುಮಾರು ಹನ್ನೊಂದು ಲಕ್ಷ ರೂಪಾಯಿಗಳು ಖರ್ಚಾಗುತ್ತಾ ಇವೆ. ಈ ವಿಷಯದಲ್ಲಿ ನಮ್ಮ ಮಾನ್ಯ ಸ್ನೇಹಿತರಾದ ದೇವರಾಜ ಅರಸು ಅವರು ಹೇಳಿದ ಅಭಿಪ್ರಾಯವೇ ನನ್ನ ಅಭಿಪ್ರಾಯ. ಈಗ ಜನಗಳಿಗೆ ಅವರಿಂದ ಅಷ್ಟೇನೂ ಸುಖವಾಗಿಲ್ಲ. ನಮ್ಮ ತೊಂದರೆಗಳು ಬೇಗ ನಿವಾರಣೆ ಆಗುತ್ತಿಲ್ಲ. ಡೆಪ್ಯುಟಿ ಕಮಿಷನರುಗಳಿಗೇ ಹೆಚ್ಚು ಅಧಿಕಾರ ಕೊಟ್ಟು ಅವರ ಮೂಲಕ ಈ ಕೆಲಸಗಳನ್ನೆಲ್ಲ ನಡೆಸುವುದು ಬಹಳ ಅಗತ್ಯ. ಅಧಿಕಾರಿಗಳನ್ನು ಹೆಚ್ಚಾಗಿ ನೇಮಕಮಾಡುತ್ತಾ ಹೋಗುತ್ತಿದ್ದೀರಿ. ಇದರಿಂದ ತಮಗೆ ಬೇಕಾದವರನ್ನು ಸೇರಿಸಿಕೊಳ್ಳುವುದಕ್ಕೆ ಇಂತಹ ಆಫೀಸರುಗಳ ನೇಮಕ ಮಾಡುತ್ತಾ ಇದ್ದೀರಿ ಎಂದು ಜನಗಳು ಅಂದುಕೊಳ್ಳುತ್ತಾ ಇದ್ದಾರೆ. ಇದಕ್ಕೆಲ್ಲಾ ಅವಕಾಶವಿಲ್ಲದ ಹಾಗೆ ತಕ್ಕ ಏರ್ಪಾಡು ಮಾಡಬೇಕು. ಡಿವಿಜನಲ್ ಕಮಿಷನರುಗಳನ್ನು ವಜಾಮಾಡಿ ಅವರ ವಿಷಯದಲ್ಲಾಗತಕ್ಕ ಖರ್ಚನ್ನು ಉಳಿಸಬೇಕು. ಆ ಕೆಲಸವನ್ನು ಡೆಪ್ಯುಟಿ ಕಮಿಷನರಿಗೆ ವಹಿಸಿ ಆ ಮೂಲಕ ದಕ್ಷತೆಯಿಂದ ಕೆಲಸ ಮಾಡಿಸುವುದಕ್ಕೆ ತಾವು ಅವಕಾಶಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಅರ್ಜಿ ವಿಲೇವಾರಿ ಬಹಳ ನಿಧಾನವಾಗುತ್ತಾ ಇದೆ. ಅದರಲ್ಲೂ ಕೂಡ ದರಖಾಸ್ತು ಬಹಳ ನಿಧಾನವಾಗುತ್ತಾ ಇದೆ ಎಂದು ಹೇಳಬೇಕಾಗಿದೆ. ಆಹಾರ ಇಲ್ಲ ಎಂದು ಹಾಹಾಕಾರಪಡುತ್ತಿರುವಾಗ, ಎಷ್ಟೋ ಜನಕ್ಕೆ ಜಮೀನುಗಳನ್ನು ಕೊಟ್ಟಿಲ್ಲ. ಸೂಕ್ತವಾಗಿ ಪರಿಶೀಲನೆಮಾಡಿ ಜಾಗ್ರತೆ ಜಮೀನು ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಶ್ರೀಮಾನ್ ಚೆನ್ನಬಸಪ್ಪ ಅವರು ಮಂತ್ರಿಗಳಾಗಿದ್ದಾಗ ಅವರು ಈ ವಿಷಯದಲ್ಲಿ ಬಹಳ ಮುತುವರ್ಜಿ ವಹಿಸುತ್ತಾ ಇದ್ದರು. ಬಡವರಿಗೆ ಜಮೀನು ಕೊಡಬೇಕೆಂದು ಹೇಳುತ್ತಾ ಇದ್ದರು. ಈಗ ಅದು ನಿಂತುಹೋಗಿದೆ. ಹೆಚ್ಚು ಶ್ರದ್ಧೆ ವಹಿಸಿ ಜಮೀನುಗಳು ಬಡವರಿಗೆ ವಿಲೇಆಗುವ ಹಾಗೆ, ಜಾಗ್ರತೆ ಅರ್ಜಿ ಫೈಸಲು ಆಗುವ ಹಾಗೆ ವ್ಯವಸ್ಥೆಮಾಡಬೇಕೆಂದು ಸರ್ಕಾರದವರನ್ನು ಈ ಸಮಯದಲ್ಲಿ ಒತ್ತಾಯ ಮಾಡುತ್ತೇನೆ.

ಕೊನೆಯದಾಗಿ ಇಷ್ಟೊಂದು ಭಾರಿ ಮೊಬಲಗನ್ನು ನಾವು ಅನುಮೋದಿಸುವುದಕ್ಕೆ ಸಿದ್ಧವಾಗಿಲ್ಲ ಎಂದು ಹೇಳಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ ಮತ್ತು ಸ್ಪೀಕರ್ ಸಾಹೇಬರು ನನಗೆ ಇಷ್ಟು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸುತ್ತೇನೆ.

ಶ್ರೀ ಸಿ. ಎಸ್. ಹುಲಕೋಟಿ (ಮುಂಡರಗಿ).—ಅಧ್ಯಕ್ಷ ಮಹಾಶಯರೇ, ನಾನು 13 ಮತ್ತು 14ನೆಯ ಡಿಮಾಂಡುಗಳನ್ನು ಸಮರ್ಥನೆಮಾಡುವುದರ ಸಲುವಾಗಿ ಎದ್ದು ನಿಂತಿದ್ದೇನೆ. ಮುಖ್ಯವಾಗಿ ಈ ಸಂದರ್ಭದಲ್ಲಿ ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ವಿಷಯದ ಸಲುವಾಗಿ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಡಿಸ್ಟ್ರಿಕ್ ಅಡ್ಮಿನಿಸ್ಟ್ರೇಷನ್ ಸಂಬಂಧ ಸಾರ್ವಜನಿಕರಿಗೆ ಬಹಳವಾಗಿ ಬರುತ್ತದೆ. ಪೋಲೀಸ್ ಅಡ್ಮಿನಿಸ್ಟ್ರೇಷನ್ ಸಂಪರ್ಕ ಜನರಿಗೆ Rule of the law maintain ಮಾಡುವುದರ ಸಲುವಾಗಿ ಎಷ್ಟು ಅವಶ್ಯಕ ಸಂಪರ್ಕ ಬರುತ್ತದೆಯೋ ಅಷ್ಟೇ ಡಿಸ್ಟ್ರಿಕ್ ಅಡ್ಮಿನಿಸ್ಟ್ರೇಷನ್ ಸಂಪರ್ಕ ಸಹಿತ ಬರುತ್ತದೆ. ಆದ್ದರಿಂದ ಜನರಿಗೆ ಯಾವ ಪ್ರಕಾರದ ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ಈಗಿನ ಕಾಲಕ್ಕೆ ಅವಶ್ಯವಾಗಿದೆ ಎಂಬುದನ್ನು ನಾವು ಲಕ್ಷ್ಯದಲ್ಲಿಟ್ಟುಕೊಳ್ಳತಕ್ಕದ್ದು ಬಹಳ ಮಹತ್ತ್ವದ ಸಂಗತಿ ಎಂದು ನನಗೆ ಅನಿಸುತ್ತದೆ. ನಾನು ಹಿಂದಿನ ಮುಂಬಯಿ ಕರ್ನಾಟಕದ ಆಡಳಿತ ವಿಷಯದ ಸಂಬಂಧದಲ್ಲಿ ಇದ್ದ ನನ್ನ ಅನುಭವದ ಪ್ರಕಾರ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್‌ನಲ್ಲಿ ತಾಲ್ಲೂಕು ಲೆವಲ್, ಪ್ರಾಂತ ಲೆವಲ್, ಡಿಸ್ಟ್ರಿಕ್ಟ್ ಲೆವಲ್ ಈ ಪ್ರಕಾರ ಮೂರು ತರಹದ ಭಾಗಗಳು ಮುಖ್ಯವಾಗಿ ಇವೆ. ತಾಲ್ಲೂಕು ಲೆವಲ್‌ನಲ್ಲಿ—ನಮ್ಮ ಭಾಗದಲ್ಲ ಮಾಮಲೇದಾರರು ಎಂದು ಹೇಳುತ್ತೇವೆ. ಇಲ್ಲಿ ಅಮಲ್ದಾರರು ಎಂದು ಹೇಳುತ್ತಾರೆ—ಆ ಅಮಲ್ದಾರರ ಕರ್ತವ್ಯ ಎಂದರೆ, ಜನರ ಸಂಪರ್ಕ ಬೆಳೆಸುವುದು, ಹಳ್ಳಿಗಳಿಗೆ ಭೇಟಿಕೊಡುವುದು, ರೆವಿನ್ಯು ಅಡ್ಮಿನಿಸ್ಟ್ರೇಷನ್ ಕಾಯ್ದುಕೊಳ್ಳುವುದು, ಜಮಿನಾನು ಸಂಬಂಧದ ರೆಕಾರ್ಡ್ ಆಫ್ ರೈಟ್ಸ್ ಕಾಯ್ದುಕೊಳ್ಳುವುದು, ಶಹರದಲ್ಲಿ ಸಿಟಿ ಸರ್ವೇ ನಡೆಸುವುದು ಮತ್ತು ಲಾವಣಿ ಹಣದ ಬಾಕಿ ವಸೂಲಿ ಸಂಬಂಧದ ತಕರಾರು ಇದ್ದರೆ ಸಂಬಂಧಪಟ್ಟ ಮುದ್ದತಿ ದಾವೆಗಳಲ್ಲಿ ನಿರ್ಣಯ ಕೊಡತಕ್ಕದ್ದು, ಮತ್ತು ಟೆರ್ನೆನ್ಸಿ ಕಾಯದೆ ಕೇಸುಗಳನ್ನು ಸಹ ಅವರು ನಿರ್ಣಯಮಾಡಿ ಕೊಡತಕ್ಕದ್ದು. ಇದೆಲ್ಲ ಅವರ ಅಧಿಕಾರಕ್ಕೆ ಸೇರಿದ್ದು. ಇದಲ್ಲದೆ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಸಭೆಯ ಕಾರ್ಯಮಾಡುವದು, ಕಬ್ಬಿಣ ಹಂಚುವುದು, ಸಿಮೆಂಟ್ ಹಂಚುವುದು ಹೀಗೆ ಅನೇಕ ತರಹದ ಕೆಲಸಗಳು ಅವರಿಗೆ ಇರುತ್ತವೆ. ಈ ಸಂದರ್ಭದಲ್ಲಿ ಅವರು 12 ತಾಸಿನಿಂದ 14 ತಾಸಿನವರೆಗೂ ಕೆಲಸ ಮಾಡಿದರೂ ಸಹ ಆ ಕೆಲಸಗಳು ಯೋಗ್ಯವಾದ ರೀತಿಯಲ್ಲಿ ನೆರವೇರಿ ಯಾವು ಎಂದು ನನಗೆ ಅನ್ನಿಸುವುದಿಲ್ಲ. ಇದಲ್ಲದೆ ಮೇಲಿನ ಅಧಿಕಾರಿಗಳು ಬಂದ ಕಾಲಕ್ಕೆ ಇವರು ಅವರನ್ನು ತಾಲ್ಲೂಕಿನಲ್ಲಿ ಸ್ವಾಗತಮಾಡಲಿಕ್ಕೆ ಒಂದು ತಾಸು, 2 ತಾಸು, 3 ತಾಸು ಅಥವಾ 4 ತಾಸುಗಳವರೆಗೂ ಕಾಯಬೇಕಾಗುತ್ತದೆ. ಮತ್ತು ತಿಂಗಳಿಗೆ ಒಮ್ಮೆ ಅಥವಾ 2 ಸಾರಿ ಜಿಲ್ಲಾಸ್ಥಾನಕ್ಕೆ ಅವರನ್ನು ಕರೆಯಿಸಲಾಗುತ್ತದೆ. ಈಗಿನ ನಿಯಮದ ಪ್ರಕಾರ ಮಳೆಗಾಲ ಇಲ್ಲದ ಕಾಲದಲ್ಲಿ ತಿಂಗಳಿನಲ್ಲಿ 20 ದಿವಸವಾದರೂ ಹೊರಗೆ ತಿರುಗಿ Camp ಮಾಡಬೇಕಾಗುತ್ತದೆ. ಮತ್ತು ಮಳೆಗಾಲದಲ್ಲಿ ಅವಧಿ ಕಡಮೆಮಾಡಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಅವರು ತಾಲ್ಲೂಕಿನಲ್ಲಿರತಕ್ಕ ಎಲ್ಲಾ ಸ್ಥಳಗಳಿಗೂ ವರ್ಷದಲ್ಲಿ ಎರಡು ಸಾರಿಯಾದರೂ ಭೇಟಿಕೊಡುವುದು ಅವಶ್ಯವಿದ್ದರೂ ಕೂಡಾ ಒಮ್ಮೆಯಾದರೂ ಭೇಟಿ ಕೊಡುವುದಿಲ್ಲ. ರಸ್ತೆಗಳಿಗೆ ಸಮೀಪ ಇದ್ದ ಹಳ್ಳಿಗಳಿಗೆ ಮೇಲಿಂದ ಮೇಲೆ ಹೋಗುತ್ತಿರುತ್ತಾರೆ. ಆದರೆ ರಸ್ತೆಗೆ ಹಿಂದೆ ಇರತಕ್ಕಂಥ ಮತ್ತು ರಸ್ತೆಗೆ ಬಾಜು ಇಲ್ಲದೇ ಇರುವ ಹಳ್ಳಿಗಳಿಗೆ ಸಾಕಷ್ಟು ಲಕ್ಷ್ಯಕೊಡುವುದಕ್ಕೆ ಆಗುವುದಿಲ್ಲ. ಇದರಿಂದ ಜಮೀನುಗಳ ಹಕ್ಕಿನ ಸಂಬಂಧದ ವಿಷಯದಲ್ಲಿ ಬಹಳ ಮಹತ್ತ್ವದ ಕಾರ್ಯಕ್ರಮವನ್ನು ಅವರು ಮಾಡತಕ್ಕದ್ದು ಅವಶ್ಯವಿದ್ದು ಮಾಡುವುದು ಆಗುವುದಿಲ್ಲ. ಗ್ರಾಮಗಳ ರೆಕಾರ್ಡ್ ಆಫ್ ರೈಟ್ಸ್ ಕೆಲಸವನ್ನು ನಮ್ಮಲ್ಲಿ ಶ್ಯಾನುಭೋಗರು ಅಥವಾ ಕುಲಕರಣಿ ಎನ್ನುವವರು ನಡೆಸುತ್ತಾರೆ ಅವರ ವಿಷಯಕ್ಕೆ ಈ ಸಂದರ್ಭದಲ್ಲಿ ಹೇಳಲು ಶಕ್ಯವಿಲ್ಲ. ಅದು ರೆವಿನ್ಯೂ ಡಿಮ್ಯಾಂಡಿನ ಕೆಳಗೆ ಬರುತ್ತದೆ. ಮಾಮಲೇದಾರರು ಸಾಕಷ್ಟು ಹಳ್ಳಿಗಳಿಗೆ ಹೋಗಿ ಅಲ್ಲಿ ರಾತ್ರಿ ವಸತಿಮಾಡಿ ರೆಕಾರ್ಡ್ ಆಫ್ ರೈಟ್ಸ್ ವಿಷಯಕ್ಕೆ ಲಕ್ಷ್ಯಕೊಟ್ಟು ತಪಾಸುಮಾಡಿ, ನೋಡದೇ ಇರುವುದರಿಂದ ರೆಕಾರ್ಡ್ ಆಫ್ ರೈಟ್ಸ್‌ನಲ್ಲಿ ಬೇಕಾದಷ್ಟು ಅದಲು ಬದಲು ಮಾಡುವುದು ಜನರ ನಜರಿಗೆ ಬರಹತ್ತಿದೆ. ಇದರಿಂದ ತಂಟೆ ತಕರಾರುಗಳು ಹೆಚ್ಚಾಗಿ ಬರಹತ್ತಿವೆ. ಟೆರ್ನೆಸಿ ಕಾಯಿದೆಯಲ್ಲೂ ಸಹ ಬಹಳ ಗೊಂದಲ ಆಗ ಹತ್ತಿದೆ. ಇದರಿಂದ ಉದ್ಭವಿಸತಕ್ಕ ಕೇಸುಗಳ ನಿರ್ಣಯ ಯೋಗ್ಯ ಅವಧಿಯಲ್ಲಿ ಆಗುವುದಿಲ್ಲ. ಸಾಧ್ಯವಾದಷ್ಟು ದಾವೆಗಳು 6 ತಿಂಗಳು ಒಳಗೆ ನಿರ್ಣಯವಾಗಬೇಕೆಂದು ನಿಯಮ ಇದೆ. ಆದರೆ ಅವು ಒಂದು ಅಥವಾ ಎರಡು ವರ್ಷಗಳಾದರೂ ನಿರ್ಣಯವಾಗುವುದಿಲ್ಲ. ಟೆರ್ನೆಸಿ ದಾವೆಗಳು ತೀವ್ರವಾಗಿ ನಿರ್ಣಯವಾಗಬೇಕೆಂದಿದ್ದರೂ ಕೂಡ ಬಹಳ ನಿಧಾನವಾಗಹತ್ತಿವೆ. ಇದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಅದೂ ಅಲ್ಲದೆ ಲ್ಯಾಂಡ್ ರೆಕಾರ್ಡ್ ಡಿಸ್ಪ್ಯುಟ್ಸ್ ಎಂದರೆ ತಕರಾರು ಅರ್ಜಿಗಳು ಅನೇಕ ರೀತಿಯಿಂದ ತಾಲ್ಲೂಕಿನ ಅಮಲ್ದಾರರಲ್ಲಿ ಬರಹತ್ತಿವೆ. ಅವುಗಳ ನಿರ್ಣಯವೂ ಸಹ ತೀವ್ರ ಆಗಬೇಕಾಗುತ್ತದೆ. ಆ ನಿರ್ಣಯ ಆಗದೇ ಇದ್ದದ್ದರಿಂದ ಹಕ್ಕಿನ ವಿಷಯದಲ್ಲಿ ತೊಂದರೆಗಳು ಉದ್ಭವವಾಗುತ್ತಿವೆ. ಹಳೆಯ ಮುಂಬಯಿ ರಾಜ್ಯದಲ್ಲಿ ಒಂದು ಸರ್ಕ್ಯುಲರ್ ಇತ್ತು. ಗ್ರಾಮದ ರೆಕಾರ್ಡ್‌ನಲ್ಲಿ ಹೆಚ್ಚು ಕಡಮೆ ಮಾಡಬೇಕಾದರೆ ಟೆನೆಂಟಿನ ಹೆಸರಾಗಲಿ, ಮಾಲೀಕರ ಹೆಸರಾಗಲಿ ಬದಲಾಯಿಸಬೇಕಾದಲ್ಲಿ ಅದಕ್ಕೆ ಇಬ್ಬರದೂ ಅರ್ಜಿ ಇದ್ದವಿನಾ ಬದಲಾಯಿಸಬಾರದು ಎಂದು. ಅದಕ್ಕೆ ಲಕ್ಷ್ಯಕೊಡದೇ ಆ ಸ್ಥಳದ ಅಧಿಕಾರಿಗಳು ಅವುಗಳನ್ನು ಹೆಚ್ಚುಕಮ್ಮಿ ಮಾಡಿ ಜನರನ್ನು ತೊಂದರೆಗೆ ಈಡುಮಾಡಿರುತ್ತಾರೆ. ಇದನ್ನು ತಪ್ಪಿಸಬೇಕಾದರೆ ತಾಲ್ಲೂಕು ಅಮಲ್ದಾರರು ಮೇಲಿಂದಮೇಲೆ ಭೇಟಿಕೊಟ್ಟು ರೆಕಾರ್ಡ್ ಆಫ್ ರೈಟ್ಸ್ ಸರಿಪಡಿಸುವ ಅಮಲಿನಲ್ಲಿ ಹೋಗದ ಹೊರತು ಈ ಘೋರಾಳಿ ತಪ್ಪುವುದಿಲ್ಲ.

5 P.M.

ಆದುದರಿಂದ ಅವರಿಗೆ ಸಾಕಷ್ಟು ಕೆಲಸದ ಅವಧಿ ಸಿಕ್ಕದೆ ಇದ್ದುದರಿಂದ ಕೆಲವು ಅಕ್ರಮಗಳಾಗಿವೆ. ಈಗ ನಮ್ಮೆಲ್ಲರಿಗೂ ಗೊತ್ತಾದಮಟ್ಟಿಗೆ Agricultural Income Tax Act ಎಂಬ ಹೆಸರಿನ ಶಾಸನ ಬರತಕ್ಕುದಾಗಿದೆ. ಆ ಆಕ್ಟಿನ ಪ್ರಕಾರ ಬರುವ ಉತ್ಪನ್ನವನ್ನು ಸಹಿತ ನಿರ್ಣಯಮಾಡಲಿಕ್ಕೆ ಅವರಿಗೆ ಅಧಿಕಾರ ಕೊಡುವ ಸೂಚನೆಯಿರುವುದಾಗಿ ತಿಳಿದು ಬರುತ್ತದೆ. ಇಷ್ಟು ಕೆಲಸಗಳನ್ನು ಮತ್ತು ಇತರ ಮೈನರ್ ಕೆಲಸಗಳನ್ನು ಅವರ ಕಡೆಗೆ ಒಪ್ಪಿಸುವುದರಿಂದ ಜನರಿಗೆ ತೊಂದರೆ

(ಶ್ರೀ ಸಿ. ಎಸ್. ಹುಲಕೋಟಿ.)

ಯಾಗುವುದಲ್ಲದೆ ಬಹಳ ಕಷ್ಟಕ್ಕೆ ಈಡಾಗುವ ಸಂಭವ ಬರುತ್ತದೆ. ಇದೇ ಮೇರೆಗೆ ಪ್ರಾಂತ ಲೆವೆಲ್‌ನಲ್ಲಿ ಅನೇಕ ಕೆಲಸಗಳನ್ನು ಮಾಡಬೇಕಾಗುತ್ತದೆ. ಅವರು ಸಹ ಕೆಲವು ದಿವಸಗಳು ಹೊರಗಡೆ ಅಡ್ಡಾಡುವುದು ಅವಶ್ಯಕವಿದೆ. ಅವರು ಕೂಡ ಮೇಲಿಂದ ಮೇಲೆ ಮೀಟಿಂಗುಗಳಿಗೆ ಹೋಗಬೇಕಾಗುತ್ತದೆ. ಸಾರ್ವಜನಿಕರ ಕೆಲಸದ ಕಡೆಗೆ ಲಕ್ಷ್ಯಕೊಡಬೇಕಾಗುತ್ತದೆ. ಟೆನೆನ್ಸಿ ಕಾಯಿದೆಯ ಅಪೀಲುಗಳನ್ನು ನಿರ್ಣಯಮಾಡಬೇಕಾಗುತ್ತದೆ. Record of rights ತಕರಾರು ಅಪೀಲುಗಳನ್ನು ನಿರ್ಣಯಮಾಡಬೇಕಾಗುತ್ತದೆ. ಇಂಥ ಅನೇಕ ಕೆಲಸಗಳು ಅವರ ಕಡೆಗೆ ಬರುತ್ತವೆ. ಇದಲ್ಲದೆ ಟ್ರೆಜರಿ ತಪಾಸಣೆ, ತಾಲ್ಲೂಕು ಕಚೇರಿ ತಪಾಸಣೆ ಮುಂತಾದ ಕೆಲಸಗಳು ಅನೇಕವಿರುತ್ತವೆ. ಮತ್ತೆ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್ ಕಡೆಗೆ ಮೇಲಿಂದ ಮೇಲೆ, ತಿಂಗಳಿಗೆ ಕನಿಷ್ಠ ಎರಡು ಮೂರು ಸಾರಿಯಾದರೂ ಹೋಗಬೇಕಾಗುತ್ತದೆ ಮತ್ತು ಮೇಲಿನವರು ಬಂದ ಕಾಲದಲ್ಲಿ ಅವರು ಎರಡುತಾಸು, ಮೂರುತಾಸು, ನಾಲ್ಕುತಾಸು ಹೀಗೆ ಕಾಯಬೇಕಾಗುವ ಪ್ರಸಂಗ ಬರುತ್ತದೆ. ಅಲ್ಲಿಂದ ಡಿಸ್ಟ್ರಿಕ್ಟ್ ಕಲೆಕ್ಟರ್ ಇರುತ್ತಾರೆ. ಅವರಿಗೆ ಇಷ್ಟೇ ಕೆಲಸವಿದೆ ಎಂದು ಹೇಳುವುದು ಕಠಿಣ. ಮೇಲೆ ವಿವರಿಸಿದ ಮೇಲ್ವಿಚಾರಣೆಯ ಕೆಲಸದ ಜೊತೆಗೆ ಡೆವಲಪ್‌ಮೆಂಟು ಬೋರ್ಡುಗಳಿವೆ, ಸಬ್ ಕಮಿಟಿಗಳಿವೆ. ಇವನ್ನು attend ಮಾಡಬೇಕಾಗುತ್ತದೆ; district peace ಕಾಯಬೇಕಾಗುತ್ತದೆ, magisterial work ಇರುತ್ತದೆ. ಅಲ್ಲದೆ ರೆವೆನ್ಯೂ ಅಪೀಲುಗಳೂ ಇರುತ್ತವೆ. ಇದರ ಜೊತೆಗೆ ಜಿಲ್ಲೆಯ ಯಾವತ್ತೂ ಕೆಲಸಗಳನ್ನು ಅವರು ನೋಡಬೇಕಾಗುತ್ತದೆ. ಕೆಲವು ತಾಲ್ಲೂಕುಗಳಿಗೆ ಭೇಟಿಕೊಟ್ಟು ಆಫೀಸು ತಪಾಸಣೆ ಮಾಡುವುದು ಸಹ ಅವರ ಕರ್ತವ್ಯವಿರುತ್ತದೆ. ಮೇಲಿನವರು ಬಂದ ಕಾಲಕ್ಕೆ ಅವರೂ ಸಹ ವಿಶೇಷ ವೇಳೆಯನ್ನು ಕಳೆಯಬೇಕಾಗುತ್ತದೆ. ಇಂಥ ಪ್ರಸಂಗದಲ್ಲಿ ಅವರಿಗೆ ಸಾಕಷ್ಟು ಕಾಲ ಸಿಕ್ಕದೆ ಇರುವುದರಿಂದ ಅವರು ಈ ಕೆಲಸಗಳನ್ನು ಮಾಡಲಿಕ್ಕೇ ಸಾಧ್ಯವಿಲ್ಲದೆ ಇರುವಾಗ ಅವರಿಗೆ ಮತ್ತೆ ಹೆಚ್ಚು ಹೆಚ್ಚು ಕೆಲಸಗಳನ್ನು ಒಪ್ಪಿಸುವುದರಿಂದ ಈಗಾಗಲೇ ಸಾಕಷ್ಟು ಕಡಮೆಯಾಗಿರುವ efficiency ಮತ್ತಷ್ಟು ಕಡಮೆಯಾಗಿ ಜನರಲ್ಲಿ ಅಸಂತೋಷ ಹೆಚ್ಚುವುದು. ಇವರಿಗೆ ಕೆಲಸ ಹೆಚ್ಚಾಗಿ, ಕೆಲಸದ ಕಡೆಗೆ ಸಾಕಷ್ಟು ಲಕ್ಷ್ಯಕೊಡದೆ ಹೋಗುವುದರಿಂದ ಜನರಲ್ಲಿ ಅಸಮಾಧಾನ ಹೆಚ್ಚಾಗುತ್ತಿದೆ. ಆದುದರಿಂದ ಹೆಚ್ಚು ಕಾರ್ಯಭಾರವನ್ನು ನಡೆಸುವುದಕ್ಕೆ ಕೆಲವು additional ಅಧಿಕಾರಿಗಳನ್ನು ನೇಮಿಸಿ ಅಥವಾ ಬೇರೆ ಅಧಿಕಾರಿಗಳನ್ನು ನೇಮಿಸಿ ಅವರಿಗೆ ಕೆಲವು ಕೆಲಸಗಳನ್ನು ಒಪ್ಪಿಸುವುದು ಒಳ್ಳೆಯದೆಂದು ಹೇಳುತ್ತೇನೆ.

ನಮ್ಮ ಮಿತ್ರರು ಕೆಲವರು ಡಿವಿಜನಲ್ ಕಮಿಷನರುಗಳ ಕಚೇರಿಗಳನ್ನು ಮಾಡಿರುವುದು ಸರಿಯಲ್ಲವೆಂದು ಹೇಳಿದ್ದಾರೆ. ಮುಂಬಯಿ ಕರ್ನಾಟಕದಲ್ಲಿನ ಅನುಭವದಿಂದ ಇಲ್ಲಿಯೂ ಸಹ ಹೊಸದಾಗಿ ಡಿವಿಜನಲ್ ಕಮಿಷನರ್ ಕಚೇರಿಗಳನ್ನು ತೆರೆಯಲಾಗಿದೆ. ಇವುಗಳನ್ನು ತೆರೆಯಬೇಕಾದ ಅವಶ್ಯಕತೆ ಇದ್ದಿಲ್ಲ. ಇದರಿಂದ ಮತ್ತಷ್ಟು ಕೆಲಸ ತಡವಾಗತೊಡಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಮಾಡಿದರು. ಅವರ ಈ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ನಮ್ಮಲ್ಲಿ ಹಿಂದಕ್ಕೆ ಕಮಿಷನರರ ಕಚೇರಿಗಳು ಬಹಳ ದಿವಸಗಳಿಂದ ನಡೆದುಕೊಂಡು ಬಂದಿದ್ದುವು. ಇದೇ ಪ್ರಕಾರ ಟೀಕೆಗಳು ಮೇಲಿಂದ ಮೇಲೆ ಬಂದು ಇವುಗಳು ಬರಿಯ ಪೋಸ್ಟ್ ಆಫೀಸುಗಳಾಗಿವೆಯೆಂದು ಹೇಳಬಂದದ್ದರಿಂದ ಮತ್ತು ಇವುಗಳಿಂದ ಹೆಚ್ಚು ಉಪಯೋಗವಾಗುವುದಿಲ್ಲವೆನ್ನುವ ಬಹಳ ತಕರಾರುಗಳು ಬಂದದ್ದರಿಂದ ಕಮಿಷನರ್ ಕಚೇರಿಗಳನ್ನು ಹಿಂದೆ ಮುಂಬಯಿ ರಾಜ್ಯದಲ್ಲಿ ತೆಗೆದು ಹಾಕಿದರು. ಇದರಿಂದ ಆಡಳಿತದಲ್ಲಿ ಬಹಳ ಅವ್ಯವಸ್ಥೆ ಉಂಟಾದದ್ದು ಸರಕಾರದ ಗಮನಕ್ಕೆ ಬಂದಿತು. ಕೆಲವು ಮಾಮಲೇದಾರರ ವರ್ಗಾವರ್ಗಿಗಳಲ್ಲಿ ಒಂದೇ ಜಾಗಕ್ಕೆ ಒಬ್ಬಿಬ್ಬರು ಬರುವಂಥ ಪ್ರಸಂಗ ಬಂದುವು. ರಜೆಯ ಅರ್ಜಿಗಳು ಮಂಜೂರಾಗದೆ ಉಳಿದುವು. ಇಂಥ ಅನೇಕ ತೊಂದರೆಗಳು ಆಗ ಹುಟ್ಟಿದ್ದರಿಂದ ಆ ಕಚೇರಿ ತೆಗೆದು ಹಾಕಿದ್ದು ಸರಿಯಾದುದಲ್ಲವೆಂದು ಕಂಡು ಹಿಡಿದು ಈ ವಿಷಯದವನ್ನು ಪುನಃ ವಿಚಾರಮಾಡಿ ಮತ್ತೆ ಕಮಿಷನರ್ ಕಚೇರಿಗಳನ್ನು ನಡೆಸಿದರೆ ಆಡಳಿತವು ಉತ್ತಮ ರೀತಿಯಿಂದ ಸಾಗಬಹುದೆಂಬ ಅಭಿಪ್ರಾಯದಿಂದ ಇವುಗಳನ್ನು ಪುನಃ ಸ್ಥಾಪಿಸಲಾಗಿದೆ. ಈ ಕಚೇರಿಗಳನ್ನು ಪ್ರಾರಂಭ ಮಾಡಿ ಸ್ವಲ್ಪ ದಿವಸಗಳಾಗಿರುವುದರಿಂದ ನಾವು ತಡೆದು ವಿಚಾರಮಾಡಿ ನೋಡಿ ಆ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಮುಖ್ಯವಾಗಿ ಮತ್ತೊಂದು ವಿಷಯವೆಂದರೆ, ಸರಬರಾಯಿಯ ವಿಷಯ ಮತ್ತು ಆಡಳಿತದಲ್ಲಿ corruption ಈ ಮೇಲೆ ವಿವರಿಸಿದ ಸಾಮಾನ್ಯ ತಾಲ್ಲೂಕು ಆಡಳಿತದಲ್ಲಿ ಕೂಡ ಹೆಚ್ಚಿದೆ. ಇದು district administration ನಲ್ಲಿ ಸಹ ಕಂಡುಬರುತ್ತಿದೆ. ಇದು ಯಾವ ರೀತಿಯಿಂದಲೂ ಆಗಕೂಡದು. ಸರ್ಕಾರ ಇದಕ್ಕೆ ಲಕ್ಷ್ಯ ಕೊಡಬೇಕೆಂದೂ ನಾನು ಕಳಕಳಿಯಿಂದ ಸರ್ಕಾರಕ್ಕೆ ಬಿನ್ನಹಮಾಡಿಕೊಳ್ಳುತ್ತೇನೆ. ಇದನ್ನು ಖಂಡಿತ ತಪ್ಪಿಸಬೇಕಾಗಿದೆ. ನಾನು ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

---

*[Sri Lakshman Balaji Birje spoke in Marathi. His speech appears in the Appendix number to this volume.]*

**Mr. SPEAKER.**—It has been the convention in all the Assemblies that the action of the Speaker and of the Legislature Secretariat should not be criticised.

ಶ್ರೀ ಎಂ. ರಾಮಪ್ಪ (ಹರಿಹರ).—ಮಾನ್ಯ ಸದಸ್ಯರು ಏನನ್ನು ಹೇಳಿದರು, ಸ್ವಾಮಿ?

ಅಧ್ಯಕ್ಷರು.—ಅವರು ಹೀಗೆ ಎಂದರು. "ಪ್ರಶ್ನೆ ಕಳಿಸಿದೆ. ಆದರೆ ಅದನ್ನು ಕಟ್‌ಮಾಡಿ ಹಾಕಲಾಗುತ್ತದೆ ಎಂಬುದಾಗಿಹೇಳಿದರು. ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಸ್ಪೀಕರ್ ಅಥವಾ ಲೆಜಿಸ್ಲೇಚರ್ ಡಿಪಾರ್ಟ್‌ಮೆಂಟಿನಲ್ಲಿ ಮಾಡಿದಂಥ ಕಾರ್ಯಗಳ ಬಗ್ಗೆ ಈ ಸಭೆಯಲ್ಲಿ ಎಂದೂ ಯಾವ ರೀತಿಯಲ್ಲಿಯೂ ಟೀಕೆ ಮಾಡಬಾರದು ಎಂಬ ಸಂಪ್ರದಾಯವಿದೆ. ಈ ಬಗ್ಗೆ ಏನಾದರೂ ಇದ್ದರೆ ಸ್ಪೀಕರರ ಕಡೆಗೆಹೋಗಿ ಭೇಟಿಯಾಗಿ ಹೇಳಬೇಕು.

**Sri V. S. PATIL** (Belgaum I).—The Hon'ble Member Sri Birje has objected to the cutting of the questions for this reason that if questions sent by Members are cut, supplementaries have to be asked on the floor of the House and the time of the Legislature is

unnecessarily taken and we will be practically wasting the time of the House. The Legislature Department will please note not to cut down questions so that the time of the House is saved.

Mr. SPEAKER.—That is a reflection on the Legislature Department and it requires a reply.

ಶ್ರೀ ಎ. ಆರ್. ಬದರಿನಾರಾಯಣ್ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಅರ್ಥಸಚಿವರು ಭಾಷಣಮಾಡುತ್ತಾ ಈಗ ನಮ್ಮ ದೇಶದಲ್ಲಿಯ ಆರ್ಥಿಕ ಪರಿಸ್ಥಿತಿಯು ಕೆಟ್ಟುಹೋಗಿದೆ ಎಂದು ಹೇಳಿದರು. ಈ ಆರ್ಥಿಕ ಪರಿಸ್ಥಿತಿ ಕೆಟ್ಟುಹೋಗಿರುವುದನ್ನು ಸುಧಾರಿಸುವುದಕ್ಕೆ ಆದಷ್ಟು ಪ್ರಯತ್ನ ಮಾಡುತ್ತಿದ್ದೇವೆ ಎಂದೂ ಖರ್ಚು ವೆಚ್ಚಗಳನ್ನು ಸಹ ಕಡಿಮೆಮಾಡುವುದಕ್ಕೆ ಪ್ರಯತ್ನಿಸುತ್ತಿದ್ದೇವೆ ಎಂದೂ ಅವರು ಭಾಷಣದಲ್ಲಿ ಹೇಳಿದ್ದಾರೆ. ಅದಲ್ಲದೆ ಇನ್ನೂ ಹೆಚ್ಚು ಖರ್ಚುಗಳನ್ನು ಖೋತಾಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ಪರಿಶೀಲಿಸುವುದಕ್ಕೆ ಆಡಳಿತದ ಅನುಭವವಿರುವ ಒಬ್ಬ ತಜ್ಞ ಅಧಿಕಾರಿಯನ್ನು ನೇಮಕಮಾಡಲಾಗುವದೆಂದೂ ಅವರು ಹೇಳಿದ್ದಾರೆ. ಹಾಗೂ ಖರ್ಚನ್ನು ಕಡಮೆಮಾಡಲು ಸಾಧ್ಯವಿದೆ ಎಂದು ಅರ್ಥಸಚಿವರು ತಮ್ಮ ಭಾಷಣದಲ್ಲಿ ಒಪ್ಪಿಕೊಂಡಿದ್ದಾರೆ. ಈ ವಿಚಾರದಲ್ಲಿ ನಾಲ್ಕು ಮಾತುಗಳನ್ನು ನಾನು ಹೇಳುತ್ತೇನೆ. ಪ್ರಾಂತ ಪುನರ್ವಿಂಗಡಣೆಯಾದ ಮೇಲೆ ನಾಲ್ಕು ಡಿವಿಜನಲ್ ಕಮಿಷನರ್‌ಗಳ ರಚನೆ ಸರಕಾರದವರು ಮಾಡಿದ್ದಾರೆ. ಬೆಳಗಾಂ ಡಿವಿಜನ್, ಗುಲಬರ್ಗ ಡಿವಿಜನ್, ಮೈಸೂರು ಡಿವಿಜನ್ ಮತ್ತು ಬೆಂಗಳೂರು ಡಿವಿಜನ್—ಈ ರೀತಿಯಾಗಿ ನಾಲ್ಕು ಡಿವಿಜನ್‌ಗಳನ್ನು ಮಾಡಿದ್ದಾರೆ. ಈಗ ಇದ್ದಂಥ ಪರಿಸ್ಥಿತಿಯಲ್ಲಿ ಶಿವಮೊಗ್ಗಾ ಜಿಲ್ಲೆಯ ವಿಚಾರವಾಗಿ ಹೇಳುವುದಾದರೆ ಯಾವುದೊಂದು ಕೆಲಸದ ಸಲುವಾಗಿ, ಈ ದಿವಸ ಶಿವಮೊಗ್ಗಾದವರು ಮೈಸೂರಿಗೆ ಹೋಗಬೇಕಾಗಿದೆ, ಕಾರವಾರದವರು ಮೈಸೂರಿಗೆ ಹೋಗಬೇಕಾಗಿದೆ, ಮಂಗಳೂರದವರು ಮೈಸೂರಿಗೆ ಹೋಗಬೇಕಾಗುತ್ತದೆ. ಡಿವಿಜನ್ ಕಮಿಷನರ್ ಆಫೀಸ ರಚನೆಯ ಬಗ್ಗೆ ನನ್ನ ಅನುಭವ ಹೇಳುವುದಾದರೆ ಇದರಿಂದ ಯಾರಿಗೂ ಉಪಕಾರವಾಗಿಲ್ಲ. ಖರ್ಚುಸಹ ಕಡಮೆಯಾಗಿಲ್ಲ. ಆದಕಾರಣ ಈ ಡಿವಿಜನಲ್ ಕಮಿಷನರರ ವಿಭಾಗಗಳನ್ನು ಇನ್ನುಮುಂದೆಯಾದರೂ ತೆಗೆದುಹಾಕಬೇಕೆಂದು ನಾನು ಸೂಚನೆಮಾಡುತ್ತೇನೆ. ಇದರಿಂದ ಅಲ್ಲಲ್ಲಿ ಇರತಕ್ಕಂಥವರಿಗೆ ಬೆಂಗಳೂರಿಗೆ ಬರಲು ತೊಂದರೆಯಾಗಬಹುದೆಂದು ಕೆಲವರು ಆಕ್ಷೇಪಣೆ ಮಾಡಬಹುದು. ಆದರೆ ಬಹುಹೆಚ್ಚಿನ ಸಂಪರ್ಕ ಬೆಂಗಳೂರಿನೊಡನೆ ಎಲ್ಲ ಜಿಲ್ಲೆಗಳಿಗೆ ಇದೆ. ಹೆಚ್ಚಿನ ಸಂಚಾರ ಸಂಪರ್ಕವಿರುವದರಿಂದ ಬೆಂಗಳೂರಿಗೆ ಬರಲು ಏನೂ ಕಷ್ಟವಾಗುವುದಿಲ್ಲ. ಆದುದರಿಂದ ಜಿಲ್ಲಾಧಿಕಾರಿಗಳಿಗೆಯೇ ಇನ್ನೂ ಹೆಚ್ಚಿನ ಅಧಿಕಾರವನ್ನು ಕೊಟ್ಟು ಅವರಿಂದ ಸರಕಾರಕ್ಕೆ ನೇರವಾಗಿ ಆಡಳಿತವೂ ವಸ್ಥೆ ನಡೆಯುವಂತೆ ಮಾಡಬೇಕು. ಜಿಲ್ಲಾಧಿಕಾರಿಗಳಿಂದ ನೇರವಾಗಿ ಸರಕಾರಕ್ಕೆ ಕಾಗದಪತ್ರಗಳು ಬರುವಂತೆ ವ್ಯವಸ್ಥೆಯಾದರೆ ಆಡಳಿತದ ಕೆಲಸ ಕಾರ್ಯಗಳು ಸುಸೂತ್ರವಾಗಿ ಸಾಗುತ್ತವೆ. ಈಗ ಹೆಚ್ಚಾಗಿ ಆಗುತ್ತಿರುವ ಖರ್ಚುವೆಚ್ಚಗಳು ಕಡಮೆಯಾಗುತ್ತವೆ. ಡಿವಿಜನಲ್ ಕಮಿಷನರುಗಳನ್ನು ತೆಗೆದುಹಾಕಿದರೆ ಹಣವ್ಯಯವಾಗುತ್ತಿರುವುದು ಬಹುಮಟ್ಟಿಗೆ ಕಡಮೆಯಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ. ಸ್ವಾಮಿ, ಇದಲ್ಲದೆ ಈಗ ಡೆಪ್ಯುಟಿ ಕಮಿಷನರುಗಳ ಹಿಂದೆ ಎಷ್ಟು ಜನರಿದ್ದರು, ಇವೊತ್ತಿನ ದಿವಸ ಎಷ್ಟು ಜನರಿದ್ದಾರೆ ಎಂಬುದನ್ನು ಸ್ವಲ್ಪ ಯೋಚನೆಮಾಡಬೇಕು. ಜಿಲ್ಲೆಗಳಲ್ಲಿ ಬಿದಿರೆ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ ಇತ್ಯಾದಿ ಸಣ್ಣ ಸಣ್ಣ ಜಿಲ್ಲೆಗಳಿವೆ. ಅವೆಲ್ಲವನ್ನೂ ಕೂಡ ಒಟ್ಟುಗೂಡಿಸಿ ಮೈಸೂರು ದೇಶದಲ್ಲಿ ಸೇರಿರತಕ್ಕಂಥ 19 ಜಿಲ್ಲೆಗಳನ್ನು ಬಹುಶಃ ಹನ್ನೆರಡು ಜಿಲ್ಲೆಗಳನ್ನಾಗಿ ಮಾಡಿದರೆ ಎಷ್ಟೋ ಖರ್ಚು ಕಡಮೆಯಾಗುತ್ತದೆ. ಡೆಪ್ಯುಟಿ ಕಮೀಷನರುಗಳ ಸಂಖ್ಯೆ ಏನು ಇದೆ, ಅದೂಕೂಡ ಕಡಮೆಯಾಗುತ್ತದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮದರಾಸು ಜಿಲ್ಲೆಗಳನ್ನು ನೋಡಿದರೆ ಬಹುಶಃ ಪ್ರಜೆಗಳ ಸಂಖ್ಯೆಯಲ್ಲಾಗಲಿ ವಿಸ್ತೀರ್ಣದಲ್ಲಾಗಲಿ ನಮ್ಮ ಜಿಲ್ಲೆಗಳ ಎರಡು-ಎರಡೂವರೆಯಷ್ಟು ಇರುವುದನ್ನು ನಾವು ಕಂಡಿದ್ದೇವೆ. ಆದ್ದರಿಂದ ಖರ್ಚನ್ನು ಕಡಮೆಮಾಡುವ ದೃಷ್ಟಿಯಿಂದ ಜಿಲ್ಲಾಧಿಕಾರಿಗಳ ಸಂಖ್ಯೆಯನ್ನು ನಾವು ಏನು ಹೆಚ್ಚು ಮಾಡಿದ್ದೇವೆ, ಅದನ್ನು ಕಡಮೆಮಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ಈ ಜಿಲ್ಲಾಧಿಕಾರಿಗಳ ಸಂಖೆಯನ್ನು ಕಡಮೆಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಅಲ್ಲದೆ ಅಮಲ್ದಾರರುಗಳ ವಿಷಯದಲ್ಲೂ ಸಹ ಕಡಮೆಮಾಡುವ ಅವಕಾಶವಿವೆ. ತಾಲ್ಲೋಕುಗಳಲ್ಲಿ ಕೂಡ ಬಹಳ ಸಣ್ಣ ತಾಲ್ಲೋಕುಗಳಿವೆ. ಅಂಥ ತಾಲ್ಲೋಕುಗಳೆಲ್ಲವನ್ನೂ ಸೇರಿಸಿ ಇನ್ನೂ ದೊಡ್ಡದನ್ನಾಗಿ ಮಾಡಬೇಕು, ಅದೂ ಕೂಡ ಮಾಡಿದರೆ ಖರ್ಚು ಕಡಮೆಯಾಗುತ್ತದೆ ಎಂದು ಹೇಳುತ್ತೇನೆ. ಈಗ ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯನ್ನು ಡಿವಿಜನಲ್ ಕಮಿಷನ್ ಕೇಂದ್ರಕ್ಕೆ ಟ್ರಾನ್ಸ್‌ಫರ್‌ಮಾಡಿದ್ದಾರೆ. ಅದರಿಂದ ಜನಗಳಿಗೆ ಬಹಳ ಅನನುಕೂಲವಾಗಿದೆ. ಆದ್ದರಿಂದ ಟ್ರಾಫಿಕ್ ಆಕ್ಸಿಡೆಂಟ್ ಆದರೆ ಅಥವಾ ಬಸ್ ಆಕ್ಸಿಡೆಂಟ್ ಆದರೆ ಡಿವಿಜನಲ್ ಹೆಡ್‌ಕ್ವಾರ್ಟರ್ಸಿಗೆ ಹೋಗಬೇಕಾಗುತ್ತದೆ. ಆದ್ದರಿಂದ ಕ್ಷಿಪ್ರವಾಗಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಅವಕಾಶವಿಲ್ಲ. ಆ ದೃಷ್ಟಿಯಿಂದ ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನುಕೊಟ್ಟು ಈ ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ ಏನು ಇದೆ ಅದನ್ನು ಹಿಂದೆ ಇದ್ದಹಾಗೆ ಜಿಲ್ಲಾಧಿಕಾರಿಗಳಿಗೆ ವಹಿಸಿ ಅವರಿಗೆ ಇನ್ನೂ ಹೆಚ್ಚಿನ ಅಧಿಕಾರವನ್ನು ಕೊಟ್ಟು ಜನಗಳಿಗೆ ಅನುಕೂಲಮಾಡಿಕೊಡಬಹುದು. ಇದರಿಂದ ಸರ್ಕಾರಕ್ಕೆ ಹಣ ಬಹಳ ಉಳಿತಾಯವಾಗುತ್ತದೆ. ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ವ್ಯವಸಾಯದಲ್ಲೇ ನಿರತರಾಗಿರತಕ್ಕ ಸಣ್ಣಪುಟ್ಟ ರೈತರುಗಳಿಗೂ ಕೂಡ ಅಗ್ರಿಕಲ್‌ಚರ್ ಇನ್‌ಕಂಟ್ಯಾಕ್ಸ್ ಹಾಕಿದ್ದೀರಿ. 3,500 ರೂಪಾಯಿಗಳಮೇಲೆ ವರಮಾನ ಬರತಕ್ಕ ರೈತರು ಇವೊತ್ತಿನ ದಿವಸ ತೆರಿಗೆ ಕೊಡಬೇಕು ಎನ್ನುವ ಮಸೂದೆ ತಮ್ಮಮುಂದಿದೆ. ಈ ದೃಷ್ಟಿಯಿಂದ ನೋಡಿದರೆ—ನಾನು ಅಸೂಯೆಯಿಂದ ಹೇಳುವುದಿಲ್ಲ ಅಥವಾ ಆಗ್ರಹಕ್ಕೆ ಹೇಳುವುದಿಲ್ಲ. ಆದರೂ ಸರ್ಕಾರಿ ಅಧಿಕಾರಿಗಳಲ್ಲಿ ದೊಡ್ಡ ಸಂಬಳ ಬರುವವರು ಅನೇಕರು ಇದ್ದಾರೆ. ಅವರ ಸಂಬಳವನ್ನು ಕಡಮೆಮಾಡತಕ್ಕ ಪ್ರಯತ್ನವನ್ನು ನಾವು ಮಾಡಬೇಕು. ಬಹುಶಃ ಹೆಚ್ಚು ಸಂಬಳ ಬರತಕ್ಕ ಅಧಿಕಾರಿಗಳು ಅವರ ಸಂಬಳವನ್ನು ಅವರೇ ಕಡಮೆಮಾಡಿಕೊಂಡರೆ ಬಹಳ ಸಂತೋಷ. ಏಕೆಂದರೆ ಆ ಮಟ್ಟದಲ್ಲಿ ನಮ್ಮ ರೈತರು ಜೀವನ ಮಾಡಬೇಕಾಗಿದ್ದರೆ ಎಷ್ಟು ಲಕ್ಷಾಂತರ ರೂಪಾಯಿಗಳ ಆಸ್ತಿ ಅವರಿಗೆ ಇರಬೇಕು ಎಂಬುದನ್ನು ತಾವು ಸ್ವಲ್ಪ

(ಶ್ರೀ ಎ. ಆರ್. ಬದರಿನಾರಾಯಣ್.)

ಯೋಚನೆಮಾಡಬೇಕು. ನಾವು ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಸ್ಥಾಪನೆಮಾಡಬೇಕು ಎಂದು ಹೇಳಿರತಕ್ಕ ಕಾಲದಲ್ಲಿ ಒಂದು ಕಡೆಯಲ್ಲಿ ರೈತರ ವರಮಾನವನ್ನು ಕಡಮೆಮಾಡಿ ಇನ್ನೊಂದುಕಡೆ ಸಂಬಳ ಹೆಚ್ಚು ಮಾಡುವುದು ಸರಿಯೇ ಎಂದು ನೋಡ ಬೇಕು. ಅಲ್ಲದೆ ಸಣ್ಣಪುಟ್ಟ ನೌಕರರುಗಳ ಸಂಬಳ ಗಳಲ್ಲಿ ಏರುಪೇರುಗಳು ಬಹಳ ಇವೆ. ಅವನ್ನುಕೂಡ ಗಮನದಲ್ಲಿ ಇಟ್ಟುಕೊಂಡು ಇವರ ಸಂಬಳವನ್ನು ಕಡಮೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದರೆ ನಾನು ನನ್ನ ಹಿಂದಿನ ಭಾಷಣದಲ್ಲಿ ಹೇಳಿದ್ದೇನೆ : ನಮ್ಮ ದೇಶ ದಲ್ಲಿ ಅನೇಕ ಕಡೆಗಳಲ್ಲಿ ಲಂಚ ಬಹಳ ಹೆಚ್ಚುತ್ತಿದೆ ಎಂದೂ ಮತ್ತು ಅಧಿಕಾರಿಗಳಲ್ಲಿ ಎಫಿಷಿಯೆನ್ಸಿ ಇರ ತಕ್ಕದ್ದು, ದಕ್ಷತೆ ಇರತಕ್ಕದ್ದು ಕೂಡ ಬಹಳ ಕಡಮೆ ಯಾಗಿದೆ ಎನ್ನುವ ಆರೋಪಣೆಗಳು ಅನೇಕ ಕಡೆ ಗಳಲ್ಲಿ ಕೇಳಿಬರುತ್ತದೆ ಎಂದು ಇದಕ್ಕೆ ಕಾರಣವೇನು ? ಲಂಚಕ್ಕೆ ಕಾರಣವೇನು ? ದಕ್ಷತೆ ಕಡಮೆಯಾಗುವುದಕ್ಕೆ ಕಾರಣವೇನು ? ಎಂಬುದನ್ನು ಕೂಲಂಕಷವಾಗಿ ವಿಮರ್ಶೆಮಾಡಿ ನೋಡಬೇಕು. ಅದಕ್ಕೆ ಪರಿಹಾರ ಕಂಡುಹಿಡಿಯಬೇಕು. ಕರಪ್ಷನ್ ಇರುವುದಕ್ಕೆ ಏನೇ ಕಾರಣ ಇರಲಿ ಅದು ಯಾವ ಕಾರಣಕ್ಕೋಸ್ಕರ ನಡೆ ಯುತ್ತದೆ ಎಂಬುದನ್ನುಕೂಡ ವಿಮರ್ಶೆಮಾಡಿ ಅದನ್ನು ನಿರ್ಮೂಲಮಾಡಲು ತಕ್ಕ ಸಲಹೆ ಕೊಟ್ಟು ಅದನ್ನು ಸರ್ಕಾರದವರು ಕಾರ್ಯರೂಪಕ್ಕೆ ತರುವಂತೆಮಾಡ ಬೇಕು ಎಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಟ್ಟಿನಲ್ಲಿ ಸರ್ಕಾರದವರು ಹಾಕಿ ಕೊಂಡಿರತಕ್ಕ ಕಾರ್ಯಕ್ರಮ ಬಹಳ ಸಮರ್ಪಕ ವಾಗಿದೆ. ಅವರು ತಂದಿರತಕ್ಕ ಹಣದ ಬೇಡಿಕೆಯನ್ನು ನಾವು ಸಂಪೂರ್ಣ ಸಂತೋಷದಿಂದ ಒಪ್ಪಿಕೊಳ್ಳ ಬಹುದು ಎನ್ನುವುದನ್ನು ನಾನು ಹೇಳುತ್ತೇನೆ. ಆದರೆ ಈಗ ನಾನು ಹೇಳಿರತಕ್ಕ ಕೆಲವು ಅಂಶಗಳನ್ನು ತಾವು ಗಮನಕ್ಕೆ ತೆಗೆದುಕೊಂಡು ಅದನ್ನು ಕಾರ್ಯರೂಪಕ್ಕೆ ತಂದರೆ ಬಹಳ ಅನುಕೂಲವಾಗುತ್ತದೆ ಎಂಬುದನ್ನು ಮಾತ್ರ ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಟಿ. ಜಂಬಣ್ಣ (ದಾವಣಗೆರೆ).—ಮಾನ್ಯ ಅಧ್ಯಕ್ಷರೇ, ಅರ್ಥ ಸಚಿವರು ಮಂಡಿಸಿರುವ ಸಾಮಾನ್ಯ ಆಡಳಿತ ಖರ್ಚಿನ ಬಾಬಿನಲ್ಲಿ ಒಂದೆರಡು ವಿಷಯ ಗಳನ್ನು ಮಾತ್ರ ನಾನು ನಿವೇದನೆ ಮಾಡಲು ಎದ್ದು ನಿಂತಿದ್ದೇನೆ. ಈಗಾಗಲೇ ಡಿವಿಜನಲ್ ಕಮೀಷನರುಗಳ ವಿಷಯವಾಗಿ ಕಾಂಗ್ರೆಸ್ ಸದಸ್ಯ ಮಹನೀಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅದು ಸೂಕ್ತ ವಾಗಿದೆ. ಡಿವಿಜನಲ್ ಕಮೀಷನರ್ ವಿಷಯದಲ್ಲಿ ಆಗಿರತಕ್ಕ ತೊಂದರೆ ಅನನುಕೂಲ ಮತ್ತು ಹೆಚ್ಚಿನ ಬಾಬಿನ ಖರ್ಚುಗಳನ್ನು ಸಾಮಾನ್ಯವಾಗಿ ಒಪ್ಪಬೇಕಾ ಗಿದೆ. ಈ ಡಿವಿಜನಲ್ ಕಮೀಷನರುಗಳ ಹುದ್ದೆಯನ್ನು ತೆಗೆದು ಹಾಕಿ ಡೆಪ್ಯುಟಿ ಕಮೀಷನರುಗಳಿಗೆ ಹೆಚ್ಚಿನ ಅಧಿಕಾರಗಳನ್ನು ಕೊಟ್ಟು ಕೆಲಸ ನಿರ್ವಹಿಸುವುದು ಆಯಾ ಭಾಗದ ಜನರಿಗೂ ಸರ್ಕಾರಕ್ಕೂ ಹೆಚ್ಚಿನ ಲಾಭದಾಯಕವಾಗಿರುತ್ತದೆ ಎಂಬುದನ್ನು ನಾನು ಒತ್ತಿ ಹೇಳುತ್ತೇನೆ. ಇನ್ನು ಖರ್ಚಿನ ಬಾಬನ್ನು ಖೋತಾ ಮಾಡಲು ಸಾಕಷ್ಟು ಶ್ರಮವಹಿಸಿದ್ದಾರೆಂದು ಅರ್ಥ ಸಚಿವರು ತಿಳಿಸಿದ್ದಾರೆ. ಅವರು ಶ್ರಮವಹಿ ಸಲು ಪ್ರಯತ್ನ ಮಾಡಿದರೋ ಇಲ್ಲವೋ; ಅಂತೂ ಅದರಲ್ಲಿ ಖೋತಾ ಮಾಡುವುದಕ್ಕೆ ಬೇಕಾದಷ್ಟು ಅವಕಾಶವಿದೆ ಎಂಬ ಒಂದು ಅಂಶವನ್ನು ನಾನು ಒತ್ತಿ ಹೇಳಬೇಕಾಗಿದೆ. ತಾಲ್ಲೋಕುಗಳಲ್ಲಿ ಅಮ ಲ್ದಾರ್ ಮತ್ತು ಸಬ್‌ಡಿವಿಜನ್ ಆಫೀಸರುಗಳ ಕೆಲಸದ ವೇಳೆಗಳು ಬಹಳ ಅನಿರ್ದಿಷ್ಟವಾಗಿವೆ. ರೈತಾಪಿ ಜನರು ತಾಲ್ಲೋಕು ಆಫೀಸುಗಳ ಮುಂದೆ ಬಂದು ಅಮಲ್ದಾರರನ್ನು ಕಾಣುವುದಕ್ಕೋಸ್ಕರ ಎಷ್ಟೋ ದಿವಸ ಮಳೆಗಾಳಿಯಲ್ಲಿ ಬಿಸಿಲಿನಲ್ಲಿ ಕಾಯಬೇಕಾಗಿದೆ. ಆಫೀಸಿನ ಮುಂಭಾಗದಲ್ಲಿ ನೋಟೀಸ್ ಬೋರ್ಡಿನಲ್ಲಿ ಅಮಲ್ದಾರರು ಇಷ್ಟು ಗಂಟೆಯಿಂದ ಇಷ್ಟು ಗಂಟೆಯ ವರೆಗೆ ಆಫೀಸಿನಲ್ಲಿರುತ್ತಾರೆ ಮತ್ತು ಹೊರಗಡೆ ಎಲ್ಲಿ ಯಾದರೂ ಹೋಗಿದ್ದರೆ ಇಷ್ಟು ಗಂಟೆಗೆ ಬರುತ್ತಾರೆ ಎನ್ನುವುದು ಯಾವ ಬೋರ್ಡಿನಲ್ಲಿಯೂ ಕಾಣುವುದಿಲ್ಲ. ಇತ್ತೀಚೆಗೆ ಎಲ್ಲಾ ಲೆಜಿಸ್ಲೇಟೀವ್ ಮೆಂಬರುಗಳಿಗೆ ಮಾತ್ರ ಪ್ರೋಗ್ರಾಮ್ ಕಳುಹಿಸುತ್ತಾರೆ. ಆದರೆ ಮೆಂಬರುಗ ಳಿಗೆ ಕಳುಹಿಸಿದಾಕ್ಷಣಕ್ಕೆ ತಮ್ಮ ಜವಾಬ್ದಾರಿ ಅಲ್ಲಿಗೆ ಮುಗಿಯಿತು ಎಂದು ಅರ್ಥಮಾಡಿಕೊಳ್ಳುವುದಕ್ಕೆ ಬರು ವುದಿಲ್ಲ. ಅಸೆಂಬ್ಲಿ ಸದಸ್ಯರಿಗೆ ಅಮಲ್ದಾರರ ಹತ್ತಿರ ಕೆಲಸ ಪ್ರತಿದಿವಸ ಇರುವುದಿಲ್ಲ. ಹೆಚ್ಚುಕೆಲಸ ಇರುವ ವರು ಹೆಚ್ಚು ತೊಂದರೆಯನ್ನು ಅನುಭವಿಸುವವರು ಜನರು, ಹಳ್ಳಿಗಳ ರೈತರು. ಎಷ್ಟೋ ಸಂದರ್ಭದಲ್ಲಿ ಅವರು ಬಂದು ಕಾಲಹರಣ ಮಾಡಿಕೊಂಡು ಹೋಗವು ದನ್ನು ನಾನು ಕಣ್ಣಾರೆ ನೋಡಿದ್ದೇನೆ. ಇನ್ನೊಂದು ಶೋಚನೀಯ ವಿಷಯ, ಅಮಲ್ದಾರ್ ಆಫೀಸುಗಳಲ್ಲಿ ರೈತರು ಬಂದರೆ ಕುಳಿತುಕೊಳ್ಳುವುದಕ್ಕೆ ಯಾವ ಅನುಕೂಲಗಳಿಲ್ಲದೆ ಮಳೆಗಾಳಿ ಬಿಸಿಲಿನಲ್ಲಿ ಇರಬೇಕಾ ಗಿದೆ. ಅವರು ಎಲ್ಲೋ ಗಿಡಗಳಿದ್ದರೆ ಅವುಗಳ ಕೆಳಗೆ ನಿಂತುಕೊಳ್ಳಬೇಕು. ಇಲ್ಲದಿದ್ದರೆ ಯಾವುದೇ ಹೋಟೇ ಲಿಗೆ ಹೋಗಿ ಜೇಬಿನಲ್ಲಿದ್ದ ಕಾಸು ಖರ್ಚುಮಾಡಿಕೊಂಡು ಹೋಗಬೇಕು. ಈ ಶೋಚನೀಯ ಪರಿಸ್ಥಿತಿ ಬಹಳ ದಿವಸಗಳಿಂದ ನಡೆದುಕೊಂಡು ಬಂದಿದೆ. ಇತ್ತೀಚೆಗೆ ಕೆಲವು ಮುನ್‌ಸಿಫ್ ಕೋರ್ಟುಗಳ ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟುಗಳ ಕಟ್ಟಡಗಳಿಗೆ ಬೇಕಾ ದಷ್ಟು ಹಣವನ್ನು ಸರ್ಕಾರದವರು ಕೊಟ್ಟಿದ್ದಾರೆ. ಅಲ್ಲಿಯೂ ಕಕ್ಷಿಗಾರರಿಗೆ ಯಾವ ರೀತಿಯ ಸೌಲಭ್ಯ ಗಳನ್ನೂ ಮಾಡಿಕೊಟ್ಟಿಲ್ಲ. ಇನ್ನು ದಾವಣಗೆರೆ ಮತ್ತು ಹರಿಹರ ತಾಲ್ಲೋಕು ಆಫೀಸುಗಳನ್ನು ನಾನು ಚೆನ್ನಾಗಿ ನೋಡಿರುವುದರಿಂದ ಈ ಎರಡು ತಾಲ್ಲೋಕು ಗಳ ವಿಷಯದಲ್ಲಿ ಇರತಕ್ಕ ತೊಂದರೆಗಳ ವಿಷಯದಲ್ಲಿ ಮಾತ್ರ ನಾನು ಹೇಳುತ್ತೇನೆ. ಕಚೇರಿಯ ಒಳಗೆ ಹೋದರೆ ಸ್ಯಾನಿಟೇಷನ್ ಸರಿಯಾಗಿರುವುದಿಲ್ಲ. ಗೋಡೆ ಗಳಿಗೆ ಸುಣ್ಣವಿರುವುದಿಲ್ಲ; ಗಾರೆ ಕಿತ್ತುಬೀಳುತ್ತಿರು ತ್ತದೆ. ಅಲ್ಲಿರುವ ಕುರ್ಚಿಗಳು ಯಾವ ಕಾಲದವೋ ಗೊತ್ತಿಲ್ಲ. ಎಷ್ಟೋವರ್ಷಗಳಿಂದ ಅಲ್ಲಿಗೆ ಫರ್ನಿ ಚರ್ ಕಂಟಿಜೆನ್ಸಿ ಕೊಟ್ಟಿದ್ದಾರೋ ಇಲ್ಲವೋ ಅಥವಾ ಕೊಟ್ಟಿದ್ದರೂ ಯಾವ ರೀತಿ ಉಪಯೋಗವಾಗಿಯಾ ಗಿದೆಯೋ ಗೊತ್ತಿಲ್ಲ. ಅಲ್ಲಿ ಶಿರಸ್ತೇದಾರರಿಗೂ ಕುರ್ಚಿ ಇಲ್ಲ, ಬೇರೆಯವರಿಗೂ ಕುರ್ಚಿ ಇಲ್ಲ. ಯಾರಾದರೂ ದೊಡ್ಡಮನುಷ್ಯರು ಅವರಲ್ಲಿಗೆ ಹೋದರೆ ಕುರ್ಚಿಗಾಗಿ ಹುಡುಕಾಡುತ್ತಾರೆ, ಸಿಕ್ಕಿದರೂ ಒಂದಕ್ಕೆ ಕೈಯಿಲ್ಲ ಒಂದಕ್ಕೆ ಕಾಲಿಲ್ಲ, ಇಂಥ ಕುರ್ಚಿಗಳು. ನಾನು ಯಾವುದೋ ಕೆಲಸಕ್ಕಾಗಿ ಒಂದುದಿವಸ ಅಲ್ಲಿಗೆ ಹೋಗಿದ್ದೆ ಯಾವುದೋ ಮುರುಕಲು ಕುರ್ಚಿ ಹಾಕಿದರು. ಅದರಲ್ಲಿ ಕುಳಿತೆ. ಇನ್ನು ಕೆಲವರು ಬಂದರು, ಅವರಿಗಿಲ್ಲ. ಒಬ್ಬರು ಎದ್ದು ಹೋದಮೇಲೆ ಇನ್ನೊಬ್ಬರು ಆ ಕುರ್ಚಿಯಲ್ಲಿ ಕುಳಿತುಕೊಳ್ಳುವ ಪ್ರಸಂಗ ಬಂತು. ಆಮೇಲೆ ಅವರು 'ಏನು ಮಾಡುವುದು ಫರ್ನಿಚರ್ ಒದಗಿಸಿಲ್ಲ' ಎಂದು ಹೇಳಿದರು. ಇಷ್ಟು ಕೋಟಿಗಟ್ಟಲೆ ರೂಪಾಯಿಗಳಿಗೆ ಸರ್ಕಾರ ಡಿಮ್ಯಾಂಡ್ ಇಟ್ಟಿರುವಾಗ,

ಇಂಥವುಗಳಿಗೇಕೆ ಹಣವಿಲ್ಲ? ಶಿರಸ್ತೇದಾರರ ಹತ್ತಿರ ನಾವು ಯಾರಾದರೂ ಹೋದರೆ ಅವರೇ ನಿಂತುಬಿಡುತ್ತಾರೆ. ಈ ಶೋಚನೀಯ ಪರಿಸ್ಥಿತಿಯನ್ನು ಅಲ್ಲಿಗೆ ಜಿಲ್ಲಾಧಿಕಾರಿಗಳೂ ಮಂತ್ರಿಗಳೂ ಅನೇಕ ಸಾರಿ ಭೇಟಿ ಕೊಟ್ಟಾಗ ನೋಡಿಲ್ಲವೇ? ಸಬ್‌ಡಿವಿಜನ್ ಅಧಿಕಾರಿಗಳ ಕಚೇರಿಯಲ್ಲಿಯೂ ಇದೇ ಪರಿಸ್ಥಿತಿ. ಯಾವುದೋ ಕಾಲದಲ್ಲಿ ಮಿಲಿಟರಿಯವರಿದ್ದಾಗ ಉಪಯೋಗಿಸಿ ಹಳೆಯದಾದ ಮೇಲೆ ಹರಾಜು ಮಾಡಿದ್ದ ಕುರ್ಚಿಗಳು. ಹೀಗೆ ಒಳಗೆ ಕೆಲಸಮಾಡುವವರಿಗೂ ಸುಖವಿಲ್ಲ, ಹೊರಗಿನಿಂದ ಬರುವ ರೈತರಿಗೂ ಸುಖವಿಲ್ಲ. ಅಮಲ್ದಾರರನ್ನು ಭೇಟಿಮಾಡುವ ಕಾಲವನ್ನು ನಿರ್ದಿಷ್ಟ ಮಾಡಬೇಕೆಂಬ ಬಗ್ಗೆ ಸಲಹೆಕೊಟ್ಟಿದ್ದೇನೆ. ತಾಲ್ಲೂಕಿಗೆ ಒಬ್ಬ ಅಮಲ್ದಾರರಿರುವಾಗ ಸಬ್ ಡಿವಿಜನ್ ಆಫೀಸರ ಹುದ್ದೆ ಅನಾವಶ್ಯಕ. ಸಬ್‌ಡಿವಿಜನ್ ಆಫೀಸರಿಗಿರುವ ಅಧಿಕಾರವೆಲ್ಲವನ್ನೂ ಅಮಲ್ದಾರರಿಗೇ ಕೊಟ್ಟುಬಿಡಬಹುದು. ಡಿವಿಜನಲ್ ಕಮೀಷನರಿಗೆ ಕೊಟ್ಟಿರುವ ಅಧಿಕಾರಗಳನ್ನು ಡೆಪ್ಯುಟಿ ಕಮೀಷನರಿಗೆ ಕೊಡಬಹುದು.

ಅಕ್ವಿಜಿಷನ್ ವಿಚಾರದಲ್ಲಿ ಕೆಲಸ ಬಹಳ ನಿಧಾನವಾಗುತ್ತಿದೆ, ಜಮೀನನ್ನು ಹಂಚುವ ವಿಚಾರದಲ್ಲಿ ಕಾಗದ ಪತ್ರಗಳು ಬಹಳ ನಿಧಾನವಾಗುತ್ತಿವೆ ಎಂದು ಕೆಲವರು ಹೇಳಿದರು. ಜಮೀನಿನ ವಿಷಯ ಒಂದೇ ಅಲ್ಲ, ಎಲ್ಲ ವಿಷಯಗಳಲ್ಲಿಯೂ ನಿಧಾನವಾಗಿದೆ. ಅವರಿಗೆ ಸರ್ಕಾರ ಈ ಅಧಿಕಾರ ಕೊಟ್ಟಿರುವಂತೆ ಕಾಣುತ್ತದೆ. ಯಾವಾಗ ಬೇಕಾದರೂ ಹಳ್ಳಿಗಳಿಗೆ ಹೋಗಬಹುದು, ಯಾವಾಗ ಬೇಕಾದರೂ ಆಫೀಸಿಗೆ ಬರಬಹುದೆಂದು ಮಾಡಿರುವಂತೆ ಕಾಣುತ್ತದೆ. ಇದರಿಂದ ಹಳ್ಳಿಗಳವರಿಗೆ ತೊಂದರೆಯಾಗುವುದಲ್ಲದೆ ಸರ್ಕಾರಕ್ಕಾಗುವ ನಷ್ಟ ಮತ್ತು ಜನಸಾಮಾನ್ಯರಿಗಾಗುವ ನಷ್ಟ ಹೇಳತೀರದಾಗಿದೆ. ಲ್ಯಾಂಡ್ ಅಕ್ವಿಜಿಷನ್ ಅಧಿಕಾರವೆಲ್ಲವೂ ಕೇಂದ್ರೀಕೃತವಾಗಿದೆ. ಈ ಅಧಿಕಾರವನ್ನು ಡೆಪ್ಯುಟಿ ಕಮೀಷನರಿಗೆ ಕೊಡದೇ ಹೋದರೆ ಬಹಳ ತೊಂದರೆಯಾಗುತ್ತದೆ. ಇದಕ್ಕೆ ನೂರಾರು ಸಾವಿರಾರು ಉದಾಹರಣೆಗಳನ್ನು ನಾನು ಕೊಡಬಲ್ಲೆ. ದಾವಣಗೆರೆಯಿಂದ ಕುಂದುವಾಡದವರೆಗೆ ಇರುವ ರಸ್ತೆಯಲ್ಲಿ ಹನ್ನೆರಡು ವರ್ಷಗಳ ಹಿಂದೆ ಜಲ್ಲಿಕಲ್ಲು ರಾಶಿಗಳನ್ನು ಹಾಕಿದರು; ಮುಂದೆ ಕೆಲಸಮಾಡದೆ ಅಲ್ಲಿಗೇ ಬಿಟ್ಟರು. ಅಲ್ಲಿ ಮಧ್ಯೆ ಒಬ್ಬ ಸಾಹುಕಾರರ ಜಮೀನಿದೆ, ಅವರು ತಡೆದರು, ಕೆಲಸ ಅಲ್ಲಿಗೇ ನಿಂತಿತು. ಆ ಜಲ್ಲಿಯೆಲ್ಲಾ ಹಾಗೆಯೇ ಮಣ್ಣಿನಲ್ಲಿ ಹೂತುಹೋಗಿದೆ. ಡೆಪ್ಯುಟಿ ಕಮೀಷನರರೂ, ಸಬ್‌ಡಿವಿಜನ್ ಆಫೀಸರೂ ಅಲ್ಲಿ ಹೋಗಿ ನೋಡಿ ಮರುಗುತ್ತಾರೆಯೇ ವಿನಾ ಏನೂ ಮಾಡಿಲ್ಲ. ಆದುದರಿಂದ ಅಕ್ವಿಜಿಷನ್ ಅಧಿಕಾರವನ್ನು ಡೆಪ್ಯುಟಿ ಕಮೀಷನರಿಗೆ ಕೊಡುವುದು ಬಹಳ ಸೂಕ್ತ.

ಚುನಾವಣೆಯ ವಿಷಯ. ಎಷ್ಟೋ ಹಳ್ಳಿಗಳಿಗೆ ಹೋದರೆ, ಅಲ್ಲಿರುವ ಜನಸಂಖ್ಯೆ 150, 200 ಅಥವಾ 300 ಇರುತ್ತದೆ. ಅಂಥಾ ಕಡೆ ಚುನಾವಣೆಯ ಸಂಬಂಧದಲ್ಲಿ ತಯಾರಾದ ಓಟುದಾರರ ಪಟ್ಟಿಯಲ್ಲಿ 20-30 ಹೆಸರನ್ನು ಬಿಟ್ಟಿದ್ದಾರೆ, 50 ಜನರನ್ನು ಬಿಟ್ಟಿದ್ದಾರೆ ಎಂದು ಹೇಳುತ್ತಾರೆ. ಪಟ್ಟಿಯನ್ನು ತಯಾರು ಮಾಡುವವರು ಗ್ರಾಮಾಧಿಕಾರಿಗಳು, ತನಿಖೆ ಮಾಡುವ ಕೆಲಸ ಅಮಲ್ದಾರರಿಗೆ ಸಂಬಂಧಪಟ್ಟದ್ದು. ಹೋದ ಚುನಾವಣೆಯಲ್ಲಿ ಈ ಕೆಲಸ ಸರಿಯಾಗಿ ನಡೆದಿಲ್ಲವೆಂಬುದಕ್ಕೆ ಪ್ರತಿ ಹಳ್ಳಿಯ ವಿಚಾರದಲ್ಲಿಯೂ ನಿದರ್ಶನ ಕೊಡಬಹುದು.

ಅಣಜಿಕೆರೆಯ ಹಿಂದೆ ದಾವಣಗೆರೆಗೆ 14 ಮೈಲಿ ದೂರದಲ್ಲಿರುವ ಕೆರೆಯಾಲಹಳ್ಳಿ, ಕೆಂಚೇನಹಳ್ಳಿ ಎಂಬ ಗ್ರಾಮಗಳು ಕೆರೆ ತುಂಬಿದಾಗ ಊರಿನೊಳಕ್ಕೆ ನೀರು ಬಂದು ಅಲ್ಲಿ ಮನೆಗಳ ಗೋಡೆಗಳಲ್ಲಿ ಒಂದೆರಡು ಅಡಿಯವರೆಗೆ ಶೀತ ಏರುತ್ತದೆ. ಹಿಂದೆ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಸಚಿವರಾಗಿದ್ದಾಗ ಒಮ್ಮೆ ಜಗಳೂರು ಮಾರ್ಗವಾಗಿ ಅಲ್ಲಿಗೆ ಬಂದಾಗ ಆ ಹಳ್ಳಿಯವರು ಚಪ್ಪರ ಹಾಕಿ ಈ ತೊಂದರೆಯನ್ನು ಅವರಲ್ಲಿ ಹೇಳಿಕೊಂಡರು. ಎಷ್ಟೋ ಅರ್ಜಿಗಳನ್ನು ಕೊಟ್ಟರು. ನಾನೂ ಹೋಗಿ ಕೇಳಿದೆ. ಅಮಲ್ದಾರರನ್ನು ಕೇಳಿದರೆ ಅದಕ್ಕೆ ಹಣವನ್ನು ಯಾವ 'ಹೆಡ್'ನಿಂದ ಕೊಡಬೇಕೆಂಬುದು ಅವರಿಗೇ ತಿಳಿಯದು. ಅಲ್ಲಿ ಬಡಬಗ್ಗರಿಗೆ ಬಾವಿಯ ಸೌಕರ್ಯ ಕೊಡಬೇಕೆಂದು ಎಷ್ಟೋ ವರ್ಷಗಳಿಂದ ಕೇಳುತ್ತಿದ್ದಾರೆ ಇದು ಯಾವ 'ಹೆಡ್'ನಲ್ಲಿ ಬರುತ್ತದೆಯೋ ನನಗೆ ಗೊತ್ತಿಲ್ಲ. ಇದನ್ನು ದಯವಿಟ್ಟು ಮಂತ್ರಿಗಳು ಗುರುತು ಹಾಕಿಕೊಳ್ಳಬೇಕು. ನಾನು ಈ ವಿಚಾರದಲ್ಲಿ ಪ್ರಶ್ನೆ ಕೂಡ ಹಾಕಿದ್ದೆ. ಸೆಕ್ರೆಟೇರಿಯಟ್ ಮಟ್ಟದಲ್ಲಿ ಯಾವ ಅಪಾದನೆಯನ್ನೂ ಮಾಡಬಾರದೆಂದು ಅಧ್ಯಕ್ಷರು ಹೇಳಿದರು. . . . .

ಅಧ್ಯಕ್ಷರು.—ಲೆಜಿಸ್ಲೇಚರ್ ವಿಚಾರದಲ್ಲಿ ನಾನು ಹೇಳಿದುದು.

ಶ್ರೀ ಕೆ. ಟಿ. ಜಂಬಣ್ಣ.—ಆ ಪ್ರಶ್ನೆಗೆ ಜವಾಬು ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಈ ಅನಾನುಕೂಲಗಳನ್ನು ಸರಿಮಾಡಿಕೊಡಬೇಕು.

ಶ್ರೀ ಕೆ. ಮಲ್ಲಪ್ಪ (ಮಡಿಕೇರಿ).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದಿಡಲ್ಪಟ್ಟಿರತಕ್ಕ ಬೇಡಿಕೆಯ ಸೂಚನೆಯನ್ನು ಪುಷ್ಟೀಕರಿಸುತ್ತಾ ನಾನು ಎರಡು ಮಾತುಗಳನ್ನಾಡಬೇಕೆಂದು ನಿಂತಿದ್ದೇನೆ. ಅನೇಕ ಕಾರಣಗಳಿಂದ ನಮ್ಮ ಆಡಳಿತದ ಖರ್ಚು ಹೆಚ್ಚಾಗಿದೆ ಎನ್ನುವುದು ನಮ್ಮ ಈ ಸಭೆಯ ಅಭಿಪ್ರಾಯ. ಇದನ್ನು ಸರ್ಕಾರ ಕೂಡ ಒಪ್ಪಿಕೊಂಡಿದೆ. ಈ ಖರ್ಚನ್ನು ಆದಷ್ಟುಮಟ್ಟಿಗೆ ಕಡಮೆ ಮಾಡಬೇಕೆಂದು ಸರ್ಕಾರ ಒಬ್ಬರು ಪರಿಣತರೂ ಅನುಭವಶಾಲಿಗಳೂ ಆದ ಅಧಿಕಾರಿಗಳನ್ನು ನೇಮಕಮಾಡಿ ಅವರ ಸಲಹೆಯನ್ನು ತೆಗೆದುಕೊಳ್ಳಬೇಕೆಂಬ ಅಭಿಪ್ರಾಯವನ್ನು ಸಭೆಯ ಮುಂದೆ ಹೇಳಿದ್ದಾರೆ. ಇಂಥ ಅಧಿಕಾರಿ ನೇಮಿತರಾಗಿ ಸಂಶೋಧನೆ ನಡೆಸಿ, ಅವರ ವರದಿಯನ್ನು ಸರ್ಕಾರ ಪರಿಶೀಲನೆಮಾಡಿ, ತೀರ್ಮಾನ ಮಾಡಬೇಕಾದರೆ ಕಾಲವಿಳಂಬವಾಗುತ್ತದೆ. ತೀವ್ರವಾದ ನೀತಿಯನ್ನನುಸರಿಸಬೇಕಾಗಿರುವಾಗ ಆದಷ್ಟು ಮಟ್ಟಿಗೆ ಮಿತವ್ಯಯವನ್ನು ಸಾಧಿಸುವುದು ಅವಶ್ಯಕ. ಈ ಮಿತವ್ಯಯವನ್ನು ತೃಪ್ತಿಕರವಾಗಿ ಸಾಧಿಸಬೇಕಾದರೆ ಸೆಕ್ರೆಟೇರಿಯಟ್ಟಿನಲ್ಲಾಗಲಿ ಅಥವಾ ಡಿಪಾರ್ಟ್‌ಮೆಂಟ್ ಲೆವೆಲ್‌ನಲ್ಲಾಗಲಿ ಮಿತವ್ಯಯ ಯೂನಿಟ್ಟುಗಳನ್ನು ಆದಷ್ಟುಬೇಗ ಜಾರಿಗೆ ತರತಕ್ಕದ್ದು ಸೂಕ್ತವಾದುದು ಎಂಬ ನನ್ನ ಅಭಿಪ್ರಾಯವನ್ನು ಸಭೆಯ ಮುಂದೆ ವಿನಂತಿಮಾಡುತ್ತೇನೆ. ಇಂಥ ಕಾರ್ಯಕ್ರಮವನ್ನು ಈಗಾಗಲೆ ಕೇಂದ್ರ ಸರ್ಕಾರ ಕೈಕೊಂಡಿದೆ. ಅಲ್ಲಿ ಎಲ್ಲಾ ಸೆಕ್ರೆಟೇರಿಯಟ್ ಬ್ರಾಂಚುಗಳಲ್ಲೂ ಮತ್ತು ಡಿಪಾರ್ಟ್‌ಮೆಂಟ್‌ಗಳ ಲೆವೆಲ್‌ನಲ್ಲೂ ಕೂಡ ಮಿತವ್ಯಯ ಸಮಿತಿ ಯೂನಿಟ್ ಏರ್ಪಾಡುಮಾಡಿ ಆದಷ್ಟು ಶೀಘ್ರದಲ್ಲಿ ಮಿತವ್ಯಯವನ್ನು ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನಪಡುತ್ತಿದ್ದಾರೆ. ಅಂಥ ಏರ್ಪಾಡನ್ನು ನಮ್ಮ ಸರ್ಕಾರದವರೂ ಕೂಡ ಮಾಡಿದರೆ ಒಳ್ಳೆಯದೆಂದು ಹೇಳಬಯಸುತ್ತೇನೆ. ಇದು ಅಧಿಕಾರಿಗಳನ್ನು ನೇಮಕ ಮಾಡುವುದಕ್ಕೆ ವಿರೋಧವಾಗುವುದಿಲ್ಲ, ಬಹಳ ಸಹಾಯಕವಾಗುತ್ತದೆ. ನಾವು ಕಂಡಹಾಗೆ, ನಮ್ಮ ಅನುಭವಕ್ಕೆ ಬಂದಹಾಗೆ, ವಿಶೇಷ ಪರಿಣತರಿಗೆ, ಅಧಿಕಾರಿ

(ಶ್ರೀ ಕೆ. ಮಲ್ಲಪ್ಪ.)

ಗಳಿಗೆ ಈ ಕೆಲಸ ವಹಿಸಿದರೆ ಬಹಳ ಮಟ್ಟಿಗೆ ಸಹಾಯವಾದೀತೆಂದು ತಿಳಿಯುತ್ತೇನೆ.

ಮತ್ತೊಂದು ವಿಷಯ : ನಮ್ಮ ಮಿತ್ರರಾದಂಥ ಶ್ರೀ ಎ. ಆರ್. ಬದರಿನಾರಾಯಣ್ ಮತ್ತು ಶ್ರೀ ದೇವರಾಜ ಅರಸ್ ಅವರು ಡಿವಿಜನಲ್ ಕಮಿಷನರ್ ಆವಶ್ಯಕತೆ ಇಲ್ಲವೆಂದು ಸಲಹೆ ಮಾಡಿದರು. ನಾನು ಅದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಈ ದಿವಸ ಆ ಕಮಿಷನರು ಬಂದು ಡೆಪ್ಯುಟಿ ಕಮಿಷನರುಗಳ ಹೊಣೆಗಾರಿಕೆ ಬಹಳಮಟ್ಟಿಗೆ ಕಡಮೆಯಾಗಿದೆ. ಅದರ ದುಷ್ಪರಿಣಾಮವಾಗಿ ಅವರಲ್ಲಿದ್ದ ಆಸಕ್ತಿ, ಉತ್ಸಾಹ, ಧೈರ್ಯ ಅಧಿಕಾರ ವಗೈರೆ ಬಹಳಮಟ್ಟಿಗೆ ಕಡಮೆಯಾಗಿದೆ. ಇದರಿಂದ ಜನರಿಗೆ ಬಹಳಮಟ್ಟಿಗೆ ತೊಂದರೆಯಾಗುತ್ತಿದೆ. ಡೆಪ್ಯುಟಿ ಕಮಿಷನರಿಗಿರುವ ಹೊಣೆಗಾರಿಕೆ, ಅವರಲ್ಲಿರುವ ಉತ್ಸಾಹ, ಅವರ ಆಸಕ್ತಿ, ಧೈರ್ಯ ಹೆಚ್ಚಿಸಬೇಕಾದರೆ ಮೊದಲಿದ್ದ ಪದ್ಧತಿಯನ್ನು ಜಾರಿಗೆ ತಂದು ಡಿವಿಜನಲ್ ಕಮಿಷನರನ್ನು ತೆಗೆದುಹಾಕಬೇಕು. ಇದರಿಂದ ಬಹಳಮಟ್ಟಿಗೆ ಜನರಿಗೆ ಸಹಾಯವಾಗುವುದು ಮಾತ್ರವಲ್ಲದೆ ಖರ್ಚುಕೂಡ ಬಹಳಮಟ್ಟಿಗೆ ಕಡಮೆಯಾಗುತ್ತದೆ. ಈಗ ಕಾಗದ ಪತ್ರಗಳ ವಿಲೇವಾರಿ ಕೂಡ ಬಹಳಮಟ್ಟಿಗೆ ವಿಳಂಬವಾಗುತ್ತದೆಯೆಂಬುದನ್ನು ನಾನು ಸಭೆಯ ಮುಂದೆ ಸಂತಾಪದಿಂದ ಸೂಚಿಸುತ್ತೇನೆ.

ನಮ್ಮ ಸರ್ಕಾರದವರು ಇತ್ತೀಚೆಗೆ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರುಗಳೇನಿದ್ದರೋ ಅವರನ್ನು ಡಿಸ್ಟ್ರಿಕ್ಟ್ ಲೆವಲ್‌ನಿಂದ ತೆಗೆದು ರೀಜನಲ್ ಟ್ರಾನ್ಸ್‌ಪೋರ್ಟ್ ಆರ್ಗನೈಜೇಷನ್ ಮಾಡಿದ್ದಾರೆ. ಇದರಿಂದ ಖರ್ಚು ಕಡಮೆಯಾಗಬಹುದೆಂಬ ದೃಷ್ಟಿಯಿಂದ ಹಾಗೆ ಮಾಡಿರಬಹುದು. ಆದರೆ ಈಗ ಅದರಿಂದ ಬಹಳ ಮಟ್ಟಿಗೆ ಮೇಲ್ವಿಚಾರಣೆ ಕಡಮೆಯಾಗಿ ಉತ್ಪತ್ತಿ ಕೂಡ ಬಹಳವಾಗಿ ಕಡಮೆಯಾಗುತ್ತಿದೆಯೆಂದು ಶಂಕೆಯಿದೆ ; ಈಗಾಗಲೇ ಇದು ಅನುಭವಕ್ಕೆ ಬಂದಿದೆ. ಮೇಲ್ವಿಚಾರಣೆ ಬಹಳ ಮಟ್ಟಿಗೆ ಕಡಮೆಯಾಗಿ ಜನರಿಗೆ ಬಹಳ ತೊಂದರೆಯಾಗಿದೆ. ಮೊದಲಿದ್ದ ಹಾಗೆ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಮೇಲ್ವಿಚಾರಣೆ ನಡೆಸುವುದನ್ನು ಡೆಪ್ಯುಟಿ ಕಮಿಷನರಿಗೆ ವಹಿಸಿದರೆ, ಹಳೆಯ ಸಂಸ್ಥೆಗಳನ್ನೇ ಏರ್ಪಾಡು ಮಾಡಿದರೆ ಆದಷ್ಟು ಮಟ್ಟಿಗೆ ಮೇಲ್ವಿಚಾರಣೆಯನ್ನು ದಕ್ಷತೆಯಿಂದ ಮತ್ತು ಬಹಳ ಎಚ್ಚರಿಕೆಯಿಂದ ನಡೆಸುವ ವ್ಯವಸ್ಥೆ ಮಾಡಿದರೆ ಅದರಿಂದ ಸ್ವಲ್ಪ ಮಟ್ಟಿಗೆ ಖರ್ಚು ಹೆಚ್ಚಾದರೂ ಕೂಡ ಆ ಬಾಬಿನಲ್ಲಿ ಬರುವ ಉತ್ಪತ್ತಿ ಹೆಚ್ಚುತ್ತದೆಂದು ಭಾವಿಸಿದ್ದೇನೆ. ಇಂತಿಷ್ಟು ಸಲಹೆ ಕೊಟ್ಟು ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಜಿ. ಖೋತ್ (ಸಡಳಗ).—ಮಹಾಶಯರೆ, ರಾಜಕಾರಣ ಇದೊಂದು ಅತ್ಯಂತ ಕ್ಲಿಷ್ಟ ಮತ್ತು ಜಟಿಲ ವಿಷಯವಾಗಿದೆ. ಅದರೊಳಗೂ ಆಧುನಿಕ ರಾಜಕಾರಣ ಇದು ; ಅತ್ಯಂತ ಕ್ಲಿಷ್ಟತರ ಜಟಿಲತಮ ಆಗಿದೆ. ಮನುಷ್ಯನು ಮನೆಯೊಳಗೆ ಸರಿಯಾಗಿ ನಡೆದುಕೊಳ್ಳಬೇಕು, ತನ್ನ ಜನರನ್ನು ಹೆಂಡತಿ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳಬೇಕು. ಹಾಗೆ ಮಾಡಿದರೆ ಲೇಸು, ಇಲ್ಲದಿದ್ದರೆ ದೂಷಣಕ್ಕೆ ಪಾತ್ರನಾಗುತ್ತಾನೆ. ಊರು ಮಾಡುವ ತಪ್ಪಿಗೆ ನಾಯಕನು ಊರ ಮಂದಿ ಕಡೆಯಿಂದ ದೂಷಣೆ ತೆಗೆದುಕೊಳ್ಳಬೇಕಾಗುತ್ತದೆ, ರಾಜ್ಯದೊಳಗೆ ರಾಜ್ಯ ಕಾರುಬಾರು ಮಾಡುವ ರಾಜ್ಯ ಕರ್ಮಚಾರಿಗಳು ಜನಾಂಗದ ಕಡೆಯಿಂದ ದೂಷಣೆ ತೆಗೆದುಕೊಳ್ಳಬೇಕಾಗುತ್ತದೆ. ಅದೇ ಪ್ರಕಾರ ನಮ್ಮ ಆಧುನಿಕ ರಾಜ್ಯ ಕಾರುಬಾರು ಮಾಡುವ ಹನ್ನೊಂದು ಮಂದಿ ರಾಜ್ಯ ಕರ್ಮಚಾರಿಗಳು ಇಲ್ಲಿರುವ ನಮ್ಮ ಇನ್ನೂರು ಮಂದಿಗಳಿಂದ ದೂಷಣೆ ತೆಗೆದುಕೊಳ್ಳಬೇಕಾಗಿದೆ. ವಸ್ತುತಃ ನಾವೇ ಅವರ ಸ್ಥಾನದಲ್ಲಿದ್ದರೆ ಯಾವ ರೀತಿ ರಾಜ್ಯ ಕಾರುಬಾರು ನಡೆಸುತ್ತಿದ್ದೆವೆಂಬುದು ಮುಖ್ಯವಾದುದು. ಯಾರೇ ಆ ಸ್ಥಾನದಲ್ಲಿದ್ದರೂ ಟೀಕೆಗೆ ಒಳಗಾಗುವುದು ಸ್ವಾಭಾವಿಕ. Criticism is a healthy sign in politics. But it must be constructive and not destructive. ಟೀಕೆ ಮಾಡುವ ರೀತಿ ವಿಧಾಯಕವಾಗಿರಬೇಕು, ಸಲಕ್ಷಣವಾಗಿರಬೇಕು. ಇಲ್ಲದಿದ್ದರೆ ಪರಿಶೀಲಿಸುವುದಕ್ಕೆ ಕಷ್ಟವಾಗುತ್ತದೆ. ಮಿತವ್ಯಯ ಯಾವ ರೀತಿ ಮಾಡಬೇಕು, ರಾಜಕೀಯ ಕಾರುಬಾರುಗಳಲ್ಲಿ ಎಷ್ಟು ಶಕ್ಯವಿದೆ ಎಂದು ತಿಳಿದುಕೊಂಡು ಕಾರ್ಯಕ್ರಮ ಕೈಕೊಳ್ಳಬೇಕು. ಟೀಕೆ ಮಾಡುವುದು ಸುಲಭ. ಆದರೆ ಆ ಪ್ರಕಾರ ಕೃತಿಗೆ ತರುವುದು ಹೆಚ್ಚು ಕಠಿಣ. ಯಾವ ಮನುಷ್ಯನು ತನ್ನ ಉಕ್ತಿಯಂತೆ ಕೃತಿ ಮಾಡುತ್ತಾನೆಯೋ ಅವನು ಜಗತ್ತಿನಲ್ಲಿ ಶ್ರೇಷ್ಠ, ಮತ್ತು ಪೂಜ್ಯನಾಗುತ್ತಾನೆ. ಮಹಾತ್ಮ ಗಾಂಧಿಯವರು ತಮ್ಮ ಬಾಯಿಯಿಂದ ಏನನ್ನು ಹೇಳುತ್ತಿದ್ದರೋ ಅದನ್ನು ಕೃತಿಗೆ ತರುತ್ತಿದ್ದರು ; ತಾವು ಹೇಳುವಂತೆ ಆಚರಣೆಮಾಡಿ ತೋರಿಸುತ್ತಿದ್ದರು. ಆದರಿಂದಲೇ ಅವರು ಜಗತ್ತಿಗೆ ಪೂಜ್ಯರಾದರು. ಅವರ ನೀತಿ ಪೂಜ್ಯವಾದುದು. ನಾನು ಒಂದು ಖೋತಾ ಸೂಚನೆಯನ್ನು ಕಳುಹಿಸಿದ್ದೇನೆ. ಮಂತ್ರಿಗಳ ಮೇಲೆ ಟೀಕೆ ಮಾಡಬೇಕೆಂಬ ಉದ್ದೇಶದಿಂದ ಅದನ್ನು ಕಳುಹಿಸಿಲ್ಲ, ಈ ಸಭಾ ಮಂಡಲಿ, ಈ ಕಾಯಿದೆ ಮಂಡಲಿ, ಇಲ್ಲಿರುವ ಸದಸ್ಯರು ಎಲ್ಲರೂ ಬೇರೆ ಕಡೆಯಿಂದ ತಮ್ಮಮೇಲೆ ದೂಷಣೆ ಬರದಂತೆ ನಡೆದುಕೊಳ್ಳುತ್ತಿರುವರೆಂಬುದನ್ನು ತಮ್ಮಲ್ಲಿ ಆತ್ಮ ಸಂಶೋಧನೆ ಮಾಡಿಕೊಂಡು ನೋಡಲಿ. ಮೈಸೂರು ರಾಜ್ಯದವರು, ಉತ್ತರ (ಮುಂಬಯಿ) ಕರ್ನಾಟಕದವರು, ಹೈದರಾಬಾದ್, ಮದರಾಸ್ ಕಡೆಯವರು ಎಲ್ಲರೂ ಇಲ್ಲಿದ್ದಾರೆ. ಇಲ್ಲಿರುವ ಸದಸ್ಯರೆಲ್ಲರೂ ತಾವು ಖರ್ಚು ಮಾಡುವುದಕ್ಕೆ ಸರಿಯಾಗಿ ಭತ್ಯ ಪಡೆಯುತ್ತಿದ್ದಾರೆಯೆ ? ಎಂಬುದನ್ನು ಅವರೇ ಪರಿಶೀಲನೆ ಮಾಡಿ ನೋಡಲಿ. ಸೆಕೆಂಡ್ ಕ್ಲಾಸಿನಲ್ಲಿ ರೈಲ್ವೆ ಪ್ರಯಾಣ ಮಾಡಿ ಫಸ್ಟ್ ಕ್ಲಾಸಿನ ಛಾರ್ಜನ್ನು ಪಡೆಯುವುದು ಎಷ್ಟು ಅನ್ಯಾಯ ? ಮಂತ್ರಿ ಮಂಡಲವನ್ನು ಟೀಕೆ ಮಾಡುವುದಕ್ಕೆ ಮುಂಚೆ, ಇತರರನ್ನು ಟೀಕಿಸುವುದಕ್ಕೆ ಮೊದಲು, ನಮ್ಮಲ್ಲಿರುವ ದೋಷಗಳೇನೆಂಬುದನ್ನರಿತು ಅವನ್ನು ತಿದ್ದಿಕೊಳ್ಳಬೇಕು. There are merits, qualities and sacrifices on both sides. ಈಗ ಮಂತ್ರಿಗಳನ್ನು ಅನೇಕರು ಟೀಕೆ ಮಾಡಿದ್ದಾರೆ. ನಾವೇ ಅವರ ಸ್ಥಾನದಲ್ಲಿದ್ದರೆ ಟೀಕೆಗೆ ಒಳಗಾಗುತ್ತಿರಲಿಲ್ಲವೆ, ನಮ್ಮಲ್ಲಿ ಲೋಪದೋಷಗಳಿಲ್ಲವೇ ? ಎಂಬುದನ್ನು ಮೊದಲು ಪರಿಶೀಲಿಸಿ ಇಷ್ಟುದಿವಸ ಸದಸ್ಯರೇನು ಪಗಾರ ತೆಗೆದು ಕೊಂಡಿದ್ದಾರೋ ಅದಕ್ಕೆ ತಕ್ಕಷ್ಟು ಖರ್ಚಿದೆಯೆ ಎಂಬುದನ್ನು ಯೋಗ್ಯ ರೀತಿಯಿಂದ ಅಂದಾಜು ಮಾಡಿನೋಡಿ ಹೆಚ್ಚಿನ ಪಗಾರವನ್ನು ತ್ಯಾಗಮಾಡಲು ತಯಾರಾಗಬೇಕು ; ಕೂಡಲೆ ನಿಶ್ಚಯ ಮಾಡಬೇಕು. ಈಗ ನಮಗೆಲ್ಲರಿಗೂ ದಿನಕ್ಕೆ 16 ರೂಪಾಯಿಗಳ ಡಿ. ಎ. ಸಿಕ್ಕುತ್ತದೆ. ಎಲ್ಲರೂ ಕೂಡ ಪ್ರಾಮಾಣಿಕತೆಯಿಂದ ತಮಗೆ ದಿನಕ್ಕೆ 16 ರೂಪಾಯಿಗಳ ಖರ್ಚಿದೆ ಎಂಬುದನ್ನು ಪರಿಶೀಲನೆ ಮಾಡಿದ್ದೇ ಆದರೆ ಅಷ್ಟು ಖರ್ಚು ಹುಟ್ಟುವುದಿಲ್ಲ, ನನಗೆ ಅಷ್ಟು ಖರ್ಚಾಗುವುದಿಲ್ಲ. ಹಾಗೆ ಪರೀಶಿಲಿಸಿ ಖರ್ಚಾಗುವುದನ್ನು ಮಾತ್ರ ಪಡೆಯುವುದಾದರೆ ಸೇಲ್ಸ್‌ಟಾಕ್ಸ್,

ಅಗ್ರಿಕಲ್ಚರಲ್ ಇನ್‌ಕಮ್ ಟ್ಯಾಕ್ಸ್, ಯೂನಿಫಾರ್ಮಿಟಿ ಟ್ಯಾಕ್ಸೇಷನ್ ಅಥವಾ ಬೇರೆ ಟ್ಯಾಕ್ಸೇಷನ್ ಅಷ್ಟೊಂದು ಜಾರಿಗೆ ಬರುವ ಕಾರಣವಿಲ್ಲ. ಟೀಕೆ ಮಾಡುವುದಕ್ಕೆ ಮುಂಚೆ ನಾವು ಹೆಚ್ಚಾಗಿ ಖರ್ಚು ಮಾಡುವುದನ್ನು ಬಿಡಬೇಕು. ಎಷ್ಟು ಅವಶ್ಯಕವೋ ಅಷ್ಟನ್ನೇ ತೆಗೆದುಕೊಳ್ಳಬೇಕು. ತಮ್ಮ ವಿಚಾರ ನೋಡಿಕೊಂಡು ಅನಂತರ ಹೊರಗಿನ ವಿಚಾರಕ್ಕೆ ಕೈ ಹಾಕಬೇಕು. ಇನ್ನೊಬ್ಬರನ್ನು ಟೀಕಿಸುವ ಮೊದಲು ನಾವು ಹೇಳುವುದನ್ನು ನಾವೇ ಎಷ್ಟರಮಟ್ಟಿಗೆ ಪಾಲಿಸುತ್ತಿದ್ದೇವೆಂಬುದನ್ನು ಯೋಚಿಸಬೇಕು. ನಮ್ಮ ರಾಜ್ಯಪಾಲರು ಬಹಳ ಉದಾರವಾಗಿ ಘನವಾದ ರೀತಿಯಲ್ಲಿ ತಾವು ಒಂದು ಪೈ ಸಹ ಸಂಬಳದ ರೂಪದಲ್ಲಿ ತೆಗೆದು ಕೊಳ್ಳುವುದಿಲ್ಲವೆಂದು ತ್ಯಾಗ ಮಾಡಿದ್ದಾರೆ. ನಮ್ಮ ಕಡೆಯಿಂದ ಎಷ್ಟು ತ್ಯಾಗಮಾಡುವುದಕ್ಕೆ ಶಕ್ಯವಿದೆಯೋ ಅಷ್ಟು ತ್ಯಾಗಮಾಡುತ್ತೇವೆ. ಮಂತ್ರಿಮಂಡಲದವರು ಎಷ್ಟು ತ್ಯಾಗಮಾಡಬೇಕೋ ಅಷ್ಟು ತ್ಯಾಗಮಾಡಲಿ. ಅದರಿಂದ ಹಣ ಎಷ್ಟೋ ಉಳಿತಾಯವಾಗುತ್ತದೆ. ಡಿ.ಎ.ಯನ್ನು ಇನ್ನೂ ಕಡಮೆಮಾಡಬಹುದು. ಈ ವಿಚಾರವನ್ನು ಪ್ರತಿಯೊಬ್ಬ ಸನ್ಮಾನ್ಯ ಸದಸ್ಯರೂ ಯೋಗ್ಯ ರೀತಿಯಿಂದ ಯೋಚಿಸಬೇಕು. ನಾವು ಪ್ರಜಾಪ್ರತಿನಿಧಿಗಳು. ನಾವು ಈ ರೀತಿ ಹೆಚ್ಚು ಸಂಬಳವನ್ನೂ ಡಿ.ಎ. ಮತ್ತು ಟಿ.ಎ.ಗಳನ್ನೂ ಅಪೇಕ್ಷೆಮಾಡಬಾರದು. ನಾವು ಮೊದಲು ನಮ್ಮ ತಪ್ಪನ್ನು ತಿದ್ದುಕೊಳ್ಳದೆ ಇತರರಿಗೆ ಹೇಗೆ ಅವರ ತಪ್ಪನ್ನು ತಿದ್ದಿಕೊಳ್ಳಿ ಎಂದು ಹೇಳುವುದು ? ಸುಮ್ಮನೆ ಪೋಲೀಸ್ ಮತ್ತು ರೆವಿನ್ಯೂ ಶಾಖೆಗಳಲ್ಲಿ ಲಂಚಕೋರತನ ಜಾಸ್ತಿಯಾಗುತ್ತಿದೆಯೆಂದು ಹೇಳುವುದರಿಂದ ಏನೂ ಪ್ರಯೋಜನವಿಲ್ಲ. ಅವರಿಗೆ ಹೊಟ್ಟೆ ತುಂಬುವಷ್ಟು ಸಂಬಳ ಸಾರಿಗೆಗಳ ವ್ಯವಸ್ಥೆ ಮಾಡದಿರುವುದೇ ಇವಕ್ಕೆಲ್ಲಾ ಕಾರಣವಾಗಿದೆ. ಶ್ರೀ ಪೂಣಚ್ಚ ಅವರಿಗೆ ಎಲ್ಲರಂತೆ ಎರಡು ಕೈ, ಎರಡುಕಾಲು ಇವೆ. ಅವರು ಈ ಎಲ್ಲಾ ವಿಷಯಗಳನ್ನೂ ತಾವೇ ಬಗೆಹರಿಸಬೇಕೆಂದು ಹೇಳುವುದಕ್ಕೆ ಹೇಗೆ ತಾನೆ ಸಾಧ್ಯ ? ಅವರು ಆ ರೀತಿ ಮಾಡುವ ಬಗೆ ಹೇಗೆ ? ಈಗ ಎರಡು ಕೋಟಿ ಪ್ರಜಾಸಂಖ್ಯೆಯ ಮೇಲೆ ರಾಜ್ಯಭಾರವನ್ನು ಅವರು ನಿರ್ವಹಣೆ ಮಾಡಬೇಕಾಗಿದೆ. ಅವರಿಗೆ ಎಷ್ಟು ಶಕ್ಯವೋ ಅಷ್ಟು ಮಾಡಬಹುದು. ಅವರು ಯಾವ ರೀತಿ ಕೆಲಸ ಕಾರ್ಯಗಳನ್ನು ದಕ್ಷತೆಯಿಂದ ಮಾಡುತ್ತಿದ್ದಾರೆಂಬುದನ್ನು ನಾವು ಸ್ವತಃ ನೋಡುತ್ತಿದ್ದೇವೆ. ಪೋಲೀಸಿನವರಾದರೂ ನಮ್ಮಲ್ಲಿಯ ಮನುಷ್ಯರೇ. ಅವರೇನೂ ಬೇರೆಯಾಗಿ ಆಕಾಶದಿಂದ ಬಂದಿಲ್ಲ. ನಾವು ನೀತಿವಂತರಾದರೆ ಅವರೂ ನೀತಿವಂತರು. ಅವರನ್ನು ನಮ್ಮ ಮನೆಮಂದಿಯ ಹಾಗೆ ನೋಡಿಕೊಳ್ಳಬೇಕು. ಪ್ರತಿಯೊಬ್ಬ ಮನುಷ್ಯನೂ ರಾಷ್ಟ್ರಸೇವೆಗಾಗಿ ದುಡಿಯುವಂತೆ ಪ್ರಯತ್ನಮಾಡಬೇಕು.

ಈಗ ರಾಜ್ಯಾಡಳಿತದಲ್ಲಿ ದಿನೇ ದಿನೇ ಖರ್ಚು ವಿಪರೀತವಾಗುತ್ತಿದೆ. ದುಂದುವೆಚ್ಚಗಳನ್ನು ಕಡಮೆ ಮಾಡಲು ನಮ್ಮ ಸರ್ಕಾರದವರು ಎಷ್ಟೋ ಪ್ರಯತ್ನಗಳನ್ನು ಕೈಗೊಳ್ಳಬೇಕಾಗಿದೆ. ಈಗ ನಮ್ಮಲ್ಲಿ ಒಂದು ಅಸೆಂಬ್ಲಿ, ಒಂದು ಕೌನ್ಸಿಲ್ ಎಂದು ಎರಡು ಸಭೆಗಳಿವೆ. ವಾಸ್ತವಿಕವಾಗಿ ನನ್ನ ಅಭಿಪ್ರಾಯದಲ್ಲಿ ಇವೆರಡೂ ಅನಾವಶ್ಯಕವೆಂದೇ ಹೇಳುತ್ತೇನೆ. ಆದರೂ ಈಗ ಕೌನ್ಸಿಲ್‌ನಲ್ಲಿ ಸದಸ್ಯರ ಸಂಖ್ಯೆಯನ್ನು ಇನ್ನೂ ಹೆಚ್ಚು ಮಾಡಬೇಕೆಂದು ಇದ್ದಾರೆ. ಆ ರೀತಿ ಹೆಚ್ಚು ಮಾಡಲು ಪ್ರಯತ್ನಪಡಬಾರದು. ಇದ್ದುದನ್ನು ತೆಗೆಯುವುದಕ್ಕೆ ಪ್ರಯತ್ನಮಾಡಬೇಕು. There is no necessity to increase the strength of the Council ಕನಿಷ್ಟಪಕ್ಷಕ್ಕೆ ಈಗಿರುವ ಹಾಗೆಯೇ ಬಿಟ್ಟುಬಿಡಿ.

ಅಸೆಂಬ್ಲಿಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದು ನನ್ನ ಕರ್ತವ್ಯವೆಂದು ಅಪೇಕ್ಷಿಸಿ ಇಲ್ಲಿಗೆ ಬಂದಿದ್ದೇನೆ. ನನ್ನ ಅನುಭವದಲ್ಲಿ ಈಗ ಒಂದು ಮಾತನ್ನು ಹೇಳಬೇಕಾಗಿದೆ. ಇಡಿಯ ಇಂಡಿಯಾ ದೇಶಕ್ಕೆಲ್ಲಾ ಒಂದು ಪಾರ್ಲಿಮೆಂಟೇ ಸಾಕು. ಅಲ್ಲಿ ಸೀಟುಗಳನ್ನು ಬೇಕಾದರೆ ಜಾಸ್ತಿಮಾಡಲಿ. ಪ್ರಾಂತ ಸರ್ಕಾರಗಳಲ್ಲಿ ಗೌವರ್ನರ್, ತಜ್ಞ ಅಡ್ಮಿನಿಸ್ಟ್ರೇಟರ್ಸ್ ಮತ್ತು ಸೆಕ್ರೆಟೇರಿಯಟ್ ಮಾರ್ಫತ್ ಮಧ್ಯ ಸರ್ಕಾರಕ್ಕೆ ಜವಾಬ್ದಾರಿಯಾಗಿ ರಾಜ್ಯಾಡಳಿತವನ್ನು ನೋಡಿಕೊಳ್ಳಲಿ. ಇದರಿಂದ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುವುದು ನಿಂತು ಹೋಗುತ್ತದೆ. ಇದರಿಂದ ಇನ್ನೈದು ವರ್ಷಗಳಲ್ಲಿ ಕರ್ನಾಟಕ ಮತ್ತು ಎಲ್ಲ ಹಿಂದೂಸ್ಥಾನ ದೇಶ ನಂದನವನ ಆಗಬಹುದು. ಈ ಪ್ರಕಾರ ರಾಜ್ಯಭಾರವನ್ನು ನಿರ್ವಹಿಸಬೇಕು. ಕನಿಷ್ಠ ಪಕ್ಷಕ್ಕೆ ಅಪ್ಪರ್ ಕೌನ್ಸಿಲ್ಲನ್ನಾದರೂ ಬಂದ್‌ಮಾಡಬೇಕು ಈಗ ನಮ್ಮ ಸರಕಾರದವರು ಅಡ್ಮಿನಿಸ್ಟ್ರೇಷನ್ನಿಗೆ ಸಾಕಷ್ಟು ದುಡ್ಡು ಇಲ್ಲ ಎಂದು ಹೇಳುತ್ತಾರೆ. ಈ ರೀತಿ ನಾವು, ಕಾಯಿದೆ ಮಂಡಲ, ಸಂಬಳಗಳನ್ನೂ ಮತ್ತು ಅಲೋಯನ್ಸ್‌ಗಳನ್ನೂ ತೆಗೆದುಕೊಳ್ಳುತ್ತಾ ಹೋದರೆ ಆಡಳಿತವನ್ನು ಸುಗಮವಾಗಿ ನಡೆಸಲು ದುಡ್ಡು ಎಲ್ಲಿ ಸಿಕ್ಕುತ್ತದೆ? ಎಲ್ಲಿ ಸಾಕಾಗುತ್ತದೆ ? ಅದರಿಂದಲೇ ಬಡಜನರ ಮೇಲೆ ತೆರಿಗೆಗಳನ್ನು ವಿಧಿಸಬೇಕಾಗುತ್ತದೆ. ಆದ್ದರಿಂದ ಸನ್ಮಾನ್ಯ ಸದಸ್ಯರು ಮತ್ತು ಮಂತ್ರಿಗಳು ಶಕ್ಯವಿದ್ದಷ್ಟು ತಮ್ಮ ಸಂಬಳಗಳಲ್ಲಿ ಕಡಮೆಮಾಡಿಕೊಳ್ಳುವುದು ಉಚಿತ, ಇನ್ನು ಮತ್ತೊಂದು ವಿಷಯ. ಚುನಾವಣೆಗಾಗಿ ನಮ್ಮ ಸರಕಾರದವರು 13 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಉಮೇದುವಾರರು ಎಷ್ಟು ಖರ್ಚು ಮಾಡಿದ್ದಾರೆಂಬುದನ್ನು ಯಾರು ಬಲ್ಲರು ? ನಮಗೆ 20 ಸಾವಿರ ಖರ್ಚಾಗಿದ್ದರೆ ಆರು ಸಾವಿರ ಖರ್ಚಾಯಿತು ಎಂದು ಹೇಳಿಕೊಂಡು ಮೈಸೂರು ವಿಧಾನ ಸಭೆಗೆ ಅಪ್ರಮಾಣಿಕತೆಯಿಂದ ನಾವು ಬಂದಿದ್ದೇವೆಂದು ಹೇಳಬಹುದು. ಈ ರೀ ಎಲ್ಲ ವಿಷಯಗಳನ್ನೂ ವಿಚಾರಿಸಬೇಕೆಂದು ಹೇಳುತ್ತೇನೆ.

*ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ಮಾನ್ಯ ಅಧ್ಯಕ್ಷರೇ, ಸಾಮಾನ್ಯ ಆಡಳಿತದ ಬೇಡಿಕೆಯ ವಿಚಾರದಲ್ಲಿ ಒಂದೆರಡು ಸಲಹೆಗಳನ್ನು ಕೊಡಲು ಇಷ್ಟಪಟ್ಟು ಅದಕ್ಕೆ ಅನುಮೋದನೆಯನ್ನು ಕೊಡಲು ನಿಂತಿದ್ದೇನೆ. ಸಾಮಾನ್ಯವಾಗಿ ದೇಶದಲ್ಲಿ ಜನಗಳಿಗೆ ಸರ್ಕಾರದ ವಿಷಯವಾಗಿ ಒಂದು ಅಭಿಮಾನವಿಡಬೇಕಾಗಿದ್ದರೆ, ಸರಕಾರದ ವಿಷಯದಲ್ಲಿ ಒಂದು ವಿಶೇಷವಾದಂಥ ಆಸಕ್ತಿ ಉಂಟಾಗಿ ಜನತೆಗೆ ಒಂದು ನೆಮ್ಮದಿ ಬರಬೇಕಾಗಿದ್ದರೆ ರೆವಿನ್ಯೂ ಆಡಳಿತವೇನಿದೆಯೋ ಅದು ಮೊದಲಿನಿಂದಲೂ ಹುಷಾರಾಗಿ ಕೆಲಸಮಾಡಿಕೊಂಡು ಬರುತ್ತಿರಬೇಕಾದುದೇ ಮುಖ್ಯಕಾರಣ, ಇದರಿಂದ ತಾಲ್ಲೂಕ್ ಆಫೀಸಿನಿಂದ ಸೆಕ್ರೆಟೇರಿಯಟ್ ಲೆವಲ್‌ವರೆಗೆ ಎಷ್ಟರಮಟ್ಟಿಗೆ ಕೆಲಸಕಾರ್ಯಗಳು ನಡೆಯುತ್ತಿವೆ, ಎಷ್ಟರಮಟ್ಟಿಗೆ ನಮ್ಮ ಸುಖ ಸಂಪತ್ತುಗಳು ದೊರೆಯುವುದಕ್ಕೆ ಸಹಾಯಕರವಾಗಿವೆ ಎಂಬುದನ್ನು ನಾವು ಪ್ರತಿಕ್ಷಣವೂ ನಿರೀಕ್ಷಣೆ ಮಾಡುತ್ತಿದ್ದೇವೆ. ನನ್ನ ಅನುಭವದಲ್ಲಿ ಸಾಮಾನ್ಯವಾಗಿ ತಾಲ್ಲೂಕ್ ಆಫೀಸುಗಳಲ್ಲಿ ಕಾಗದ ಪತ್ರಗಳು ಯಾವತ್ತೂ ನಿಧಾನವಾಗಿವೆ. ಆ ರೀತಿ ನಿಧಾನವಾಗುತ್ತಿರುವುದರಿಂದ ಅದು ಬಹಳ ಚುರುಕಾಗಬೇಕು, ಎಂದು ಬಹುಕಾಲದಿಂದ ಕೇಳಿಬರುತ್ತಿದ್ದೆವು. ಆದರೆ ಒಂದು ಆಶ್ಚರ್ಯಕರವಾದ ಸೂಚನೆ ಏನೆಂದರೆ, ಇತ್ತೀಚೆಗೆ ಇಂಟಿ

(ಶ್ರೀ ಟಿ. ಎಚ್. ಮೂಡಲಗಿರಿಗೌಡ.)

ಗ್ರೇಷನ್ ಆದಮೇಲೆ, ಹೊಸರಾಜ್ಯ ಸ್ಥಾಪನೆಯಾದ ಮೇಲೆ, ಸಾಮಾನ್ಯವಾಗಿ ಬೇರೆ ಬೇರೆ ರಾಜ್ಯಗಳಿಂದ ಬಂದಿರತಕ್ಕ ಮತ್ತು ನಮ್ಮ ದೇಶದಲ್ಲಿ ವಿಲೀನವಾಗಿರ ತಕ್ಕ ಸ್ನೇಹಿತರಿಂದಲೂ ಈ ವಿಷಯವನ್ನು ಕೇಳಿತಿಳಿದು ಕೊಳ್ಳುತ್ತಿದ್ದೇವೆ. ನಮ್ಮ ಮನಸ್ಸಿಗೆ ಇದರಿಂದೇನು ಭಾಸವಾಗುತ್ತಿದೆ ಎಂದರೆ, ತಾಲ್ಲೂಕ್ ಆಫೀಸಿನಲ್ಲಿ ಎಷ್ಟರಮಟ್ಟಿಗೆ ಕಾಗದಪತ್ರಗಳು ನಿಧಾನವಾಗಿ ಕುಂಟಿ ಕೊಂಡು ತೀರ್ಮಾನವಾಗದೆ ಇವೆಯೋ, ಹಾಗೆಯೇ ಸೆಕ್ರೆಟೇರಿಯಟ್ ಲೆವಲ್‌ನಲ್ಲಿಯೂ ಕೂಡ ಕಾಗದ ಪತ್ರಗಳಾಗಲೀ ಅವುಗಳನ್ನು ಡಿಸ್‌ಪೋಜ್ ಮಾಡುವು ದಾಗಲೀ ಖಂಡಿತವಾಗಿ ಬಹಳ ನಿಧಾನವಾಗಿ ಆಗುತ್ತಿದೆ ಎನ್ನುವ ವರ್ತಮಾನವನ್ನು ಕೇಳುತ್ತಿದ್ದೇವೆ. ಇದು ಈಗ ತಾಲ್ಲೂಕ್ ಆಫೀಸಿನಿಂದ ಹಿಡಿದು ಸೆಕ್ರೆಟೇರಿಯಟ್ ಲೆವಲ್‌ವರೆಗೂ ಸರಿಹೋಗಬೇಕಾಗಿದೆ. ಸಾಮಾನ್ಯ ವಾಗಿ ಈಗ ನಾವು ಏನು ಹೇಳುತ್ತೇವೆ ಎಂದರೆ, ಹೊಸ ಸರ್ಕಾರ ಬಂತು, ಚುನಾವಣೆಗಳು ಆದುವು. ಮಂತ್ರಿ ಗಳು ಬಂದರು, ಹೋದರು ಎನ್ನುವುದು—ಇದುಮಾತ್ರ ನಮ್ಮ ಅನುಭವಕ್ಕೆ ಬರುತ್ತಿದೆ. ಕಾಗದ ಪತ್ರಗಳನ್ನು ಡಿಸ್‌ಪೋಸ್‌ಮಾಡುವಂಥಾದ್ದು ರೊಟೀನ್‌ವರ್ಕ್. ಅದನ್ನು ಕೂಡ ಸರಿಯಾಗಿ ಮಾಡುತ್ತಾ ಇಲ್ಲವೆಂಬುದು ನಮ್ಮ ಮನಸ್ಸಿಗೆ ಭಾಸವಾಗಿದೆ. ಹಾಗಾಗಬಾರದು. ದೇಶದಲ್ಲಿ ಜನತೆ ತಮ್ಮ ಸುಖ ಸಂಪತ್ತಿಗೋಸ್ಕರವಾಗಿ ಏನು ನಿರೀಕ್ಷಣೆ ಮಾಡಿದ್ದಾರೋ, ಅದನ್ನು ಕಾರ್ಯ ರೂಪಕ್ಕೆ ತರುವುದಕ್ಕೆ ಯಾವ ಯಾವ ಏರ್ಪಾಡನ್ನು ಮಾಡಬೇಕೋ ಆ ಏರ್ಪಾಡುಗಳನ್ನು ನಮ್ಮ ಸರ್ಕಾರ ಮಾಡಬೇಕು. ಆ ರೀತಿ ಮಾಡಿಕೊಳ್ಳದೇ ಹೋದರೆ, ಅದರಿಂದ ದುಷ್ಪರಿಣಾಮ ಉಂಟಾಗುತ್ತದೆಂದು ಹೇಳಬಹುದು.

6 P.M.

ದೇಶದಲ್ಲಿ ಜನತೆ ತನ್ನ ಸುಖ ಸಂಪತ್ತುಗಳನ್ನು ಗಳಿಸಲು ಸರ್ಕಾರದಿಂದ ನಿರೀಕ್ಷೆ ಮಾಡುತ್ತಿರುತ್ತದೆ. ಇದನ್ನು ಕಾರ್ಯರೂಪಕ್ಕೆ ತರುವುದಕ್ಕೆ ನಾವು ಏನೇನು ಸೌಕರ್ಯಗಳನ್ನು ಮಾಡಿಕೊಡಬೇಕೋ ಅವುಗಳನ್ನೇ ಮಾಡಬೇಕು. ಅವನ್ನು ನಾವು ಮಾಡಿಕೊಡದೆ ಹೋದರೆ ಅದರ ದುಷ್ಪರಿಣಾಮಗಳನ್ನು ಬಹು ಶೀಘ್ರವಾಗಿ ಅನುಭವಿಸಬೇಕಾಗುತ್ತದೆ. ಪರಿಸ್ಥಿತಿ ಹೀಗಿದೆ. ಇಂದು ಜನತೆ ಸಮಾಧಾನದಿಂದ ಹೊಂದಿಕೊಂಡು ಸರಕಾರದ ಕರ್ತವ್ಯ ನಿರ್ವಹಣೆಯನ್ನು ಸಹಿಸಿಕೊಂಡು ಕುಳಿತಿಲ್ಲ. ಇವೊತ್ತಿನ ದಿವಸ ಪ್ರತ್ಯಕ್ಷವಾಗಿ ತಪ್ಪುಗಳನ್ನು ತೋರಿಸಿ ಕೊಡತಕ್ಕ ಪರಿಸ್ಥಿತಿಯಲ್ಲಿ ಜನ ಇದ್ದಾರೆ. ಹೀಗಿರು ವಾಗ ಸರಕಾರದ ಆಡಳಿತ ಬಹು ಚುರುಕಾಗಬೇಕಾ ಗಿದ್ದರೆ, ಜನಗಳಿಗೆ ಬಹು ಶೀಘ್ರವಾಗಿ ನ್ಯಾಯ ದೊರೆಯಬೇಕಾಗಿದ್ದರೆ ಏನು ಮಾಡಬೇಕು ಎನ್ನತಕ್ಕ ದ್ದನ್ನು ಮಂತ್ರಿಗಳು ಕುಳಿತು ಆಲೋಚನೆ ಮಾಡಬೇಕು. ಆಲೋಚನೆ ಮಾಡಿ ಅದನ್ನು ಕಾರ್ಯರೂಪಕ್ಕೆ ಆದಷ್ಟು ಶೀಘ್ರವಾಗಿ ತರಲು ಪ್ರಯತ್ನ ಮಾಡಬೇಕು. ಈಗ ಆಡಳಿತದಲ್ಲಿ ವಿಶೇಷವಾಗಿ ಖರ್ಚು ಇದೆ ಎಂದು ಸಾಮಾನ್ಯವಾಗಿ ಇದುವರೆಗೆ ಮಾತನಾಡಿರತಕ್ಕ ಸದಸ್ಯರು ಹೇಳಿದ್ದಾರೆ. ನಾನು ನವೆಂಬರು ತಿಂಗಳಿನಲ್ಲಿ ಇದೇ ಸಭೆಯಲ್ಲಿ ಬಡ್ಜೆಟ್ಟಿನ ಮೇಲೆ ಮಾತನಾಡುವಾಗ ಹೇಳಿದ್ದೆ : ಈ ಡಿವಿಷನಲ್ ಕಮಿಷನರುಗಳ ನೇಮಕ ಮಾಡತಕ್ಕದ್ದು ಸರಿಯಲ್ಲ, ಇದರಿಂದ ಆಡಳಿತ ಸೆಂಟ್ರ ಲೈಸು ಆಗುತ್ತದೆ; ಆಡಳಿತದ ಕೆಲಸ ಕಾರ್ಯಗಳು ಶೀಘ್ರವಾಗಿ ನಡೆಯಲು ಆಗುವುದಿಲ್ಲ ; ಜನಕ್ಕೆ ನ್ಯಾಯ ದೊರೆಯುವುದಿಲ್ಲ ಮತ್ತು ಇದರಿಂದ ದೇಶಕ್ಕೆ ಪ್ರಯೋಜನವಾಗುವುದಿಲ್ಲ ಎಂದು. ಇದನ್ನು ಇವೊತ್ತಿನ ದಿವಸ ಸಾಮಾನ್ಯವಾಗಿ ಎಲ್ಲ ಸದಸ್ಯರೂ ಒಪ್ಪಿಬಿಟ್ಟರನ್ನು ಬಿಟ್ಟು, ಎಲ್ಲರೂ ಒಪ್ಪಿದ್ದಾರೆ. ಇದು ಅನಾವಶ್ಯಕವಾದ ಇಲಾಖೆಯಾಗಿದೆ. ಇವೊತ್ತಿನ ದಿವಸ ಈ ಡಿವಿಜನಲ್ ಕಮಿಷನರುಗಳಿಗೆ, ಪಂಚಾಯ್ತಿ ಗಳು, ಜಿಲ್ಲಾಬೋರ್ಡುಗಳು, ಮುನಿಸಿಪಾಲಿಟಿಗಳು ಇವೆಲ್ಲದರ ಆಡಳಿತವನ್ನೂ ವಹಿಸಿದ್ದಾರೆ. ಇದರಿಂದ ಅವರು ಯಾವ ಶಾಖೆಗೆ ತಾನೇ ಸರಿಯಾದ ಗಮನ ವನ್ನು ಕೊಟ್ಟಾರು ? ಅವರುಗಳು ಎಷ್ಟು ಪೇಪರು ಗಳನ್ನು ತಾವೇ ನೋಡುತ್ತಾರೆ ? ಎಷ್ಟೋ ಪೇಪರು ಗಳನ್ನು ನೋಡುವುದಕ್ಕಾಗುವುದಿಲ್ಲ. ಇದನ್ನು ಸರಕಾರದವರು ತೀವ್ರವಾಗಿ ಆಲೋಚನೆ ಮಾಡಬೇಕು. ಸಾಮಾನ್ಯವಾಗಿ ಆಡಳಿತವೂ ಕೂಡ ವಿಕೇಂದ್ರೀಕೃತ ವಾಗಬೇಕು. ಬರಿಯ ಬೆಂಗಳೂರಿನಲ್ಲೇ ಇರುವ ಮಂತ್ರಿ ಮಂಡಲದಲ್ಲೇ ಈಗ ದೇಶದ ಆಡಳಿತವೆಲ್ಲವೂ ಕೇಂದ್ರೀ ಕೃತವಾದಂತಿದೆ. ನಾವು ಈ ರಾಜ್ಯವನ್ನು ಸ್ಥಾಪನೆ ಮಾಡಬೇಕೆಂದಾಗ ವಿಕೇಂದ್ರೀಕೃತವಾದ ರಾಜ್ಯ ಎಂದರೆ ರಾಮರಾಜ್ಯವನ್ನು ಸ್ಥಾಪಿಸಬೇಕೆಂದಿದ್ದೆವು. ನಾವು ಸ್ವಾತಂತ್ರ್ಯವನ್ನು ಸಂಪಾದಿಸಿದ್ದು ಇಂತಹ ಒಂದು ರಾಜ್ಯವನ್ನು ಸ್ಥಾಪನೆ ಮಾಡುವುದಕ್ಕಾಗಿ. ಆದರೆ ಈಗ ನೋಡಿದರೆ ಪರಿಸ್ಥಿತಿ ಹಾಗಿಲ್ಲ. ಈಗ ರೈತ ಒಂದು ಅರ್ಜಿಯನ್ನು ಅಮಲ್ದಾರರಿಗೆ ಕೊಟ್ಟರೆ ಅವರಿಂದ ಪರಿಹಾರ ದೊರೆಯುವುದಿಲ್ಲ. ಅವರ ಮೇಲ್ಪಟ್ಟ ಡೆಪ್ಯುಟೀ ಕಮಿಷನರುಗಳಿಗೆ ಕೊಟ್ಟರೆ ಅವರಿಂದಲೂ ಸರಿಯಾದ ಪರಿಹಾರ ದೊರೆಯುತ್ತಿಲ್ಲ. ಹೀಗಾಗಿ ಅವರೆಲ್ಲರೂ ಮಂತ್ರಿಗಳ ಬಳಿಗೇ ಬಂದು ಅರ್ಜಿ ಕೊಟ್ಟರೇನೆ ಅನುಕೂಲವಾಗುತ್ತದೆ ಎಂಬ ಒಂದು ಪ್ರತೀತಿ ಜನಗಳಲ್ಲಿ ಬಂದುಬಿಟ್ಟಿದೆ. ಒಂದು ರಿಲೀಫ್ ಸಿಕ್ಕಬೇಕಾಗಿದ್ದರೆ ಮಂತ್ರಿಗಳ ಹತ್ತಿರ ಹೋದ ರೇನೆ ಸಿಕ್ಕುತ್ತದೆ ಇಲ್ಲದಿದ್ದರೆ ಇಲ್ಲ ಎಂಬ ಪ್ರತೀತಿ ಬೆಳೆದು ಬರುತ್ತಿದೆ. ಹೀಗಾಗಬಾರದು. ಮಂತ್ರಿಗಳಿಗೆ ದೇಶದಲ್ಲಿ ಹೊಸ ಹೊಸ ವಿಷಯಗಳನ್ನು ಆಲೋಚನೆ ಮಾಡುವುದಕ್ಕೆ ಮತ್ತು ದೇಶದ ಪ್ರಗತಿಯನ್ನು ಸಾಧಿಸು ವುದಕ್ಕೆ ಸರಿಯಾದ ಕಾಲಾವಕಾಶವೇ ಇಲ್ಲ. ಯಾವ ಶಾಖೆಯಲ್ಲಿ ನೋಡಲಿ, ಜಿಲ್ಲಾ ಬೋರ್ಡಿನಲ್ಲಿ ನೋಡಲಿ, ಮುನಿಸಿಪಾಲಿಟಿಗಳಲ್ಲಿ ನೋಡಲಿ ಅಥವಾ ಮಂತ್ರಿ ಮಂಡಲಕ್ಕೆ ಸೇರಿದ ಶಾಖೆಗಳಲ್ಲಿ ನೋಡಲಿ, ಎಲ್ಲ ಕಡೆ ಗಳಲ್ಲಿಯೂ ದಕ್ಷತೆ ಕಡಮೆಯಾಗುತ್ತಿದೆ ಎಂಬ ಶಂಕೆ ಬಂದಿದೆ. ಯಾವ ಇಲಾಖೆಯಲ್ಲಿಯಾದರೂ ಈದಿನ ಕೇಳಲಿ—ಅಮಲ್ದಾರರನ್ನು ಕೇಳಿದರೆ ನಮಗೆ Efficient ಆದ ಅಧಿಕಾರಿಗಳು ಸಿಕ್ಕುವುದೇ ಕಷ್ಟ ವಾಗಿದೆ ಎನ್ನುತ್ತಾರೆ. ಅವರಿಗೆ ಮೇಲ್ಪಟ್ಟ ಡೆಪ್ಯುಟೀ ಕಮಿಷನರನ್ನು ಕೇಳಿದರೆ, ಅವರೂ ಕೂಡ ನಮಗೆ ದಕ್ಷರಾದ ಅಧಿಕಾರಿಗಳು ದೊರಕುತ್ತಿಲ್ಲ ; ಇದರಿಂದ ತೊಂದರೆಯಾಗಿದೆ ಎಂದು ಹೇಳುತ್ತಿದ್ದಾರೆ. ಹೀಗೆ ತೊಂದರೆಯಾಗುತ್ತಿರುವಾಗ ಮತ್ತು efficiency ಇಲ್ಲದಿದ್ದರೆ ಏನು ಮಾಡಬೇಕು ಎಂಬುದನ್ನು ಸರಿ ಯಾಗಿ ಆಲೋಚನೆ ಮಾಡಬೇಕು. ಇದಕ್ಕಾಗಿ ನಾವು ಈಗಿರುವ ಸರ್ವೀಸು ರೆಗ್ಯುಲೇಷನನ್ನೇ ನಾದರೂ ಬದಲಾವಣೆ ಮಾಡಬೇಕೇ ಅಥವಾ Efficiency create ಮಾಡಬೇಕಾದರೆ ಯಾವ ವಿಧವಾದ ಮಾರ್ಗವನ್ನು ಕಂಡುಹಿಡಿಯಬೇಕು ಎಂಬು ದನ್ನೆಲ್ಲ ಸರಕಾರದವರು ಗಣನೆಗೆ ತೆಗೆದುಕೊಂಡು ಸರಿಯಾಗಿ ಆಲೋಚನೆ ಮಾಡಬೇಕು. ಹೀಗೆ Efficiency ಇಲ್ಲ ಎಂದು ಹೇಳಿಕೊಂಡು ನಾವು ಇದನ್ನು ಸರಿಪಡಿಸದೇ ಹೋದರೆ ದೇಶದಲ್ಲಿರುವ ಜನತೆಯ ಪ್ರೀತಿವಿಶ್ವಾಸಗಳು ದೊರೆಯುವುದಿಲ್ಲ.

ಆದುದರಿಂದ ಸಾಮಾನ್ಯವಾಗಿ ತಾಲ್ಲೂಕು ಲೆವೆಲ್ಲಿನಲ್ಲಿಯೇ ಎಂದರೆ ಆಯಾ ತಾಲ್ಲೂಕಿನ ಅಮಲ್ದಾರರುಗಳಿಂದಲೇ ಸಾಮಾನ್ಯ ಜನರಿಗೆ ಪರಿಹಾರ ದೊರಕುವಂತೆ ಮಾಡಬೇಕು. ಈ ರೀತಿಯಾದ ಸಹಾಯ ಸಂಪತ್ತುಗಳನ್ನು ಮಾಡಬೇಕಾದರೆ ಅಧಿಕಾರಿಗಳು ಹಳ್ಳಿಯಲ್ಲಿರುವ ಜನಗಳ ಸಂಪರ್ಕವನ್ನು ಇಟ್ಟುಕೊಂಡಿರಬೇಕು. ಹೀಗೆ ಇಟ್ಟುಕೊಳ್ಳದೆ ಹೋದರೆ ಸಾಮಾನ್ಯ ಹಳ್ಳಿಯ ಜನಗಳಿಗೆ ಸುಖಸಂಪತ್ತು ದೊರೆಯುವಂತಿಲ್ಲ. ಇದು ಬಹಳ ಶೋಚನೀಯವಾದ ಪರಿಸ್ಥಿತಿ. ಈಗ ಐದು ವರ್ಷಗಳ ಹಿಂದೆ ಶ್ರೀಮಾನ್ ಮರಿಯಪ್ಪನವರು ಮಂತ್ರಿಗಳಾಗಿದ್ದಾಗ, ಯಾವುದಾದರೂ ಡಿಸ್ಟ್ರಿಕ್ಟಿಗೋ, ತಾಲ್ಲೂಕಿಗೋ ಟೂರು ಬಂದರೆ ಆಯಾ ಪ್ರದೇಶಗಳಲ್ಲಿದ್ದ ಅಧಿಕಾರಿಗಳನ್ನೂ ಮುಖಂಡರುಗಳನ್ನೂ ಕರೆಸಿಕೊಂಡು ಅಲ್ಲಿಯ ಜನಗಳಿಗಿರತಕ್ಕ ತೊಂದರೆಗಳನ್ನು ಮತ್ತು ಅಲ್ಲಿ ಉಂಟಾಗಿರತಕ್ಕ ಸಮಸ್ಯೆಗಳನ್ನು ಚರ್ಚೆ ಮಾಡಿ ಬಹುಭಾಗ ಅಲ್ಲಿಯೇ ಆ ವಿಷಯಗಳನ್ನು ಬಗೆಹರಿಸುತ್ತಿದ್ದರು. ಆದರೆ ಇವೊತ್ತಿನ ದಿವಸ ಏನಾಗಿದೆ ಎಂದರೆ ಈಗಿನ ಮಂತ್ರಿಮಂಡಲದಲ್ಲಿರುವ ಮಂತ್ರಿಗಳು ಸರಿಯಾದ ಒಂದು ಪ್ರೋಗ್ರಾಂ ಹಾಕಿಕೊಂಡು ಪ್ರವಾಸವನ್ನೇನೋ ಮಾಡುತ್ತಾರೆ. ಆದರೆ ಅದರಿಂದೇನೂ ಉಪಯೋಗವಾಗುತ್ತಿಲ್ಲ. ಹೀಗೆ ಆಡಳಿತ ನಡೆಯುತ್ತಿದ್ದರೆ ದೇಶದ ಜನಗಳಲ್ಲಿ ಒಂದು ರೀತಿಯ ಅಸಮಾಧಾನವುಂಟಾಗುತ್ತದೆ. ಇದನ್ನು ಸರಿಪಡಿಸಲು ಸರಿಯಾಗಿ ಆಲೋಚನೆ ಮಾಡಬೇಕು. ಮತ್ತು ಸೆಕ್ರೆಟೇರಿಯಟ್ಟು ಲೆವೆಲ್ಲಿನಲ್ಲಿಯೇ ಸರಿಯಾದ ನ್ಯಾಯ ದೊರೆಯುತ್ತಿಲ್ಲವೆಂಬ ಒಂದು ಪ್ರತೀತಯಾಗಿದೆ. ಕಾಲಾವಕಾಶವಿಲ್ಲದ್ದರಿಂದ ಈ ವಿಷಯದಲ್ಲಿ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇವೆಲ್ಲವನ್ನೂ ಮಂತ್ರಿಮಂಡಲದವರು ಸರಿಪಡಿಸಿ ಆಡಳಿತದ ದಕ್ಷತೆಯನ್ನು ಹೆಚ್ಚಿಸಬೇಕು ಮತ್ತು ಈಗ ಉಂಟಾಗುತ್ತಿರುವ ಸಾಮಾನ್ಯ ಜನತೆಯ ತೊಂದರೆಗಳನ್ನು ಕಡಮೆ ಮಾಡುವುದಕ್ಕೆ ತೀವ್ರವಾಗಿ ಆಲೋಚನೆ ಮಾಡಬೇಕು.

ಇಷ್ಟು ಹೇಳಿ ಈಗ ಸಭೆಯ ಮುಂದಿರುವ ಈ ಬೇಡಿಕೆಗಳನ್ನು ನಾನು ಅನುಮೋದಿಸುತ್ತೇನೆ.

**Sri C. M. ARUMUGHAM** (Kolar Gold Fields-Scheduled Castes).— Mr. Speaker, Sir, I rise to oppose the Demands under General Administration. Before I speak on the subject in which I am interested I want to make a few remarks on the economy in the general administration. Well, Sir, . . . .

**Sri L. S. VENKAJI RAO** (Basavangudi).—We cannot hear.

**Mr. SPEAKER.**—Please speak loudly.

**Sri C. M. ARUMUGHAM.**—Well, Sir, everybody speaks, including the Congress Members, that there must be economy. There is a proverb to the effect that if a son were to be true and honest the mother should be truthful. Therefore if we have to expect economy in the State, Ministers must show some economy. Therefore I want to make a few suggestions which are not of my own but derived from the great man of India namely, Pandit Nehru. Much money is spent on the cars for the Ministers. Ministers are able and can afford to purchase cars. If they are not, I suggest, as the Prime Minister said in the Parliament, that they may be given loans to the extent of Rs. 20,000 each which could be recovered within five years because I know they will be in office for five years as they are in a majority. So, if loans were given and the Ministers purchase cars, the State can provide them with petrol and other require ments for maintaining the cars. Secondly, the Ministers say that they are getting a very low salary, namely, Rs. 900 which is less than Rs. 1,000. But if one looks into the accounts, one will see that we are spending more than Rs. 5 lakhs and odd. So, what I want to suggest is that no Minister should get more than Rs. 1,500 including pay, D.A. and T.A. and no allowance should be given to them. Thereby we can save about Rs. 2 lakhs. Therefore, the Treasury Benches should consider this suggestion and effect economy and they should also see that none in the General Administration gets more than what a Minister gets, namely, Rs. 1,500.

Another thing that I want to point out is that this Cabinet is not properly represented. My grievance is that the minority is not adequately represented in the Cabinet or in the Council of Ministers. By 'minority' I do not mean the Muslims or the Indian Christians or the Sikhs. Technically speaking, they are not minorities in the sense in which depressed classes are. Our late Mahathma said that with the exception of the depressed classes there was no minority which was not able to take care of itself. Mahathmaji admitted in an editorial written in the *Harijan* on 21st October 1939 that the Scheduled Castes were the only minority in India who would not be able to take care of themselves in a free India governed by a Hindu majority communty. Therefore, if I say that the Scheduled Castes are not adequately represented in the Hindu majority

(SRI C. M. ARUMUGHAM.)

Government, I will not be wrong. I may submit to the House that ther are 4 Ministers from the Lingayats whose population is 42 lakhs, 4 Ministers from the Vokkaligas whose population is 25 lakhs, one Minister from the Muslims whose population is 15 lakhs, two Ministers from Brahmins whose population is very insignificant and which is about 6 lakhs and one Minister from the Christians whose population is about 3 lakhs. What about the population of Scheduled Castes in the Mysore State? Before mentioning the population of Scheduled Castes. I may point out that their census has not been taken properly. In spite of that, the population of Scheduled Castes in this State ranges from 40 to 50 lakhs. What is the representation for them in the Cabinet? Only one Minister. And what is the portfolio given to that one Minister? The third-rate portfolio of Local Self-Government has been given to him. The Local Self-Government portfolio has become an untouchability portfolio. It is reserved only for Scheduled Castes and none else takes it. I am very sorry to say that throughout India, whether it is Andhra or Madras or Madhya Pradesh or Bombay or any other State, irrespective of the fact whether a Scheduled Caste man is capable or not or whether he is a double graduate or a treble graduate invariably the portfolio of Local Self-Government is given to him.

SRI H. S. RUDRAPPA.—It directly deals with the conditions of Harijans.

SRI C. M. ARUMUGHAM.—You make him the Chief Minister and he will deal with everything. To quote an instance, in Andhra in Gopal Reddy's Cabinet it so happened that there was one law graduate, namely, Sri Sanjiviah. Instead of giving the portfolio of Home Ministry to a man who happened to be a member of Scheduled Caste and a law graduate it was given to a non-matriculate. I am very sorry to say that this gentleman who happened to be a Scheduled Caste person and a double graduate, was given the portfolio of Local Self-Government.

SRI A. V. NARASIMHA REDDY (Bangalore-South).—On apoint of order, Sir. He has been referring to the portfolios assigned to the Scheduled Caste representatives in the Cabinets of various States. I do not know how it is relevant here.

MR. SPEAKER.— I am just watching the Hon'ble Member very carefully. He is trying to compare and he is trying to get inspiration from other States.

SRI B. K. PUTTARAMIYA.—Even the Ministers when they are quoting figures are trying to get inspiration from other States.

MR. SPEAKER.—I must tell the Hon'ble Member Sri Puttaramiya that I can take care of myself. Let him not take care of me.

SRI L. S. VENKAJI RAO.—May I, Sir, through you request my Hon'ble friend to try to get the latest census figures?

SRI C. M. ARUMUGHAM.—Sir, I am quoting from the 1951 census figures. If the Hon'ble Member submits to the House that the figures I have quoted are wrong, well I will admit it. Even in Kerala where there is a change of Government, the portfolio of Local Self-Government has been given to a Scheduled Caste person. This Local Self-Government portfolio has become an untouchability portfolio and therefore we refuse to touch it. Let the Chief Minister or some other Minister take it. I have got great regard and respect for my Hon'ble friend Sri Chennigaramiah. He has been in the political field for the last 25 years and he has got enough experience to be the Chief Minister. Let him be the Chief Minister. In this State there are three communities which are known as the governing class. May I say with due respect that the first is the Lingayats, the second is the Vokkaligas and the third is the Brahmins. The Brahmins were in power in ancient times; they were in power even in Ram Raj.

MR. SPEAKER.—The Hon'ble Member must remember that that is one of the most intelligent classes in the world.

SRI C. M. ARUMUGHAM.—We are in no way incompetent.

MR. SPEAKER.—I do not say tha .

Sri C. M. ARUMUGHAM.—Anyway, the governing classes were in power during the ancient times, during the Muslim rule and during the rule of the Britishers and they are in power after independence also. What should they do? In this connection, I should like to quote an instance from Japan. If any of my friends knows the history of Japan, he will understand what I am going to say. In 1855 there took place in Japan an evolution from feudal society to modern society. What happened in Japan before 1870? There were four communities in Japan. The first community was Damiyos. Now, there is no caste system there and everybody is treated alike. The Damiyos were only 300 in population. The population of Samurai was two millions, that of Hemin 25 to 30 millions while that of Etta was in thousands. The first two communities were ruling Japan for years together. After a long period, they realised that it was unfair on their part to rule the country any more. So, they passed a resolution saying that " We, the minorities, have been ruling the country for such a long period that it is time we select the Ministers from the majority communities, namely, Samurai and Etta! " Accordingly, they surrendered their power, privilege, ministerships and everything to these communities who were deprived of them for years together. So, I suggest that here also the governing classes should surrender their power and ministerships in favour of the Scheduled Castes and Backward Classes.

Mr. SPEAKER.—Please wait for some years, they will do that— I am sure (*Laughter*).

Sri C. M. ARUMUGHAM.—Unless we ask for it, they will not do it. Even otherwise, I want to quote a substantial instance. There was no Scheduled Caste Minister throughout the history of India before Independence. We were not allowed to be Ministers, but after that period, we became Ministers. What I request is that the members of Scheduled Castes, by virtue of their population, should be given a sufficient number of ministerships. Here, there must be at least four Ministers drawn from the Scheduled Castes. More particularly, a Scheduled Caste person must be made the Chief Minister of this State (*Laughter*). Sri Chennigaramiah is there to take up that portfolio immediately and run the Government. (*Renewed laughter*).

*ಶ್ರೀ ಇ. ನಾರಾಯಣಗೌಡ (ಬಂಗಾರಪೇಟೆ).—ಮಾನ್ಯ ಅಧ್ಯಕ್ಷರೇ, ಈ ದಿವಸ ಸರ್ಕಾರದವರು ಸಾಮಾನ್ಯಾಡಳಿತದ ವಿಚಾರದಲ್ಲಿ ಈ ಮಾನ್ಯ ಸಭೆಯ ಅನುಮೋದನೆಗೋಸ್ಕರವಾಗಿ ಮಂಡಿಸಿರತಕ್ಕ 2 ಕೋಟಿ 20 ಲಕ್ಷ 52 ಸಾವಿರ ಚಿಲ್ಲರೆ ರೂಪಾಯಿಗಳ ಡಿಮ್ಯಾಂಡ್ ಮನವಿಯನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯ ಅವಗಾಹನೆಗೆ ತರಲು ಇಷ್ಟಪಡುತ್ತೇನೆ.

ಸ್ವಾಮಿ, ನಮ್ಮ ಸರ್ಕಾರದಲ್ಲಿರುವ ಮಂತ್ರಿಗಳು ಅನಾವಶ್ಯಕವಾದ ಪ್ರವಾಸಗಳನ್ನು ಕೈಗೊಂಡು ಬಡ ರೈತರ ಹಣವನ್ನು ಹುಚ್ಚುಹೊಳೆಯ ಪ್ರವಾಹ ದಂತೆ ಖರ್ಚುಮಾಡುತ್ತಿದ್ದಾರೆಂಬುದನ್ನು ನಾನೀಗ ಈ ಸಭೆಗೆ ತಿಳಿಸಲಿಚ್ಛಿಸುತ್ತೇನೆ. ಇಲ್ಲಿಗೆ ಸುಮಾರು ಎರಡು ತಿಂಗಳ ಹಿಂದೆ ಮಂತ್ರಿಗಳಾದ ಶ್ರೀ ಎಚ್. ಎಸ್. ರುದ್ರಪ್ಪ ಅವರು ನಮ್ಮ ಬಂಗಾರು ಪೇಟೆಗೆ ಯಾವುದೋ ಒಂದು ಸಮಾರಂಭದ ಹೆಸರನ್ನು ಹೇಳಿಕೊಂಡು ಅಲ್ಲಿಗೆ ಬಂದಿದ್ದ ಉದ್ದೇಶ ವೇನೆಂಬುದನ್ನೇ ಇನ್ನೂ ತಿಳಿಸಿರುವುದಿಲ್ಲ. ಆ ದಿವಸ ದಲ್ಲಿ ಒಂದು ಜಾತ್ಯತೀತ ಸಮಾರಂಭದ ಕೆಲಸವಿತ್ತು. ಆ ಒಂದು ಕೆಲಸಕ್ಕಾಗಿ ಇಷ್ಟುದೂರ–ಬೆಂಗಳೂರಿ ನಿಂದ ಈ ಮಂತ್ರಿಗಳು ಅಲ್ಲಿಗೆ ಬರಬೇಕಾದಂಥ ಪ್ರಮೇಯವೇನಿತ್ತು? ಅಂತೂ ಹೀಗೆಲ್ಲ ಆ ಬಡ ರೈತನ ಹಣವನ್ನು ಅನಾವಶ್ಯಕವಾಗಿ ಈ ಮಂತ್ರಿಗಳು ಹಾಳುಮಾಡುತ್ತಿದ್ದಾರಲ್ಲ ಎಂಬ ಸಂಗ ಯನ್ನು ನಾನು ಬಹಳ ವಿಷಾದದಿಂದ ತಿಳಿಸಬೇಕಾಗಿದೆ. ಈ ಮಂತ್ರಿಗಳ ಪ್ರವಾಸವಾದರೋ ಎಲ್ಲಿ? ಎಲ್ಲೆಲ್ಲಿ ಅನುಕೂಲವಾದ ಟಾರ್ ರಸ್ತೆಗಳಿವೆಯೋ ಮತ್ತು ಎಲ್ಲೆಲ್ಲಿ ಅನುಕೂಲವಾದ ಟಿ.ಬಿ. ಗಳಿವೆಯೋ, ಎಲ್ಲೆಲ್ಲ ಅನುಕೂಲವಾದ ಫಾರೆಸ್ಟ್‌ನಲ್ಲಿ ಬಂಗಲೆಗಳಿರುತ್ತವೋ ಅಂಥ ಕಡೆಗಳಲ್ಲಿಯೇ ನಮ್ಮ ಮಂತ್ರಿಗಳು ಪ್ರವಾಸಮಾಡುತ್ತಿರುವುದು. ಗ್ರಾಮಾಂತರ ಪ್ರದೇಶಗಳನ್ನು ಈ ಮಂತ್ರಿಗಳು ಸಂಪೂರ್ಣವಾಗಿ ಮರೆತುಬಿಟ್ಟಿದ್ದಾರೆ. ಈ ಹೊತ್ತೂ ಸಹ ನಮ್ಮ ತಾಲ್ಲೂಕಿನಲ್ಲ ಸುಮಾರು 20-30 ಗ್ರಾಮ ಗಳಿವೆ. ಆ ಗ್ರಾಮಗಳನ್ನು ಯಾವ ಸರ್ಕಾರೀ ಅಧಿ ಕಾರಿಗಳೂ ಸಹ ಇಲ್ಲಿಗೆ ನೂರಾರು ವರ್ಷಗಳಿಂದಲೂ ನೋಡದಂತೆ ಹಾಗೆಯೇ ಉಳಿದುಕೊಂಡಿರುತ್ತವೆ. ಅಮಲ್ದಾರರೇ ನೋಡದಿರುವಾಗ ಇನ್ನು ಬಾಕಿ ಅಧಿ ಕಾರಿಗಳ ವಿಚಾರವೇಕೆ? ಏನೋ ಐದು ಹತ್ತು ವರ್ಷಗಳಿಗೊಮ್ಮೆ ಈ ಚುನಾವಣೆಗಳ ಕಾಲದಲ್ಲಿ ಕೆಲವರು ಹೋಗಿ ಆ ಗ್ರಾಮಗಳನ್ನು ನೋಡಿಕ್ಕೊಂಡು ಬಂದಿದ್ದರೂ ಇರಬಹುದು. ಆದರೆ ಮಂತ್ರಿಗಳು ಹೀಗೆಲ್ಲಾ ಪ್ರವಾಸಮಾಡಬಾರದು. ಅವರು ಕಾಲು ನಡಿಗೆಯಲ್ಲಿ ನಡೆದು ಪ್ರತಿಯೊಬ್ಬರೂ ಹತ್ತಾರು ಗ್ರಾಮಗಳನ್ನಾದರೂ ನೋಡಿಕೊಂಡು ಬಂದರೆ ಆಗ ಇವರಿಗೆ ಆ ಹಳ್ಳಿ ಜನರ ನಿಜವಾದ ಚಿತ್ರ ಗೊತ್ತಾ ದೀತು.

ರೆವಿನ್ಯೂ ಇಲಾಖೆಯಲ್ಲಿ ಕಾಗದಪತ್ರಗಳ ವಿಲೇ ವಾರಿ ಬಹಳ ನಿಧಾನವಾಗುತ್ತಿದೆ. ತಾಲ್ಲೂಕು ಕಛೇರಿಗೆ ಒಬ್ಬ ರೈತ ಎರಡೆಕರೆ ಜಮೀನಿಗೆ ಅರ್ಜಿ

(ಶ್ರೀ ಇ. ನಾರಾಯಣಗೌಡ.)

ಹಾಕಿ ಐದು ಹತ್ತು ವರ್ಷಗಳಾದರೂ ಆ ಅರ್ಜಿ ಇನ್ನೂ ವಿಲೇವಾರಿಯಾಗಿರುವುದಿಲ್ಲ. ಇಂಥ ನಿದರ್ಶನಗಳು ನೂರಾರಿರುತ್ತವೆ. ಈ ಹಿಂದೆ ಹೆಚ್ಚು ಆಹಾರ ಬೆಳೆಯಬೇಕೆಂಬ ಯೋಜನೆಯ ಸಂಬಂಧದಲ್ಲಿ ಕೆಲವು ರೈತರಿಗೆ ಐದು ಹತ್ತು ಎಕರೆಗಳ ಪ್ರಕಾರ ಜಮೀನನ್ನು ಅವರಿಗೆ ವಿಲೇವಾರಿಮಾಡಿಕೊಟ್ಟಿದ್ದರು. ಹಾಗೆ ಆ ದಿವಸ ಕೊಟ್ಟಿದ್ದಂಥ ಜಮೀನನ್ನು ಈಗ ವಜಾ ಮಾಡಿರುವುದಾಗಿ ಆ ಪಾರ್ಟಿಗಳಿಗೆ ಸರ್ಕಾರದಿಂದ ನೋಟೀಸ್‌ಗಳು ಬಂದಿರುತ್ತವೆಂದು ತಿಳಿದುಬಂತು. ಇಂಥ ನಿದರ್ಶನಗಳು ನಮ್ಮ ತಾಲ್ಲೂಕಿನಲ್ಲೇ ಇರುತ್ತವೆಂದು ನನ್ನ ಗಮನಕ್ಕೆ ಬಂದಿದೆ. ಆದರೆ ನಾವು ರೆವಿನ್ಯೂ ಇಲಾಖೆಯಲ್ಲಿ ಹೀಗೆ ಕೆಲಸಕಾರ್ಯಗಳು ನಿಧಾನವಾಗುತ್ತಿರುವುದಕ್ಕೆ ಆ ಇಲಾಖೆಯವರನ್ನೇ ಪೂರ್ತಿಯಾಗಿ ಆರೋಪಣೆಮಾಡುವುದು ಸರಿಯಲ್ಲ. ಇದರಲ್ಲಿ ಮಂತ್ರಿಗಳ ಜವಾಬ್ದಾರಿ ಮತ್ತು ಹೊಣೆಗಾರಿಕೆ ಕೂಡ ಇರುತ್ತದೆ. ಹೇಗೆಂದರೆ—ತಾಲ್ಲೂಕು ಆಫೀಸಿನ ಆಡಳಿತವೆಲ್ಲಾ ತಾಲ್ಲೂಕ್ ಕಾಂಗ್ರೆಸ್ ಸಂಸ್ಥೆಯ ಆಡಳಿತಕ್ಕೊಳಪಟ್ಟಿದೆ. ಜಿಲ್ಲಾಧಿಕಾರಿಗಳ ಆಫೀಸಿನ ಆಡಳಿತವೆಲ್ಲ ಜಿಲ್ಲಾ ಕಾಂಗ್ರೆಸ್ ಸಂಸ್ಥೆಯ ಆಡಳಿತಕ್ಕೊಳಪಟ್ಟಿದೆ. ಈ ಕಾಂಗ್ರೆಸ್ ಸಂಸ್ಥೆಯವರು ಯಾರಿಗೆ ಜಮೀನ್‌ಕೊಡಿ ಎಂದು ಹೇಳಿದರೆ ಅವರಿಗೆ ಅಮಲ್ದಾರರು ಜಮೀನು ಕೊಡಬೇಕು ; ಬೇರೆಯವರಿಗೆ ಜಮೀನನ್ನು ಕೊಡಲು ಅಮಲ್ದಾರರಿಗೆ ಅಧಿಕಾರವಿದ್ದರೂ ಅವಕಾಶವಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ನಿಮ್ಮ ಕೋಲಾರ ಜಿಲ್ಲೆಯಲ್ಲೂ ಹಾಗೆ ಇದೆಯೇ ?

ಶ್ರೀ ಇ. ನಾರಾಯಣಗೌಡ.—ಈ ಅಧಿಕಾರಿಗಳಿಗೆ ನ್ಯಾಯವಾದರೀತಿಯಲ್ಲಿ ವರ್ತಿಸಲು ಅವರಿಗೆ ಅವಕಾಶವಿರಬೇಕು. ಆದರೆ ಯಾರಾದರೂ ಅಧಿಕಾರಿಗಳು—ನೌಕರರು ಈ ಕಾಂಗ್ರೆಸ್ಸಿಗರ ಮಾತಿನಂತೆ ವರ್ತಿಸದೆ ಹೋದರೆ ಅವರನ್ನು ಒಂದುಕಡೆಯಿಂದ ಮತ್ತೊಂದು ಕಡೆಗೆ ವರ್ಗಾಯಿಸಲಾಗುತ್ತದೆ. ಕೇವಲ ಬಡ ನೌಕರರುಗಳನ್ನೂ ಸಹ ಜಿಲ್ಲೆಯಿಂದ ಜಿಲ್ಲೆಗೆ ವರ್ಗಾಯಿಸಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಈರೀತಿ ಹತ್ತು ಜನ ಬಡನೌಕರರನ್ನು ಜಿಲ್ಲೆಯಿಂದಾಚೆಗೆ ವರ್ಗಾಯಿಸುವುದೆಂದರೆ ಏನು ಅನ್ಯಾಯ ? ಚುನಾವಣೆ ಕಾಲದಲ್ಲಿ ಕಾಂಗ್ರೆಸ್ಸಿನವರಿಗೆ ಸಹಾಯಮಾಡಲಿಲ್ಲವೆಂಬ ನೆಪದಮೇಲೆ ಕೆಲವು ಪ್ರಾಥಮಿಕ ಶಾಲೆಯ ಉಪಾಧ್ಯಾಯರುಗಳನ್ನು ಚಿಕ್ಕಮಗಳೂರು ಜಿಲ್ಲೆಗೆ ವರ್ಗಾಯಿಸಿರುತ್ತಾರೆ. ಹೀಗೆಯೇ ಕೆಲವು ಪೋಲೀಸ್ ಕಾನ್‌ಸ್ಟೇಬಲ್‌ಗಳನ್ನೂ ವರ್ಗಮಾಡಿಸಿದ್ದಾರೆ. ರೆವಿನ್ಯೂ ಇಲಾಖೆಯ ಆಡಳಿತಕ್ಕಾಗಿ ಇಷ್ಟೊಂದು ಹಣವನ್ನು ಖರ್ಚುಮಾಡುತ್ತಿದ್ದಾರೆ. ಸಂತೋಷ; ಮಾಡಲಿ. ಆದರೆ ಇಷ್ಟೊಂದು ಹಣವನ್ನು ಖರ್ಚು ಮಾಡುತ್ತಿದ್ದಾಗ್ಯೂ ಇದರಲ್ಲಿ ಗ್ರಾಮಾಧಿಕಾರಿಗಳಿಗೆ ಇರತಕ್ಕ ಪ್ರಾಶಸ್ತ್ಯವಾದರೂ ಏನು ? ಗ್ರಾಮಾಧಿಕಾರಿಗಳೆಂದರೆ ಕೇವಲ ಪಟೇಲ್—ಶ್ಯಾನುಭೋಗರುಗಳನ್ನೇ ನಾನು ಹೇಳುತ್ತಿಲ್ಲ; ತೋಟಿ-ತಳಾರಿ-ನೀರುಗಂಟಿಗಳ ವಿಚಾರ ಸಹ ಇದರಲ್ಲಿ ಸೇರಿರುತ್ತದೆ. ರೆವಿನ್ಯೂ ಇಲಾಖೆಯ ಪ್ರತಿಯೊಂದು ಲೆಕ್ಕಪತ್ರಗಳ ಮತ್ತು ಆಡಳಿತದ ಮೂಲಬುನಾದಿಯೆಲ್ಲ ಈ ಗ್ರಾಮಾಧಿಕಾರಿಗಳ-ಗ್ರಾಮ ನೌಕರರಮೇಲೆ ನಿಂತಿದೆ. ಇಂಥ ಪ್ರಾಮುಖ್ಯತೆಯುಳ್ಳ ಜನರಿಗೆ ಸರ್ಕಾರದವರು ಕೊಡತಕ್ಕ ಸಂಭಾವನೆಯೇನೂ ಸಾಲದು. ಅವರಿಗೆ ಸರಿಯಾದ ರೀತಿಯಲ್ಲಿ ಸಂಭಾವನೆ ದೊರೆಯುವಂತೆ ಮಾಡಬೇಕಾದದ್ದು ಅತ್ಯಗತ್ಯ.

ಈಗ ನಮ್ಮ ರಾಜ್ಯದಲ್ಲಿ ಕೇಳಿಬರುತ್ತಿರುವ ಒಂದು ಸೋಜಿಗದ ಸಂಗತಿ ಏನೆಂದರೆ—ನಮ್ಮ ಹಳೆಯ ಮೈಸೂರಿನ ಸರ್ಕಾರದಲ್ಲಿ ಕೆಲಸಮಾಡತಕ್ಕ ದಕ್ಷರಾದಂಥ ಅಧಿಕಾರಿಗಳಿಗೆ ಈ ದಿವಸ ಸ್ವಲ್ಪ ಅಸಮಾಧಾನ ಉಂಟಾಗಿದೆ. ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟಿನಲ್ಲಿ ನಮ್ಮ ಹಳೆಯ ಮೈಸೂರಿನ ಅಧಿಕಾರಿಗಳಿಗೆ ಬಹಳ ಅನ್ಯಾಯವಾಗುತ್ತಿದೆಯೆಂಬ ಕೂಗು ಎಲ್ಲೆಲ್ಲೂ ಕೇಳಿಬರುತ್ತಿದೆ. ಇದರಿಂದ ಅವರಿಗೆ ನ್ಯಾಯವಾಗಿ ದೊರೆಯಬೇಕಾಗಿದ್ದಂಥ ಭಡ್ತಿಗಳು ಈಗ ಹೊರಗಡೆಯಿಂದ ಬಂದವರಿಗೆ ದೊರೆಯುವಂಥ ಸಂದರ್ಭ ಉಂಟಾಗಿದೆಯೆಂಬ ಅಂಶವನ್ನು ನಾನೀದಿವಸ ಈ ಸೆಕ್ರೆಟೇರಿಯೆಟ್ ಆಫೀಸುಗಳಲ್ಲೇ ತಿಳಿದೆನು. ಇದರಿಂದ ತುಂಬ ಅನ್ಯಾಯವಾಗುತ್ತದೆ. ಇದರಿಂದ ಸರ್ಕಾರಿ ಕಾರ್ಯಕಲಾಪಗಳೂ ಸಹ ಬಹಳ ಸಲೀಸಾಗಿ ನಡೆಯಲಾರವು. ಸರ್ಕಾರಿ ಕೆಲಸಕಾರ್ಯಗಳು ಕುಂಠಿತವಾಗದೆ ಇರುವಂತೆ ನೋಡಿಕೊಳ್ಳಬೇಕೆಂದು ನಾನೀಗಲೇ ಸರ್ಕಾರದವರಿಗೆ ಎಚ್ಚರಿಕೆ ಕೊಡುತ್ತೇನೆ. ಇನ್ನು ರೆವಿನ್ಯೂ ಇಲಾಖೆಯಲ್ಲಿ ಅನವಶ್ಯಕವಾದಂಥ ಖರ್ಚುಗಳನ್ನು ಹೆಚ್ಚಿಸಲು ಕೆಲವು ಆಫೀಸುಗಳಿರುತ್ತವೆ. ಅಂಥಾ ಆಫೀಸುಗಳಪೈಕಿ ಸಬ್ ಡಿವಿಜನ್ ಆಫೀಸ್ ಒಂದಾಗಿದೆ. ಇದೊಂದು ತಾಲ್ಲೂಕು ಆಫೀಸಿಗೂ ಡಿಸ್ಟ್ರಿಕ್ಟ್ ಆಫೀಸಿಗೂ ಮಧ್ಯೇ ಒಂದು ಪೋಸ್ಟ್ ಆಫೀಸಿದ್ದ ಹಾಗೆ. ಇದರಿಂದ ಕಾಗದಪತ್ರಗಳ ವಿಲೇವಾರಿಗೆ ತಿಂಗಳಾನುಗಟ್ಟಲೆ ಸಾವಕಾಶವಾಗುತ್ತಿದೆ. ಹೀಗೆಲ್ಲದುಂದು ವೆಚ್ಚಮಾಡಲು ರೈತರಲ್ಲಿ ಹಣವಿಲ್ಲ. ಈರೀತಿ ಮಾಡುತ್ತಿರುವುದು ಸರಿಯಲ್ಲವೆಂದು ಹೇಳಿ ಈ ಡಿಮ್ಯಾಂಡನ್ನು ವಿರೋಧಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ. ನಾನಿನ್ನೂ ಹೇಳಬೇಕಾದ ವಿಚಾರಗಳು ಅನೇಕ ಇದ್ದುವು. ಆದರೆ ಕಾಲಾವಕಾಶವಿಲ್ಲದ್ದರಿಂದ ಇಷ್ಟಕ್ಕೇಯೇ ನಿಲ್ಲಿಸುತ್ತೇನೆ.

6-30 P.M.

*Sri S. D. KOTHAVALE (Chikodi).—Mr. Speaker, Sir, I rise to support the Demands under consideration. While doing so, I propose to make certain observations regarding the working of the Secretariat at Bangalore. Our Ministers, I know, are working very hard day in and day out and their effort should ordinarily succeed in getting better administration for the State. But, we find that the instrument which they are using, so far as the Secretariat is concerned, is not satisfactory. The atmosphere in the Secretariat is very vitiated. The rank and file of the present Secretariat, most of it, comes from the old Mysore State. Whatever might have been the efficiency of the staff of the old Mysore State in dealing with the nature of work and the volume of work in the old Mysore State's set-up, that is not equal to the task of dealing with the nature and volume of work coming from the integrated areas of

the new Mysore State. The reason is very clear, Sir. The rules and the procedure of the new State are different and it is rather difficult for the rank and file who are accustomed to one set of rules to deal with the different set of laws and rules and procedure of a different area. Working of all these cannot be learnt in a day. This is one of the many other reasons why we are finding many delays and many inefficiencies in the discharge of work either in the Secretariat level or in the staff controlled by the Secretaries in the Secretariat. If I were to say one or two words how it is working, Sir, I can cite a few instances. If a certain application or representation is made, hardly any reply is received even after a lapse of a fortnight or even a month. And, even if the persons who hav made the representation come and enquire, sometimes the case is not at all found. I doubt whether registers are maintained regularly. It appears, the clerks concerned hardly enter them in the registers and there is considerable delay in bringing these applications to the notice of the higher officers. It is said that sometimes they are torn away so that the responsibility of explaining the reasons for the delay in the disposal of the applications is avoided I have only heard about this and I hope it does not happen. Sir, one person in the Police Department has applied for one month's leave and even after a lapse of two months, he has not got a reply. That is how the state of affairs is prevailing. Even here, if a servant applies for leave, sometimes he does not get a reply even by the Secretariat for several days and special consideration is required to get the leave approved. These things are not satisfactory. I do not want to say anything further. I have no animosity against any particular Secretary or any member of the staff. But, the general condition requires much improvement in this connection and I hope the Government, and particularly the Chief Secretary, takes note of this. If I would suggest a remedy for the disposal of the very heavy work that has accumulated here, it is desirable to bring persons from the various areas, persons from the rank and file from the various areas to the Secretariat and transfer persons from the Secretariat to different Districts. That is a proper remedy. Supposing, persons are taken from offices of Belguam Division or Bombay areas; they would be easily in a position to dispose of accumulated work here because they have been doing that type of work and they know the laws and procedures prevailing in those areas. This remark applies to all the areas which are integrated to make the new Mysore State here. This is a point useful in some other way also, namely, we want to have integration of service as we have integration of territory, integration of laws. So it is necessary, Sir, these officers from here go to Districts and District officers come here. They should have knowledge of work of both the District and the Secretariat so that they would be able to do better work. In that way it would be useful. I request the Government to seriously consider this matter.

As regards the working of the Public Service Commission, I have the highest respect for the personnel of the Commission. But, sometimes the posts are advertised and applications are called for. Often, if one makes an enquiry for forms in the taluk office or district office, they will not be available at all. By the time a form is secured and applied, the last date for applying would have been over. I think the Public Service Commission should look into all this and see that matters are properly amended.

As regards the working of the Sales-tax Department, I would be failing in my duty if I do not bring a matter to the notice of the concerned Minister. Central Sales-tax office came into being from the 1st of April and certain forms of declaration were to be given. The forms were not available even after the lapse of a month. I do not hold the Minister responsible for this. These are matters which are to be better managed by the Secretaries. Even these small matters are very important.

Then, Sir, I would say a word or two about the set-up of the Divisional

(SRI S. D. KOTHAVALE.)

Commissioners. I, for one, approve the present set-up. The Commissioners offices were in existence in the Bombay State, and we, in the old Bombay State, were of the opinion that the Commissioner's offices were not serving any useful purpose and the Government accepted that view and abolished them. A Director of Local Authority was created and a certain staff was maintained in the Secretariat and ultimately we found that there was no economy at all and larger amount was spent for the discharge of the functions that were previously being discharged by the Commissioners. Therefore, it would be wrong to abolish this office. It is said that there is a sort of centralisation of powers. If one goes and sees things, he will find that there is no such thing. The Commissioners, practically, do a sort of superintendence, a sort of discharge of function of a Divisional Authority and there is no question of centralisation of powers. But, there is a provision for better superintendence over the Collectors and the other subordinates there. I feel that the present set-up of the Divisional Commissioners is good and it should be maintained.

**Sri J. P. SARWESH** (Serum–Scheduled Castes).—Today, our State needs Ministers who can make maximum sacrifice. But we are very surprised to see that the Demand for the salaries of the Ministers is for Rs. 5,52,600. And how many are the Ministers ? They are only 11. But for the people of the Scheduled Castes whose total is more than 40 lakhs only Rs. 62 lakhs are provided. I thought that our Karnataka Ministers would go a step further than the Communist Kerala Ministers atleast, as far as the cut in the Salaries was concerned. When I read today in the Papers the news item that our Hon'ble Governor had not accepted his pay, I was really glad and the whole nation is proud of our Governor. We expected the same sacrifice, the people expected the same sincerity from our Hon'ble Ministers. Such a voluntary cut in the salary of the Ministers would have been an example to others. Further, Sir, before us, there are various programmes under the Sceond Five-Year Plan. I hope our present Ministry cannot fulfil them because, the ruling party in the Legislature has got divisions in itself. If it wants to sincerely implement the Second Five-Year Plan, it must agree for an all-Party Government which will infuse a new spirit in the whole of our people. Secondly what I wish to say, Sir, is that the Government servants from the integrated areas are discriminated. They are given a different treatment. There is much discontentment among them. I hope the Ministers and other Government officers will take this into consideration. Regarding the functioning of offices, it is a sorry face. Every day, people come from the villages and they go on giving applications. But the Tahsildars and the officers never take action upon them. Unless the Tahasildars and other high officers of the District do their duty in accordance with the spirit of the Constitution, we cannot expect any improvement in the prevailing condition in the country. Regarding General Administration, I am sorry, to say that it is an inefficient department.

*ಶ್ರೀ ಎಂ. ಲಿಂಗೇಗೌಡ (ಕನಕಪುರ).—ಸ್ವಾಮಿ, ಆಡಳಿತದ ವಿಷಯದ ಬಗ್ಗೆ ಮಾತನಾಡುವಾಗ, ಮೈಸೂರು ದೇಶವು ಅಡಳಿತದಲ್ಲಿ ಬಹಳ ಪ್ರಸಿದ್ಧಿಯಾಗಿದ್ದುದನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಹಿಂದೆ ಭಾರತ ದೇಶದ ನಾನಾ ಪ್ರಾಂತಗಳಿಂದ ಆಡಳಿತದಲ್ಲಿ ತರಬೇತು ಹೊಂದುವುದಕ್ಕೋಸ್ಕರ ಮೈಸೂರು ದೇಶಕ್ಕೆ ಅಧಿಕಾರಿಗಳನ್ನು ಕಳುಹಿಸುತ್ತಿದ್ದರು. ಆಗ ಇಷ್ಟು ಹಣವನ್ನು ಆಡಳಿತಕ್ಕೆ ಸರ್ಕಾರದವರು ಒದಗಿಸುತ್ತಿರಲಿಲ್ಲ. ಮಂತ್ರಿಮಂಡಲವೇ ಆಗಲಿ, ದಿವಾನರೇ ಆಗಲಿ ಯಾರೇ ಆಗಲಿ ಇಷ್ಟು ಕೋಟಿ ಹಣವನ್ನೂ ಒದಗಿಸುತ್ತಿರಲಿಲ್ಲ. ಈಗ ಇಷ್ಟು ಕೋಟಿ ಹಣವನ್ನು ಒದಗಿಸಿದ್ದರೂ ಕೂಡ, ನಮ್ಮ ಸರ್ಕಾರದ ಆಡಳಿತ ಬಹಳ ಹೊಲಸಾಗಿದೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಆಡಳಿತದ ಕ್ರಮ ಬಹಳ ಸಡಿಲವಾಗಿದೆ. ಜನಗಳಿಗೆ ಅನುಕೂಲ ದೊರಕುತ್ತಿಲ್ಲ. ಸಣ್ಣದರ್ಜೆ ನೌಕರರ ವಿಷಯದಲ್ಲಿ ಮಾತನಾಡುವುದಕ್ಕೆ ನಾನು ತಯಾರಿಲ್ಲ. ಸೆಕ್ರೆಟರಿಗಳ ಮಟ್ಟದಲ್ಲಿ ಎಲ್ಲ ಕೆಟ್ಟು ಹೋಗಿದೆ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಮಂತ್ರಿಮಂಡಲದವರು ಈ ಸೆಕ್ರೆಟರಿಗಳನ್ನು ಹತೋಟಿಯಲ್ಲಿಟ್ಟುಕೊಂಡು ಕೆಲಸಮಾಡುವುದಕ್ಕೆ ದಕ್ಷರಲ್ಲ ಎಂದು ವಿಷಾದದಿಂದ ನಾನು ಹೇಳಬೇಕಾಗಿದೆ. ಕಾರಣವಿಷ್ಟು: ಬಹುಶಃ ಚೀಫ್ ಸೆಕ್ರೆಟರಿಯವರಿಗೆ ತಿಂಗಳಿಗೆ ಮೂರೂವರೆ ಸಾವಿರ ರೂಪಾಯಿಗಳ ಸಂಬಳವನ್ನು ನಮ್ಮ ಹಣದಿಂದ ಕೊಡುತ್ತಿದ್ದಾರೆ. ಮಂತ್ರಿಗಳು ಒಂದುಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಚೀಫ್ ಸೆಕ್ರೆಟರಿಗಳು ಮಾಡಿದುದನ್ನು ಇವರು

ಒಪ್ಪಿಕೊಳ್ಳುತ್ತಾರೆ, ಇವರ್ಗೆ ಧೈರ್ಯವಾಗಿ ಕೆಲಸಮಾಡುವುದಿಲ್ಲವೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಏಕೆ ಈ ರೀತಿ ಮಾಡುತ್ತೀರೆಂದು ಕೇಳಿದರೆ, ಪ್ರಾಯಶಃ ನಾವು ಏನು ಮಾಡೋಣ, ಅವರನ್ನು ತೆಗೆದು ಹಾಕೋಣವೆಂದರೆ ಅವರು ಐ. ಎ. ಎಸ್. ಅಧಿಕಾರಿಗಳು, ಇಂಡಿಯಾ ಸರ್ಕಾರದವರು ಅವರನ್ನು ಕಳುಹಿಸುತ್ತಾರೆ, ಅವರು ಬಹಳ ದಕ್ಷರು, ಅವರು ನಮ್ಮ ಮೇಲೆ force ಮಾಡುತ್ತಾರೆ ಎಂದು ಹೇಳುತ್ತಾರೆಯೋ ಏನೋ. ಆ ರೀತಿ ಹೇಳುವುದಾದರೆ, ಅವರಿಗೆ ಕೊಡತಕ್ಕ ಹಣ ನಮ್ಮದಾದುದರಿಂದ, ಅವರು ಸೆಕ್ರೆಟರಿಗಳನ್ನು ಸ್ವಲ್ಪ ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಅವರಿಗೆ ಬೇಕಾದಂಥ ಸೆಕ್ರೆಟರಿಗಳನ್ನಿಟ್ಟುಕೊಂಡು ಕೆಲಸ ಮಾಡಬೇಕು. ನಮ್ಮ ಸೆಕ್ರೆಟರಿಗಳೆಲ್ಲರೂ ದಕ್ಷರಿದ್ದಾರೆ. ನಮ್ಮ ದೇಶವನ್ನು ಆಡಳಿತ ದೃಷ್ಟಿಯಿಂದ ಪ್ರಗತಿ ಹೊಂದುವಂತೆ ಮಾಡಿರುವ ಸೆಕ್ರೆಟರಿಗಳಿಗೆ, ಹಿಂದಿನಿಂದಲೂ ಮೈಸೂರಿನಲ್ಲಿದ್ದ ಸೆಕ್ರೆಟರಿಗಳಿಗೆ ಇವರು ಕೊಡುತ್ತಿರತಕ್ಕ ಸಂಭಾವನೆಯಾದರೂ ಏನು? ಈ ರೀತಿಯಾಗಿ ಸೆಕ್ರೆಟರಿಗಳಿಗೂ ಇತರ ಅಧಿಕಾರಿಗಳಿಗೂ ಕೊಡುವ ಸಂಬಳ ಸಾರಿಗೆಗಳಲ್ಲಿ ಬಹಳ ವ್ಯತ್ಯಾಸವಿರುವುದರಿಂದ ಎಲ್ಲ ಕಡೆಗೂ discontentment, ಅತೃಪ್ತಿ ಇದೆ. ಯಾವ ಇಲಾಖೆಯನ್ನು ತೆಗೆದುಕೊಂಡರೂ, ರೆವಿನ್ಯೂ ಇಲಾಖೆ, ಪೋಲೀಸ್ ಇಲಾಖೆ, ಆರೋಗ್ಯ ಇಲಾಖೆ, ಹೀಗೆ ಯಾವ ಇಲಾಖೆಯನ್ನು ತೆಗೆದುಕೊಂಡರೂ, ಎಲ್ಲ ಇಲಾಖೆಗಳಲ್ಲಿಯೂ ಕೂಡ ಹಳೆಯ ಮೈಸೂರಿನ ಅಧಿಕಾರಿಗಳನ್ನು ಇವರು ಮಾಂಬಿಟ್ಟಿದ್ದಾರೆಂದರೆ ತಪ್ಪಾಗಲಾರದು. ಸರ್ಕಾರದವರು ಇದನ್ನು ಆದಷ್ಟು ಜಾಗ್ರತೆ ದಯವಿಟ್ಟು ಸರಿಮಾಡಬೇಕೆಂದು ನಾನು ವಿನಯದಿಂದ ಬೇಡಿಕೊಳ್ಳುತ್ತೇನೆ. ನಮ್ಮ ಮುಖ್ಯ ಮಂತ್ರಿಗಳು ಬಹಳ ಒಳ್ಳೆಯವರು. ಆ ವಿಷಯದಲ್ಲಿ ಯಾವ ವಿಧವಾದ ಅನುಮಾನವನ್ನೂ ಶಂಕೆಯನ್ನೂ ಯಾರೂ ಸಹ ಪಡಬೇಕಾಗಿಲ್ಲ. ಅವರಲ್ಲಿ ನಾವು ಸಂಪೂರ್ಣ ನಂಬಿಕೆಯನ್ನಿಟ್ಟುಕೊಂಡಿದ್ದೇವೆ. ಬಹಳ ಒಳ್ಳೆಯತನ ಆಡಳಿತವನ್ನು ಬಿಗಿಮಾಡುವುದಕ್ಕೆ ಸ್ವಲ್ಪ ಸರಿ ಅಲ್ಲ. ಈ ಒಳ್ಳೆಯತನವೇ ಆಡಳಿತ ಬಿಗಿಯಾಗಿರುವುದಕ್ಕೆ ಅಡ್ಡಿ ಬಂದಿರುವುದು. ಆ ಮುಖ್ಯಮಂತ್ರಿಗಳಾಗಿರುವವರನ್ನು ಒಂದು ಮಠದಲ್ಲಿ ಬೇಕಾದರೆ ಇಟ್ಟುಕೊಂಡು ಪೂಜೆ ಮಾಡಬಹುದು; ಅಂಥ ಸುದ್ಗುಣಗಳು ಅವರಲ್ಲಿವೆ. ಆಡಳಿತವನ್ನು ಬಿಗಿಯಾಗಿ ನಡೆಸುವುದಕ್ಕೆ ಸ್ವಲ್ಪ ಶಕ್ತಿ ಬೇಕು. ಇದಕ್ಕೆ ನಾನು ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಹಾಸನಕ್ಕೆ ಮುಖ್ಯಮಂತ್ರಿಗಳು ಪ್ರವಾಸ ಹೋಗಿದ್ದಾಗ ಅಲ್ಲಿನ ಪ್ರವಾಸಿಗರ ಬಂಗಲೆಯ ಕೇರ್ ಟೇಕರ್ ಪೇಟೆಗೆ ಹೋಗಿದ್ದನು. ಆಗ ಮುಖ್ಯಮಂತ್ರಿಗಳು ಅವನು ಪೇಟೆಯಿಂದ ವಾಪಸ್ಸು ಬರುವವರೆಗೂ ಸುಮಾರು ಹದಿನೈದು ನಿಮಿಷಗಳ ಕಾಲ ಕಾದು ನಿಂತಿದ್ದರು, ಎಂದು ಕೇಳಿದ್ದೇನೆ. ಈ ರೀತಿಯಾಗಿ ಕೇರ್ ಟೇಕರ್ ಆದವನು ಬರುವವರೆಗೂ ಹೊರಗಡೆಯೇ ಕಾದಿದ್ದು, ಅವನು ಬಂದಮೇಲೆ ಎಲ್ಲಿಗೆ ಹೋಗಿದ್ದೆಯಪ್ಪ ಎಂದು ಎಲ್ಲವನ್ನೂ ಕೇಳಿ ಅನಂತರ ಒಳಗೆ ಹೋದರಂತೆ.

ಶ್ರೀ ಎಚ್. ಎಸ್. ರುದ್ರಪ್ಪ.—ಅವರು ಅಲ್ಲಿಗೆ ಹೋಗಬೇಕಾಗಿದ್ದ ಕಾಲಕ್ಕಿಂತ ಮುಂಚಿತವಾಗಿಯೇ ಹೋದರು ಎಂದು ಕಾಣುತ್ತದೆ.

ಶ್ರೀ ಎಂ. ಲಿಂಗೇಗೌಡ.—ಇರಬಹುದು. ಅವರು ಅರ್ಧಗಂಟೆ ಮುಂಚಿತವಾಗಿ ಹೋಗಿರಬಹುದು. ಜಿಲ್ಲಾಧಿಕಾರಿಗಳು ಮೊದಲಾದವರು ಮಂತ್ರಿಗಳು ಬರುತ್ತಾರೆಂದರೆ ರಾತ್ರಿಯಿಂದ ಕಾಯುತ್ತಿರುತ್ತಾರೆಂಬುದು ತಮಗೆಲ್ಲ ಗೊತ್ತಿದೆ. ಮುಖ್ಯಮಂತ್ರಿಗಳಲ್ಲಿರುವಂಥ ಒಳ್ಳೆಯತನದಿಂದ ಸರ್ಕಾರದ ಆಡಳಿತ ಬಿಗಿಯಾಗಿರುವುದಕ್ಕೆ ಬಹಳ ಕಷ್ಟವಾಗುತ್ತದೆ. ಅಧಿಕಾರಿಗಳಲ್ಲಿರುವ discontentment ಏನಿದೆಯೋ ಅದನ್ನು ತಾವು ದಯವಿಟ್ಟು ಆದಷ್ಟು ಜಾಗ್ರತೆ ಸರಿಪಡಿಸಬೇಕು.

ಇನ್ನೊಂದು ವಿಷಯ: ಅಧಿಕಾರಿಗಳ date of birth ವಿಚಾರವಾಗಿ ಹೇಳುವುದಾದರೆ, ಹಿಂದೆ ಕೆಲಸಕ್ಕೆ ನೇಮಕ ಮಾಡುವಾಗ ಅವರ ಜಾತಕಗಳನ್ನು ತೆಗೆದುಕೊಂಡು ಅದರ ಆಧಾರದ ಮೇಲೆ ಹುಟ್ಟಿದ ತಾರೀಖನ್ನು ಸರ್ವಿಸ್ ರಿಜಿಸ್ಟರಿನಲ್ಲಿ ನಮೂದು ಮಾಡಿದ್ದಾರೆ. ಈ ರೀತಿ ಹತ್ತಾರು ವರ್ಷಗಳ ಹಿಂದೆ ನಡೆದಿರುವುದನ್ನು ಈಗ ನಾಲ್ಕಾರು ವರ್ಷಗಳಿಂದೀಚೆಗೆ, ಸದರಿ ಅಧಿಕಾರಿಗಳು ವಿದ್ಯಾಭ್ಯಾಸ ಮಾಡಿದಂಥ ಪಾಠಶಾಲೆಗಳಲ್ಲಿ ಹುಟ್ಟಿದ ತಾರೀಖನ್ನು ಯಾವ ರೀತಿ ಕೊಟ್ಟಿದ್ದಾರೆಂದು compare ಮಾಡಿ, ಯಾರು ಯಾರು ಹುಟ್ಟಿದ ತಾರೀಖಿನಲ್ಲಿ ವ್ಯತ್ಯಾಸ ಕೊಟ್ಟಿದ್ದಾರೆಯೋ, ಸ್ಕೂಲಿನ ರಿಕಾರ್ಡುಗಳ ಪ್ರಕಾರ ತೆಗೆದುಕೊಂಡರೆ ಯಾರು ಯಾರಿಗೆ ಹೆಚ್ಚು ವಯಸ್ಸಾಗುತ್ತದೆಯೋ ಅಂಥವರನ್ನೆಲ್ಲ ಆ ರಿಕಾರ್ಡುಗಳ ಆಧಾರದ ಮೇಲೆ 55ನೆಯ ವಯಸ್ಸಿಗೆ ನಿವೃತ್ತಿ ಮಾಡಿ ಮನೆಗೆ ಕಳುಹಿಸುವ ಒಂದು ಆರ್ಡರ್ ಇದೆ. ಈ ರೀತಿ ಕೆಲವರನ್ನು ಕಳುಹಿಸಿದ್ದಾರೆ. ಮತ್ತೆ ಕೆಲವರನ್ನು ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ರೀತಿ ಮಾಡುವ ಹಾಗಿದ್ದರೆ ಹಳೆಯ ಮೈಸೂರಿನವರಿಗೆ ಮತ್ತು ಹೊಸದಾಗಿ ಬಂದಿರುವ ವರಿಗೂ ಎಲ್ಲರಿಗೂ ಅನ್ವಯವಾಗುವಂತೆ ಮಾಡಿ. ಇಲ್ಲದೆ ಇದ್ದರೆ ಆ ಪದ್ಧತಿಯನ್ನೇ ಬಿಟ್ಟುಬಿಡಿ. ಈ ಪದ್ಧತಿಯಿಂದ ಅಧಿಕಾರಿಗಳಲ್ಲಿ discontentment ಇದೆ. ಆದುದರಿಂದ ಈಗ ವಿಶಾಲ ಮೈಸೂರಿಗೆ ಅನ್ವಯಿಸುವಂತೆ ಹೊಸದಾಗಿ ನಿಯಮ ನಿಬಂಧನೆಗಳನ್ನು ಮಾಡಬೇಕಾಗಿರುವುದರಿಂದ ಈ ಕೆಲಸವು ಪೂರ್ತಿಯಾಗುವವರೆಗೂ date of birth ವಿಚಾರದಲ್ಲಿ ಅನುಸರಿಸುತ್ತಿರುವ ಪದ್ಧತಿಯನ್ನು ನಿಲ್ಲಿಸಿ, ಅಧಿಕಾರಿಗಳಲ್ಲಿರತಕ್ಕ ಅತೃಪ್ತಿಯನ್ನು ಕಡಮೆ ಮಾಡಬೇಕೆಂದು ಹೇಳುತ್ತೇನೆ. ಅನೇಕ ಸಂದರ್ಭಗಳಲ್ಲಿ ಈ ಸಭೆಯ ಸದಸ್ಯರು ಮಂತ್ರಿಗಳಿಗೆ ಕಾಗದಗಳನ್ನು ಬರೆದರೆ ಅವರಿಂದಲೇ ಉತ್ತರ ಬರುವುದಿಲ್ಲ. ಅಧಿಕಾರಿಗಳು ಕಾಗದಗಳಿಗೆ ಜವಾಬು ಕೊಡುವದಕ್ಕೆ ಪ್ರಯತ್ನ ಮಾಡುವುದಿಲ್ಲ. ನೀವೇ ಹೀಗಾದರೆ ನಿಮ್ಮ ಕೈಕೆಳಗಿನ ಅಧಿಕಾರಿಗಳು ಹೇಗೆ ಬಿಗಿಯಾಗಿ ಇರುತ್ತಾರೆ? ಆಡಳಿತದಲ್ಲಿ ಬಿಗಿ ಇರುವಂತೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸಬ್‌ಡಿವಿಜನ್ ಕೋರ್ಟಿನಿಂದ ನೇರವಾಗಿ ಕಾಗದ ಸರ್ಕಾರಕ್ಕೆ ಬರುತ್ತದೆ. ನೀವು ತಡೆ ಆಜ್ಞೆ ಕೊಡುತ್ತೀರಿ. ಈ ರೀತಿ ಮಾಡುವದು ತಪ್ಪು ಎಂದು ನಿಮ್ಮ ಸೆಕ್ರೆಟರಿಯವರಿಗೆ ಹೇಳುವುದಿಲ್ಲ. ಅವರು ಹೇಳಿದರೂ ನೀವು ಕೇಳುವುದಿಲ್ಲ. ದಾಕ್ಷಿಣ್ಯದಿಂದ ಆಡಳಿತ ನಡೆಸುವುದನ್ನು ಬಿಟ್ಟುಬಿಡಬೇಕು. ಆಗ ತಾನೆ ದೇಶಕ್ಕೂ ಒಳ್ಳೆಯದು ನಿಮಗೂ ಒಳ್ಳೆಯದು, ನಮಗೂ ಒಳ್ಳೆಯದು ಆಗುತ್ತದೆ. ಒಂದು ಖಚಿತವಾದ ಕಾರ್ಯಕ್ರಮವನ್ನು ಹಾಕಿಕೊಂಡು ನಿಮ್ಮ ನಿಮ್ಮ ಪ್ರತಿಯೊಂದು ಇಲಾಖೆಯಲ್ಲೂ ನಡೆಯುತ್ತಿರುವ ಕೆಲಸವನ್ನು ನಿರೀಕ್ಷಿಸಬೇಕು. ಪ್ರತಿಯೊಂದು ಡಿಸ್ಟ್ರಿಕ್ಟನ್ನು ಒಬ್ಬೊಬ್ಬರು ಹಂಚಿಕೊಂಡು ಕೆಲಸ ಮಾಡಬೇಕು. ಇದರಿಂದ ಹೆಚ್ಚು ಹಣ ಖರ್ಚಾಗುವುದಿಲ್ಲ.

(ಶ್ರೀ ಎಂ. ಲಿಂಗೇಗೌಡ.)

ನಾವು ನಿಮ್ಮಿಂದ ಬಹಳ ನಿರೀಕ್ಷಿಸುತ್ತೇವೆ. ಅಂಕಿ ಅಂಶಗಳನ್ನು ತಿಳಿದುಕೊಳ್ಳದೆ ವಿರೋಧ ಪಕ್ಷದ ಸದಸ್ಯರು ಮಾತನಾಡುತ್ತಾರೆ ಎಂದು ಅರ್ಥ ಸಚಿವರಾದ ಮಾನ್ಯ ಶ್ರೀ ಟಿ. ಮರಿಯಪ್ಪ ಅವರು ಹೇಳಿದರು. ಅವರೇನೋ ಈ ಸಭೆಯಲ್ಲಿ 27 ವರ್ಷ ಮಣ್ಣು ಹಾಕಿದ್ದೇನೆ ಎಂದು ಅಂದರು. ಶ್ರೀ ಮರಿಯಪ್ಪ ಅವರು ಬಹಳ ಚೆನ್ನಾಗಿ ಮಾತನಾಡಿದರು. ಮಾತನಾಡುವುದರಲ್ಲಿ ಹಾವಾಡಿಗರ ಹಾಗೆ ಅವರು ಮಾಯಾವಿಗಳು. ದಯವಿಟ್ಟು ಮನಸ್ಸು ಮಾಡಿ ಮಿತವ್ಯಯವನ್ನು ಜಾರಿಗೆ ತರುವಂತೆ ಮಾಡಬೇಕು. ಮಂತ್ರಿಗಳು ತಮ್ಮ ತಮ್ಮ ಇಲಾಖೆಗಳಲ್ಲಿ ಎಷ್ಟು ಮಿತವ್ಯಯ ಮಾಡಲು ಸಾಧ್ಯವಿದೆ ಎಂಬುದನ್ನು ಯೋಚಿಸಿ ಮಿತವ್ಯಯವನ್ನು ಜಾರಿಗೆ ತರಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಹೆಚ್ಚಿಗೆ ಮಾತನಾಡುವುದಕ್ಕೆ ನನಗೆ ಅವಕಾಶವಿಲ್ಲ. ಆದಷ್ಟು ಮಟ್ಟಿಗೆ ಆಡಳಿತದ ಖರ್ಚನ್ನು ಖೋತಾ ಮಾಡಬೇಕೆಂದು ತಮಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ದೊಡ್ಡ ಅಧಿಕಾರಿಗಳ ಪರಮಾವಧಿ ಸಂಬಳ ಒಂದು ಸಾವಿರ ರೂಪಾಯಿ ಇರಲಿ. ಸರ್ಕಾರಿ ನೌಕರರ ಕನಿಷ್ಠ ಸಂಬಳ ಒಂದು ನೂರು ರೂಪಾಯಿ ಇದ್ದು ಒಂದು ಸಾವಿರ ರೂಪಾಯಿ ಪರಮಾವಧಿ ಸಂಬಳವು ಇರಲಿ. ಈ ಕೆಲಸವನ್ನು ಧೈರ್ಯದಿಂದ ಮಾಡಿ. ಯಾರೂ ನಿಮ್ಮನ್ನು ಬೈಯುವದಿಲ್ಲ; ಎಲ್ಲರೂ ಹೊಗಳುತ್ತಾರೆ. ದೇಶದ ಉದ್ಧಾರ ಮಾಡಬೇಕು. ತಾವು ಒಳ್ಳೆಯ ಹೆಸರು ಗಳಿಸಬೇಕು. ಸಮಾಜವಾದಿ ಸಮಾಜ ರಚನೆಯ ಸ್ಥಾಪನೆಯ ಉದ್ದೇಶದ ಸಾಧನೆಗೆ ಸಹಾಯ ಮಾಡಿದಂತಾಗುತ್ತದೆ.

---

*[Sri N. O. Samaji spoke in Marathi. His speech is printed in the Appendix number to this volume.]*

---

## Business of the House.

MR. SPEAKER.—Mr. Mohsin will be the next speaker. He will speak tomorrow. The discussion on this Demand will continue tomorrow for some time and then the next Demand will be taken up.

Before we rise, I desire to mention one thing. I have received a letter from the President of the Chamber of Commerce that tomorrow at 5-30 P.M. there is a function and he requests that the proceedings of the House may be so adjusted that the Members would be able to go there. I do not know what I should do. I would like to have the views of the Hon'ble Members in this matter.

AN HON'BLE MEMBER.—We will meet from 12 to 5 tomorrow, Sir.

SRI B. K. PUTTARAMIYA.—We can meet from 12 to 5 tomorrow, Sir.

SRI C. J. MUCKANNAPPA.—12 to 5 is convenient, Sir.

SRI H. S. RUDRAPPA.—I have no objection.

MR. SPEAKER.—I think I must say that such requests from the public should not be made henceforth. As the Chamber of Commerce is an important body and as all the Hon'ble Members have agreed that there may be a change in the hours, we will sit tomorrow from 12 NOON and rise at 5 P.M.

I would like also to say one thing. In order to give more time to the Members, I would suggest that tomorrow we may not rise for the lunch recess. Will it be agreeable to the Hon'ble Members ?

HON'BLE MEMBERS.—Yes.

MR. SPEAKER.—Of course, those Hon'ble Members who want to have their refreshments—tea, coffee, etc., can go and have it. But the House will continue its sitting. I have also an advantage. I will get my Deputy tomorrow.

The House will now rise and meet tomorrow as a special case at 12 NOON and rise at 5 P.M.

---

*The House adjourned at Ten Minutes past Seven of the clock to meet again at Twelve of the Clock on Friday, the 19th July 1957.*

---

WD 3619—GPB—900—27.11.57